ಬೀದರ * ಕಲಬುರಗಿ * ಯಾದಗಿರಿ * ರಾಯಚೂರು * ಕೊಪ್ಪಳ * ಬಳ್ಳಾರಿ * ಬಾಗಲಕೋಟೆ * ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ

Postal Registration No. BDR/054/2026-2027 EMAIL ID:mallammanudi@gmail.com E- Paper WWW.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

Mallammanudi Regional NewsPaper ಸಂಪಾದಕರು: ರಮೇಶರೆಡ್ಡಿ

ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮೊ.9448604450

VOLUME-ಸಂಪುಟ:12 | ISSUE- ಸಂಚಿಕೆ: 339 | PAGE- ಪುಟ 8 | ಗುರುವಾರ 09.01.2025 ಬೀದರ | RNINO:KARKAN/2011/48371 | RS.ಬೆಲೆ 2/-

## ರಸ್ತೆ ಅಪಘಾತ ಸಂತ್ರಸ್ತರಿಗೆ 1.5 ಲಕ್ಷ ರೂಪಾಯಿ ನಗದು ರಹಿತ ಚಿಕಿತ್ಸೆ

ಮಲ್ಲಮ್ಮ ನುಡಿ ವಾರ್ತೆ ನವದೆಹಲಿ:ಜ.8: ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಮಾರ್ಚ್ ವೇಳೆಗೆ ರಸ್ತೆ ಅಪಘಾತ ಸಂತ್ರಸ್ತರಿಗೆ ನಗದು ರಹಿತ ಚಿಕಿತ್ಸೆ ನೀಡುವ ರಾಷ್ಟ್ರವ್ಯಾಪಿ ಯೋಜನೆಯನ್ನು ಭಾರತ ಸರ್ಕಾರ ಪ್ರಾರಂಭಿಸಲಿದೆ



ಎಂದು ಘೋಷಿಸಿದರು. ಈ ಉಪಕ್ರಮದ ಅಡಿಯಲ್ಲಿ ಅಪಘಾತದ ನಂತರ ಏಳು ದಿನಗಳವರೆಗೆ ಸಂತ್ರಸ್ತರು 1.5 ಲಕ್ಷ ರೂ.ವರೆಗೆ ವೈದ್ಯಕೀಯ ಚಿಕಿತ್ಸೆಗೆ ಅರ್ಹರಾಗಿರುತ್ತಾರೆ. ಈ ಯೋಜನೆಯು ಎಲ್ಲಾ ರೀತಿಯ ರಸ್ತೆಗಳಲ್ಲಿ ಮೋಟಾರು ವಾಹನಗಳಿಂದ ಉಂಟಾಗುವ ಅಪಘಾತಗಳನ್ನು ಒಳಗೊಂಡಿರುತ್ತದೆ.

ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ(ಓಊಂ) ಪೊಲೀಸ್, ಆಸ್ಪತ್ರೆಗಳು ಮತ್ತು ರಾಜ್ಯ ಆರೋಗ್ಯ ಏಜೆನ್ಸಿಗಳೊಂದಿಗೆ ಕಾರ್ಯಕ್ರಮದ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುತ್ತದೆ. ಇದು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಇ-ವಿವರವಾದ ಅಪಘಾತ ವರದಿ (ಜಆಂಖ) ಅಪ್ಲಿಕೇಶನ್ ಅನ್ನು ಓಊಂನ ವಹಿವಾಟು ನಿರ್ವಹಣಾ ವ್ಯವಸ್ಥೆಯೊಂದಿಗೆ ಸಂಯೋಜಿಸುವ ಖಖಿ ಪ್ಲಾಟ್‌ಫಾರ್ಮ್ ಮೂಲಕ ಕಾರ್ಯನಿರ್ವಹಿಸುತ್ತದೆ.

ಈ ಉಪಕ್ರಮವನ್ನು 2024ರ ಮಾರ್ಚ್ 14ರಂದು ಚಂಡೀಗಢದಲ್ಲಿ ಪ್ರಾಯೋಗಿಕ ಯೋಜನೆಯಾಗಿ ಪ್ರಾರಂಭಿಸಲಾಗಿದ್ದು ನಂತರ ಆರು ಇತರ ರಾಜ್ಯಗಳಿಗೆ ವಿಸ್ತರಿಸಲಾಯಿತು. ಅಪಘಾತದ ನಂತರ ನಿರ್ಣಾಯಕ ಗೋಲ್ಡನ್ ಅವರ್ ಸಮಯದಲ್ಲಿ ಸಕಾಲಿಕ ವೈದ್ಯಕೀಯ ಆರೈಕೆಯನ್ನು ಖಚಿತಪಡಿಸಿಕೊಳ್ಳುವುದು ಇದರ ಗುರಿಯಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಗಡ್ಕರಿ, ಪೈಲಟ್‌ಗಳ ನಿಯಮಗಳಂತೆಯೇ ವಾಣಿಜ್ಯ ಚಾಲಕರಿಗೆ ಕೆಲಸದ ಸಮಯವನ್ನು ನಿಯಂತ್ರಿಸುವ ನೀತಿಗಳನ್ನು ಅಭಿವೃದ್ಧಿಪಡಿಸುವುದು, ಚಾಲಕನ ಆಯಾಸವನ್ನು ನಿಭಾಯಿಸುವುದು ಸೇರಿದಂತೆ ರಸ್ತೆ ಸುರಕ್ಷತೆ ಸವಾಲುಗಳನ್ನು ನಿಭಾಯಿಸಲು ನಡೆಯುತ್ತಿರುವ ಪ್ರಯತ್ನಗಳನ್ನು ಎತ್ತಿ ತೋರಿಸಿದರು. ಇದು ಮಾರಣಾಂತಿಕ ಅಪಘಾತಗಳಿಗೆ ಗಮನಾರ್ಹ ಕಾರಣವಾಗಿದೆ. ದೇಶದಲ್ಲಿ 22 ಲಕ್ಷ ಚಾಲಕರ ಕೊರತೆಯನ್ನು ಅವರು ಒಪ್ಪಿಕೊಂಡಿದ್ದಾರೆ.

2025ರ ಜನವರಿ 6-7ರಂದು ನಡೆದ ಎರಡು ದಿನಗಳ ಕಾರ್ಯಾಗಾರದಲ್ಲಿ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ರಸ್ತೆ ಸಾರಿಗೆಯನ್ನು ಸುಧಾರಿಸಲು ಪ್ರಮುಖ ಕ್ರಮಗಳನ್ನು ಚರ್ಚಿಸಿತು. ವಾಹನ ಸ್ಕ್ರ್ಯಾಪಿಂಗ್ ನೀತಿಯನ್ನು ತ್ವರಿತಗೊಳಿಸುವುದು, ಪಿಯುಸಿಸಿ 2.0ರ ರಾಷ್ಟ್ರವ್ಯಾಪಿ ಅನುಷ್ಠಾನ, ಃಖ-ಗಿಖಖ ಮಾನದಂಡಗಳಿಗೆ ಸಮಯಾವಧಿಗಳು ಮತ್ತು ಮಾಲಿನ್ಯವನ್ನು ಕಡಿಮೆ ಮಾಡುವಲ್ಲಿ ಅವುಗಳ ನಿರೀಕ್ಷಿತ ಪ್ರಭಾವವನ್ನು ಒಳಗೊಂಡಿತ್ತು. ಭಾರತದಾದ್ಯಂತ ಚಾಲಕರ ತರಬೇತಿ ಸಂಸ್ಥೆಗಳನ್ನು (ಆಖಿಖ) ಸ್ಥಾಪಿಸುವ ಯೋಜನೆಗಳು, ಈ ಕೇಂದ್ರಗಳನ್ನು ಸ್ಥಾಪಿಸಲು

(2ನೇ ಪುಟ ನೋಡಿ)

## ಶಾ ಹೇಳಿಕೆ ಖಂಡಿಸಿ ಇಂದು ಬೀದರ ಬಂದ್:

## ಶಾಲಾ,ಕಾಲೇಜುಗಳಿಗೆ ರಜೆ




ಮಲ್ಲಮ್ಮ ನುಡಿ ವಾರ್ತೆ ಬೀದರ.ಜ.08: ಸಂಸತ್ತಿನಲ್ಲಿ ಬಿಆರ್ ಅಂಬೇಡ್ಕರ್ ಅವರ ಬಗ್ಗೆ ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ವಿಪಕ್ಷಗಳು ಮುಗಿ ಬಿದ್ದಿವೆ. ಇನ್ನು ಅಮಿತ್ ಶಾ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು, ಅವರ ರಾಜೀನಾಮೆ ಪಡೆದು, ಗಡಿಪಾರು ಮಾಡಬೇಕು ಎಂದು ಆಗ್ರಹಿಸಿ ವಿವಿಧ ದಲಿತ ಹಾಗೂ ಪ್ರಗತಿಪರ ಸಂಘಟನೆಗಳು ಈಗಾಗಲೆ ಹಲವು ಕಡೆ ಬಂದ್‌ಗೆ ಕರೆಕೊಟ್ಟಿತ್ತು. ಇದೀಗ ನಾಳೆ ವಿವಿಧ ದಲಿತಪರ ಸಂಘಟನೆಗಳ ಒಕ್ಕೂಟದಿಂದ ಇದೇ ವಿಷಯಕ್ಕೆ ಸಂಬಂಧಿಸಿ ಬೀದರ್‌ನಲ್ಲಿ ಬಂದ್‌ಗೆ ಕರೆ ನೀಡಲಾಗಿದೆ.


ಬೀದರ್‌ನಲ್ಲಿ ಜ.9 ರಂದು ಅಮಿತ್ ಶಾ, ಬಿಆರ್ ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಖಂಡಿಸಿ ವಿವಿಧ ದಲಿತಪರ ಸಂಘಟನೆಗಳ ಒಕ್ಕೂಟ ಬಂದ್‌ಗೆ ಕರೆ ನೀಡಿದೆ.

**ಶಾಲಾ-ಕಾಲೇಜುಗಳಿಗೆ ರಜೆ!**

ಬೀದರ್‌ನಲ್ಲಿ ಗೃಹ ಸಚಿವ ಅಮಿತ್ ಶಾ ಅವರ ಸಂವಿಧಾನ ಶಿಲ್ಪಿ ಡಾ. ಬಿಆರ್ ಅಂಬೇಡ್ಕರ್ ಹೇಳಿಕೆ ಖಂಡಿಸಿ ವಿವಿಧ ದಲಿತಪರ ಸಂಘಟನೆಗಳ ಒಕ್ಕೂಟ ಬಂದ್‌ಗೆ ಕರೆ ನೀಡಿದೆ. ಈ ಹಿನ್ನೆಲೆ ಬೀದರ್‌ನಲ್ಲಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ. ಬಂದ್‌ಗೆ ಕರೆ ನೀಡಿರುವ ಕಾರಣ ಬೀದರ್ ತಾಲೂಕಿನ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ.

(2ನೇ ಪುಟ ನೋಡಿ)

## ಬಾಗಲಕೋಟೆಯಲ್ಲೂ ಲೋಕಾ ದಾಳಿ



ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ,ಜ.8: ರಾಜ್ಯದ ವಿವಿಧೆಡೆ ಬುಧವಾರ ಲೋಕಾಯುಕ್ತ ದಾಳಿ ನಡೆದಿರುವಂತೆ ಬಾಗಲಕೋಟೆಯಲ್ಲೂ ಬೆಳ್ಳಂಬೆಳಿಗ್ಗೆ ಲೋಕಾದಾಳಿ ನಡೆದಿದೆ.

ಗದಗ-ಬೆಟಗೇರಿ ನಗರಸಭೆ ಕಾರ್ಯನಿರ್ವಾಹಕ ಇಂಜನೀಯರ್ ಹುಚ್ಚೇಶ ಬಂಡಿವಡ್ಡರ ಅವರ ಗದಗ ನಿವಾಸದಲ್ಲಿ ಬೆಳಿಗ್ಗೆ ಲೋಕಾಯುಕ್ತ ದಾಳಿ ನಡೆ-ಯುತ್ತಿದ್ದಂತೆ ಇತ್ತ ಬಾಗಲಕೋಟೆ ತಾಲೂಕಿನ ಸೀಮಿಕೇರಿಯಲ್ಲಿರುವ ಹುಚ್ಚೇಶ ಸಹೋದರ ರಾಜಶೇಖರ ಬಂಡಿವಡ್ಡರ ಮನೆಯ ಮೇಲೂ ದಾಳಿ ನಡೆದಿದೆ.

ಹುಚ್ಚೇಶ ಬಂಡಿವಡ್ಡರ ಅವರ ವಿರುದ್ಧ ಅಕ್ರಮ ಆಸ್ತಿ ಗಳಿಕೆ ಆರೋಪದ ಹಿನ್ನೆಲೆಯಲ್ಲಿ

(2ನೇ ಪುಟ ನೋಡಿ)

## ಲೋಕಾಯುಕ್ತ ದಾಳಿ: ಸಣ್ಣ ನೀರಾವರಿ ಇಲಾಖೆಯ ಜೆಇ ಕಚೇರಿ, ಮನೆ ಶೋಧ





ರವೀಂದ್ರ ಹನುಮಂತಪ್ಪ ಮೇತ್ರೆ ಮನೆಯಲ್ಲಿ ಲೋಕಾಯುಕ್ತ ಪೊಲೀಸರಿಂದ ಶೋಧ

ಮಲ್ಲಮ್ಮ ನುಡಿ ವಾರ್ತೆ ಬೀದರ.ಜ.08: ಬಸವಕಲ್ಯಾಣದಲ್ಲಿ ಸಣ್ಣ ನೀರಾವರಿ ಇಲಾಖೆಯ ಕಿರಿಯ ಎಂಜಿನಿಯರ್ ರವೀಂದ್ರ ಹನುಮಂತಪ್ಪ ಮೇತ್ರೆ ಎಂಬುವರ ಕಚೇರಿ ಮತ್ತು ನಿವಾಸಗಳ ಮೇಲೆ ಪೊಲೀಸರು ಬುಧವಾರ ಏಕಕಾಲಕ್ಕೆ ದಾಳಿ ನಡೆಸಿ ಶೋಧ ನಡೆಸಿದರು. ನಗರ ಹೊರವಲಯದ ಚಿಕ್ಕಪೇಟೆ ನಿವಾಸ, ಭಾಲ್ಕಿ ತಾಲ್ಲೂಕಿನ ಡೋಣಗಾಪೂರ ಮನೆ ಹಾಗೂ ಬಸವಕಲ್ಯಾಣದ ನೀರಾವರಿ ಕಚೇರಿಯಲ್ಲಿ ಮೂರು ಪ್ರತ್ಯೇಕ ತಂಡಗಳು ದಾಳಿ ನಡೆಸಿ, ದಾಖಲೆಪತ್ರಗಳನ್ನು ಜಾಲಾಡಿವೆ.

ಅಕ್ರಮ ಆಸ್ತಿ ಗಳಿಸಿರುವ ಆರೋಪಗಳ ಕಾರಣಕ್ಕಾಗಿ ಲೋಕಾಯುಕ್ತ ಡಿವೈಎಸ್ಪಿ ಹನುಮಂತರೆಡ್ಡಿ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಬೀದರ್, ಯಾದಗಿರಿ ಹಾಗೂ ಕಲಬುರಗಿ ಪೊಲೀಸರು ಪಾಲ್ಗೊಂಡಿದ್ದರು.

## ರಸ್ತೆ ಸುರಕ್ಷತೆ ಜಾಗೃತಿಯ ಭಿತ್ತಿಪತ್ರ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ,ಜ.8: ರಸ್ತೆ ಸುರಕ್ಷತೆ ಮಾಸಾಚರಣೆ ಹಿನ್ನೆಲೆಯಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಸಾರಿಗೆ ಸದನದಲ್ಲಿ ಬುಧವಾರ ಜರುಗಿದ ಸಭೆಯಲ್ಲಿ ಧಾರವಾಡ ಪ್ರವರ್ತನ ಉತ್ತರ ಅಪರ ಸಾರಿಗೆ ಆಯುಕ್ತ ಕೆ.ಟಿ.ಹಾಲಸ್ವಾಮಿ, ಕಲಬುರಗಿ ವಿಭಾಗದ ಜಂಟಿ ಸಾರಿಗೆ ಆಯುಕ್ತ ಸಿದ್ದಪ್ಪ ಹೆಚ್ ಕಲ್ಲೇರ ಹಾಗೂ ಕಲಬುರಗಿ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಉಪ ಸಾರಿಗೆ ಆಯುಕ್ತ ಆನಂದ ಪಾರ್ಥನಳ್ಳಿ ಅವರು ರಸ್ತೆ ಸುರಕ್ಷತೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ರಸ್ತೆ ಸುರಕ್ಷತೆ ಜಾಗೃತಿಯ ಭಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿದರು.

ಈ ಸಭೆಯಲ್ಲಿ ಧಾರವಾಡ ಪ್ರವರ್ತನ ಉತ್ತರ ಅಪರ ಸಾರಿಗೆ ಆಯುಕ್ತ ಕೆ.ಟಿ.ಹಾಲಸ್ವಾಮಿ

(2ನೇ ಪುಟ ನೋಡಿ)

## 87 ಲಕ್ಷ ವೆಚ್ಚದ ಇಂದಿರಾ ಕ್ಯಾಂಟಿನ್‌ಗೆ ಸಚಿವರಿಂದ ಪೂಜೆ



ಮಲ್ಲಮ್ಮ ನುಡಿ

ಮಲ್ಲಿಕಾರ್ಜುನ್ ಮಳಿಕೇರಿ

ಶಹಾಪುರ:ಜ.8: ಕಾಂಗ್ರೆಸ್ ಸರಕಾರದ ಮಹಾತ್ವಕಾಂಕ್ಷಿ ಯೋಜನೆ, ಜನರ ಬಹುದಿನದ ಬೇಡಿಕೆಯಾದ ಇಂದಿರಾ ಕ್ಯಾಂಟಿನ್ ನಿರ್ಮಾಣದಿಂದ ಬಡವರಿಗೆ, ಬೀದಿ ಬದಿ ವ್ಯಾಪಾರಿಗಳು ಸೇರಿ ದಂತೆ

ಅನೇಕರಿಗೆ ವರದಾನವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ನಗರದ ಹಳೇ ಬಸ್ ನಿಲ್ದಾಣದ ಹಿಂದುಗಡೆ 87 ಲಕ್ಷ ರು. ವೆಚ್ಚದ ಅಡುಗೆ ಕೋಣೆ ಸಹಿತವಾದ ಸುಸಜ್ಜಿತ ಇಂದಿರಾ ಕ್ಯಾಂಟಿನ್‌ಗೆ ಗುದ್ದಲಿ ಪೂಜೆ ನೇರವೇರಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರದ ಮಹತ್ವ

ಕಾಂಕ್ಷೆ ಯೋಜನೆ, ಬಡವರ, ಕೂಲಿ ಕಾರ್ಮಿಕರ ಕಾಮಧೇನು

(2ನೇ ಪುಟ ನೋಡಿ)

## ಗ್ರಾಮಸ್ಥರ ಸಮಸ್ಯೆಗೆ ಸ್ಪಂದಿಸಿ: ಅಧಿಕಾರಿಗಳಿಗೆ ಶಾಸಕ ಪ್ರಭು ಚವ್ಹಾಣ್ ಸೂಚನೆ



ಮಲ್ಲಮ್ಮ ನುಡಿ ವಾರ್ತೆ (ಪರಮೇಶ ರಾಂಪುರೆ)

ಕಮಲನಗರ:ಜ.8: ಜನತೆಯ ಸಂಕಷ್ಟಗಳಿಗೆ ಸ್ಪಂದಿಸಬೇಕು. ಗ್ರಾಮದ ಸಮಗ್ರ ಅಭಿವೃದ್ಧಿಗೆ ಶ್ರಮಿಸಬೇಕೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಗ್ರಾಮ ಸಂಚಾರ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.

ಕಮಲನಗರ ತಾಲ್ಲೂಕಿನ ಡೋಣಗಾಂವ(ಎಂ), ಹೊರಂಡಿ, ಸೋನಾಳ, ಸೋನಾಳ ವಾಡಿ, ಕಾಳಗಾಪೂರ, ಹುಲಸೂರ, ಖೇಡ್, ಸಂಗಮ, ಡಿಗ್ಗಿ, ರಾಂಪುರ ಸೇರಿದಂತೆ ವಿವಿಧೆಡೆ ಬುಧವಾರ ಗ್ರಾಮ ಸಂಚಾರ ನಡೆಸಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದರು.

ಎಲ್ಲ ಗ್ರಾಮಗಳಲ್ಲಿ ರಸ್ತೆ, ಚರಂಡಿ, ಬೀದಿ ದೀಪಗಳು, ಶೌಚಾಲಯ, ಕುಡಿಯುವ ನೀರಿನ ಕೊರತೆಯಾಗದ ರೀತಿಯಲ್ಲಿ ಕೆಲಸ ಮಾಡಬೇಕು.

(2ನೇ ಪುಟ ನೋಡಿ)

## ಮಾನವ ಕಲ್ಯಾಣವೇ ಧರ್ಮ ಆಚರಣೆ ಗುರಿ



ಮಲ್ಲಮ್ಮ ನುಡಿ ವಾರ್ತೆ ಬೀದರ.ಜ.08: ದೇಶದಲ್ಲಿ ಹಲವು ಧರ್ಮ ಹಾಗೂ ಆಚರಣೆಗಳಿವೆ. ಅವೆಲ್ಲವುಗಳ ಗುರಿ ಮಾನವ ಕಲ್ಯಾಣವೇ ಆಗಿದೆ ಎಂದು ರಂಭಾಪುರಿ ಜಗದ್ಗುರು ಡಾ.ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ನುಡಿದರು.

ಭಾಲ್ಕಿ ತಾಲ್ಲೂಕಿನ ಹಲಬರ್ಗಾ ಗ್ರಾಮದ ರಾಚೋಟೇಶ್ವರ ಸಂಸ್ಥಾನ ಮಠದಲ್ಲಿ ಸಿದ್ಧರಾಮೇಶ್ವರ ನಮ್ಮೂರ ಜಾತ್ರೆ ಹಾಗೂ ಹಾವಗಿಲಿಂಗೇಶ್ವರ ಶಿವಾಚಾರ್ಯರ ದ್ವಾದಶ ಪಟ್ಟಾಧಿಕಾರ ಮಹೋತ್ಸವ ನಿಮಿತ್ತ ಬುಧವಾರ ನಡೆದ ಧರ್ಮಸಭೆಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಆಧ್ಯಾತ್ಮ ಜ್ಞಾನ ಹಾಗೂ ಭಾವೈಕ್ಯ ದೇಶದ ಉಸಿರಾಗಿದೆ. ದೇಶ ಉಳಿದರೆ ಧರ್ಮ ಉಳಿಯಲು ಸಾಧ್ಯವಿದೆ ಎಂದು ತಿಳಿಸಿದರು.

ಜಾತಿ, ಧರ್ಮಗಳ ಚೌಕಟ್ಟು ಮೀರಿ ಮಾನವೀಯ

(2ನೇ ಪುಟ ನೋಡಿ)

## ಒಂದನೇ ಪುಟದಿಂದ

# ಧರ್ಮ ಆಚರಣೆ ಗುರಿ

ತತ್ವದ ತಳಹದಿ ಮೇಲೆ ಆರೋಗ್ಯಪೂರ್ಣ ಸಮಾಜ ನಿರ್ಮಿಸಬೇಕೆಂಬುದೇ ಜಗದ್ಗುರು ರೇಣುಕಾಚಾರ್ಯರು ಹಾಗೂ ಜಗಜ್ಯೋತಿ ಬಸವಣ್ಣನವರ ಗುರಿಯಾಗಿತ್ತು. ಈ ದಿಸೆಯಲ್ಲಿ ಮುನ್ನಡೆದು ಶಾಂತಿ, ಸಮಾಧಾನದ ವಾತಾವರಣ ನಿರ್ಮಿಸಲು ಶ್ರಮಿಸಬೇಕಾಗಿದೆ ಎಂದು ಹೇಳಿದರು.ದೇಶದಲ್ಲಿ ಸಂಸ್ಕೃತಿ ಹಾಗೂ ಪರಂಪರೆಗೆ ಬಹಳ ಪ್ರಾಮುಖ್ಯ ಇದೆ. ಮಾನವೀಯ ಆದರ್ಶ ಮೌಲ್ಯಗಳ ಮೂಲಕ ಸಮಾಜದಲ್ಲಿ ಸೌಹಾರ್ದ ಬೆಳೆಸುವ ಅವಶ್ಯಕತೆ ಇದೆ ಎಂದು ತಿಳಿಸಿದರು.ನಾಡಿನ ವಿವಿಧ ಭಾಗಗಳಲ್ಲಿ ನಡೆಯುವ ಜಾತ್ರೆಗಳ ಮೂಲ ಉದ್ದೇಶ ಸಾಮರಸ್ಯ ಹಾಗೂ ಸದ್ಭಾವನೆ ಬೆಳೆಸುವುದಾಗಿದೆ ಎಂದು ಹೇಳಿದರು.12 ವರ್ಷಗಳ ಅವಧಿಯಲ್ಲಿ ಧರ್ಮ, ಸಂಸ್ಕೃತಿ, ಸಂಸ್ಕಾರ, ಸದ್ವಿಚಾರಗಳ ಮೂಲಕ ಹಲಬರ್ಗಾ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಒಳ್ಳೆಯ ವಾತಾವರಣ ನಿರ್ಮಿಸಿದ ಶ್ರೇಯಸ್ಸು ಹಾವಗಿಲಿಂಗೇಶ್ವರ ಶ್ರೀಗಳಿಗೆ ಸಲ್ಲುತ್ತದೆ. ಭಕ್ತ ಸಮುದಾಯ ಅವರ ಆದರ್ಶ ದಾರಿಯಲ್ಲಿ ಸಾಗಿ, ಸದೃಢ, ಸಶಕ್ತ ದೇಶ ಹಾಗೂ ಧರ್ಮವನ್ನು ಕಟ್ಟುವಂತಾಗಲಿ ಎಂದು ಶುಭ ಹಾರೈಸಿ, ಶ್ರೀಗಳಿಗೆ ರೇಷ್ಮೆ ಶಾಲು ಹೊದಿಸಿ, ಫಲ ಪುಷ್ಪ ನೀಡಿ ಆಶೀರ್ವದಿಸಿದರು. ನೇತೃತ್ವ ವಹಿಸಿದ್ದ ಹಾವಗಿಲಿಂಗೇಶ್ವರ ಶಿವಾಚಾರ್ಯರು ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದ ಭಕ್ತರ ಭಾಗ್ಯ ಬಹಳ ದೊಡ್ಡದಿದೆ. ರಂಭಾಪುರಿ ಜಗದ್ಗುರುಗಳು ಆಗಮಿಸಿ, ಜಾತ್ರೆ ಹಾಗೂ ತಮ್ಮ ದ್ವಾದಶ ಪಟ್ಟಾಧಿಕಾರ ಮಹೋತ್ಸವದ ಸಾನಿಧ್ಯ ವಹಿಸಿರುವುದು ಪೂರ್ವಾರ್ಜಿತ ಪುಣ್ಯದ ಫಲ ಎಂದು ಬಣ್ಣಿಸಿದರು.

ವೀರಶೈವ ಧರ್ಮ ಸಕಲ ಜೀವಾತ್ಮರಿಗೆ ಸದಾಕಾಲ ಒಳ್ಳೆಯದನ್ನೇ ಮಾಡುತ್ತ ಬಂದಿದೆ. ಜಗದ್ಗುರು ರೇಣುಕಾಚಾರ್ಯರ ತತ್ವ, ಸಿದ್ಧಾಂತ ಹಾಗೂ 12ನೇ ಶತಮಾನದ ಶರಣರ ಸಾಮಾಜಿಕ ಚಿಂತನೆಗಳು ಎಲ್ಲರ ಬದುಕಿಗೆ ದಾರಿದೀಪವಾಗಿವೆ ಎಂದು ತಿಳಿಸಿದರು. ಮೆಹಕರದ ರಾಜೇಶ್ವರ ಶಿವಾಚಾರ್ಯ ಸಮಾರಂಭವನ್ನು ಉದ್ಘಾಟಿಸಿದರು. ಹುಡುಗಿ ಹಿರೇಮಠದ ವಿರೂಪಾಕ್ಷ ಶಿವಾಚಾರ್ಯ, ಹಣೆಗಾಂ???ನ ಶಂಕರಲಿಂಗ ಶಿವಾಚಾರ್ಯ ಕೌಳಾಸ ಶಿವಾಚಾರ್ಯ ಸಮ್ಮುಖ ವಹಿಸಿದ್ದರು. ಪ್ರಮುಖರಾದ ಶಾಂತಕುಮಾರ ಪ್ರಭಾ, ಮಲ್ಲಕಾರ್ಜುನ ಚಲುವಾ, ವೀರಶೆಟ್ಟಿ ಪಾಟೀಲ, ರಮೇಶ ಪ್ರಭಾ, ಉಮಾಕಾಂತ ಪ್ರಭಾ ಮತ್ತಿತರರು ಇದ್ದರು. ಇದಕ್ಕೂ ಮುನ್ನ ರಂಭಾಪುರಿ ಜಗದ್ಗುರುಗಳ ಸಾನಿಧ್ಯದಲ್ಲಿ ದ್ವಾದಶ ಪಟ್ಟಾಧಿಕಾರ ಮಹೋತ್ಸವ ನಿಮಿತ್ತ ಭಕ್ತರು ಹಾವಗಿಲಿಂಗೇಶ್ವರ ಶಿವಾಚಾರ್ಯರಿಗೆ ಶಾಸ್ತ್ರೋಕ್ತವಾಗಿ ಮಂಗಲ ಸ್ನಾನ ಮಾಡಿಸಿ, ಹೊಸ ಬಟ್ಟೆ ಸಮರ್ಪಿಸಿದರು.

# ಶಾಲಾ,ಕಾಲೇಜುಗಳಿಗೆ ರಜೆ

ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆಗಳಿಂದ ರಜೆ ಘೋಷಣೆ ಮಾಡಲಾಗಿದೆ. ಇನ್ನು ಈ ಬಗ್ಗೆ ಡಿಡಿಪಿಐ ಪ್ರಸನ್ನಕುಮಾರ್, ಡಿಡಿಪಿಯು ಚಂದ್ರಕಾಂತ್ ಆದೇಶ ಹೊರಡಿಸಿದ್ದಾರೆ.

ಅಮಿತ್ ಶಾ ಏನು ಹೇಳಿದ್ದರು? ಅಂಬೇಡ್ಕರ್, ಅಂಬೇಡ್ಕರ್.. ಎಂದು ಹೇಳುವುದು ಫ್ಯಾಷನ್ ಆಗಿಬಿಟ್ಟಿದೆ. ಅಷ್ಟು ಬಾರಿ ದೇವರ ನಾಮಸ್ಮರಣೆ ಮಾಡಿದ್ದರೆ ಅವರಿಗೆ ಸ್ವರ್ಗದಲ್ಲಿ ಸ್ಥಾನ ಸಿಗುತ್ತಿತ್ತು ಎಂದು ಅಮಿತ್ ಶಾ ಅವರು ತಮ್ಮ ಭಾಷಣದಲ್ಲಿ ಹೇಳಿದ್ದರು. ಅಂಬೇಡ್ಕರ್ ಅವರ ಹೆಸರನ್ನು ಕಾಂಗ್ರೆಸ್ ತೆಗೆದುಕೊಳ್ಳುತ್ತಿರುವುದಕ್ಕೆ ಬಿಜೆಪಿ ಸಂತೋಷವಾಗಿದೆ, ಆದರೆ ಪಕ್ಷವು ಅವರ ಬಗ್ಗೆ ತನ್ನ ನಿಜವಾದ ಭಾವನೆಗಳ ಬಗ್ಗೆ ಮಾತನಾಡಬೇಕು ಎಂದು ಗೃಹ ಸಚಿವರು ಹೇಳಿದ್ದರು. ಅಂಬೇಡ್ಕರ್ ಅವರು 370 ನೇ ವಿಧಿ ಸೇರಿದಂತೆ ಆಗಿನ ಕಾಂಗ್ರೆಸ್ ನೇತೃತ್ವದ ಸರ್ಕಾರದ ನೀತಿಗಳೊಂದಿಗೆ ತಮ್ಮ ಭಿನ್ನಾಭಿಪ್ರಾಯವನ್ನು ಉಲ್ಲೇಖಿಸಿ ಮೊದಲ ಕ್ಯಾಬಿನೆಟ್‌ನಿಂದ ಹೇಗೆ ರಾಜೀನಾಮೆ ನೀಡಬೇಕಾಯಿತು ಎಂದು ಅವರು ಹೇಳಿದ್ದರು.

ಬಿಜೆಪಿ ಅಧಿಕಾರಕ್ಕೆ ಬಂದಾಗ ಅಂಬೇಡ್ಕರ್ ಅವರ ಸ್ಮಾರಕಗಳನ್ನು ನಿರ್ಮಿಸಲಾಗಿದೆ . ನೀವು ವಿರೋಧಿಸುತ್ತಿದ್ದ ವ್ಯಕ್ತಿಯ ಹೆಸರನ್ನು ಮತ ಬ್ಯಾಂಕ್ ರಾಜಕಾರಣಕ್ಕೆ ಬಳಸುವುದು ಎಷ್ಟು ಸೂಕ್ತ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಷಾ ಪ್ರಶ್ನಿಸಿದ್ದರು.

# ನಗದು ರಹಿತ ಚಿಕಿತ್ಸೆ

ಪ್ರೋತ್ಸಾಹ ಮತ್ತು ಸಮಗ್ರ ಮೂಲಸೌಕರ್ಯಕ್ಕಾಗಿ ಹೆಚ್ಚುವರಿ ಪ್ರಯೋಜನಗಳನ್ನು ಗಡ್ಕರಿ ಘೋಷಿಸಿದರು. ಹೊಸ ನಿಯಮಗಳ ಮೂಲಕ ಇ–ರಿಕ್ಷಾ ಸುರಕ್ಷತೆಯನ್ನು ಸುಧಾರಿಸುವ ಮಹತ್ವವನ್ನು ಅವರು ಒತ್ತಿ ಹೇಳಿದರು.

ಕಾರ್ಯಾಗಾರದಲ್ಲಿ ಚರ್ಚಿಸಲಾದ ಇತರ ಕ್ರಮಗಳಲ್ಲಿ ಟ್ರಕ್‌ಗಳಿಗೆ ಸುಧಾರಿತ ಚಾಲಕ ಸಹಾಯ ವ್ಯವಸ್ಥೆಗಳನ್ನು (ಂಆಂಖ) ಪರಿಚಯಿಸುವುದು. ವಾಹನಗಳ ಮೇಲೆ ರೆಟ್ರೋ–ರಿಫ್ಲೆಕ್ಟಿವ್ ಟೇಪ್ ಅನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ಮತ್ತು ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ವಾಹನ ಸ್ಥಳ ಟ್ರ್ಯಾಕಿಂಗ್ ಸಾಧನಗಳನ್ನು (ಗಿಐಖಿಆ) ಅಳವಡಿಸಲಾಗಿದೆ. ಮಾರ್ಚ್ 2025ರ ವೇಳೆಗೆ, ಎಲ್ಲಾ ಮುಖರಹಿತ ಸೇವೆಗಳನ್ನು ದೇಶಾದ್ಯಂತ ಸಂಪೂರ್ಣವಾಗಿ ಸಂಯೋಜಿಸುವ ನಿರೀಕ್ಷೆಯಿದೆ.

## ಬಯೋಮೆಟ್ರಿಕ್ ಪಡೆಯಲು ಹಣ ಪಡೆದ ಹಿನ್ನೆಲೆ:
## ಕಿಣ್ಣಿ ಸರಫೋಸ್ ನ್ಯಾಯಬೆಲೆ ಅಂಗಡಿ ಲೈಸೆನ್ಸ್ ಅಮಾನತ್ತು

ಕಲಬುರಗಿ,ಜ.8: ಪ್ರತಿ ಮಾಹೆ ಪಡಿತರ ವಿತರಣೆ ಮಾಡುವಾಗ ಬಯೋಮೆಟ್ರಿಕ್ ಪಡೆಯಲು ಪಡಿತರದಾರರಿಂದ ಹಣ ವಸೂಲು ಮಾಡುತ್ತಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕಮಲಾಪೂರ ತಾಲೂಕಿನ ಕಿಣ್ಣಿ ಸರಪೋಸ್ ಗ್ರಾಮದ ನ್ಯಾಯಬೆಲೆ ಅಂಗಡಿ ಸಂಖ್ಯೆ 17ರ ಡೀಲರ್ ರಮೇಶ ಜಿ. ಚವ್ಹಾಣ ಇವರ ಲೈಸೆನ್ಸ್ ಸಂಖ್ಯೆ 844/97ನ್ನು ಮುಂದಿನ ವಿಚಾರಣೆ ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತುಗೊಳಿಸಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಕಲಬುರಗಿ ಉಪನಿರ್ದೇಶಕ ಭೀಮರಾಯ ಎಂ. ಆದೇಶ ಹೊರಡಿಸಿದ್ದಾರೆ. ಕಳೆದ ಡಿಸೆಂಬರ್ 30 ರಂದು ಪಡಿತರ ಅಂಗಡಿಯಲ್ಲಿ ಪಡಿತರದಾರರಿಂದ ಬಯೋಮೆಟ್ರಿಕ್ ಪಡೆಯಲು 10 ರೂ., 20 ರೂ. ಪಡೆದು ಪಡೆಯುತ್ತಿರುವ ಬಗ್ಗೆ ಸಾರ್ವಜನಿಕರು ಚಿತ್ರೀಕರಣ ಮಾಡಿ ಕಮಲಾಪೂರ ತಹಶೀಲ್ದಾರರಿಗೆ ದೂರು ಸಲ್ಲಿಸಿದರು.

## ಶಾಸಕ ಪ್ರಭು ಚವ್ಹಾಣ್ ಸೂಚನೆ

ಶಾಲೆ– ಅಂಗನವಾಡಿಯಲ್ಲಿ ಕುಡಿಯುವ ನೀರು, ಶೌಚಾಲಯ, ಕಂಪೌಂಡ್ ಗೋಡೆ ಇರುವಂತೆ ನೋಡಿಕೊಳ್ಳಬೇಕು. ಬೀದಿಗಳನ್ನು ಶುಚಿಯಾಗಿಡಬೇಕು. ಬೀದಿ ದೀಪಗಳು ಸುಸ್ಥಿಯಲ್ಲಿಡಬೇಕು. ನನ್ನ ಬಳಿಗೆ ಪಂಚಾಯಿತಿ ಸಮಸ್ಯೆಗಳು ಸಾಕಷ್ಟು ಬರುತ್ತಿವೆ. ಪಂಚಾಯಿತಿ ವ್ಯಾಪ್ತಿಯ ಕೆಲಸಗಳನ್ನು ಸ್ಥಳೀಯವಾಗಿ ಪರಿಹರಿಸಬೇಕು ಎಂದು ತಿಳಿಸಿದರು.

ಕೃಷಿ ಭೂಮಿಗಳಿಗೆ ರಸ್ತೆ ನಿರ್ಮಿಸಿಕೊಡುವಂತೆ ಬಹಳಷ್ಟು ಜನರು ಬೇಡಿಕೆಗಳನ್ನು ಇಡುತ್ತಿದ್ದಾರೆ. ಗ್ರಾಮ ಪಂಚಾಯಿತಿಯಿಂದ ಈ ಕೆಲಸ ಮಾಡಲು ಅವಕಾಶವಿದೆ. ಅವಶ್ಯಕತೆ ಇರುವ ಕಡೆ ಸರ್ವೆ ಮಾಡಿಸಿ ರಸ್ತೆ ನಿರ್ಮಾಣ ಕೆಲಸ ಆರಂಭಿಸಬೇಕು. ಗ್ರಾಮಸ್ಥರಿಗೆ ಯಾವುದೇ ರೀತಿಯ ಸಮಸ್ಯೆಗಳಾಗದ ರೀತಿಯಲ್ಲಿ ಕೆಲಸ ಮಾಡಬೇಕೆಂದು ನಿರ್ದೇಶನ ನೀಡಿದರು. ಗ್ರಾಮಗಳ ಅಭಿವೃದ್ಧಿಗೆ ಸದಾ ಸಿದ್ದನಿದ್ದು, ಎಲ್ಲ ಬೇಡಿಕೆಗಳನ್ನು ಆದ್ಯತೆಗೆ ಅನುಗುಣ ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

3 ಕೋಟಿಗೂ ಹೆಚ್ಚಿನ ಕೆಲಸಗಳಿಗೆ ಪೂಜೆ, ಉದ್ಘಾಟನೆ:

ಡೋಣಗಾಂವ (ಎಂ), ಹೊರಂಡಿ,

ಸೋನಾಳ, ಕಾಳಗಾಪೂರ, ಹುಲಸೂರ, ಖೇಡ್, ಸಂಗಮ್, ಡಿಗ್ಗಿ, ಕೊಟಗ್ಯಾಳ ಶಾಲೆಗಳಲ್ಲಿ 14 ಲಕ್ಷದ ದುರಸ್ತಿ, ವಾಡರ್ ಫಿಲ್ಟರ್, ಸೋಲಾರ್ ಪೆನಲ್, ವಿದ್ಯುತ್ತೀಕರಣದ ಕಾಮಗಾರಿಗಳು, ಸೋನಾಳ, ಖೇಡ್ ಗ್ರಾಮದಲ್ಲಿ 25 ಲಕ್ಷದ ಶೌಚಾಲಯ, ಎಸ್ಸಿ ವಾರ್ಡ್ ನಲ್ಲಿ 5 ಲಕ್ಷದ ಸಮುದಾಯ ಭವನ, ಕಾಳಗಾಪೂರ, ಹುಲಸೂರ, ಖೇಡ್ ಹಾಗೂ ಡಿಗ್ಗಿಯಲ್ಲಿ 22.50 ಲಕ್ಷದ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು. ಸೋನಾಳ ವಾಡಿಯಲ್ಲಿ 52 ಲಕ್ಷ ಅನುದಾನದಲ್ಲಿ ನಿರ್ಮಾಣಗೊಂಡ ಹೊಸ ಶಾಲಾ ಕಟ್ಟಡವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಅಮಿತಕುಮಾರ ಕುಲಕರ್ಣಿ, ತಾಲೂಕ ಪಂಚಾಯತ ಸಹಾಯಕ ನಿರ್ದೇಶಕ ಹಣಮಂತ ಕೌಟಗೆ, ಪಂಚಾಯತ ರಾಜ್ ಇಲಾಖೆಯ ಎಇಇ ವೆಂಕಟರಾವ ಶಿಂಧೆ, ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗದ ಎಇಇ ಸುಭಾಷ ದಾಳಗುಂಡೆ, ತಾಲ್ಲೂಕು ವೈದ್ಯಾಧಿಕಾರಿ ಡಾ.ಗಾಯತ್ರಿ,ಏಎ??? ರೇಣುಕಾ ಮುಖಂಡರಾದ ವಸಂತ ಬಿರಾದಾರ, ರಾಮಶೆಟ್ಟಿ ಪನ್ನಾಳೆ, ಬಸವರಾಜ ಪಾಟೀಲ, ಕಿರಣ ಪಾಟೀಲ, ಶಿವರಾಜ ಅಲ್ಮಾಜೆ, ಸಚಿನ ರಾಠೋಡ, ಗಿರೀಶ ವಡೆಯರ್, ಪ್ರವೀಣ ಕಾರಬಾರಿ, ಬಂಟಿ ರಾಂಪೂರೆ, ಸಂದೀಪ ಪಾಟೀಲ, ಮಲ್ಲಿಕಾರ್ಜುನ ದಾನಾ, ಸತೀಷ ಜಾಧವ, ಶಿವಾನಂದ ವಡ್ಡೆ, ಹಣಮಂತ ದಾನಾ, ರಾಜಕುಮಾರ ಅಲಬಿದೆ, ಶಾಲಿವಾನ ಬಿರಾದಾರ, ಶಕುಂತಲಾ ಮುತ್ತಂಗೆ ಸೇರಿದಂತೆ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು, ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಭಿತ್ತಿಪತ್ರ ಬಿಡುಗಡೆ

ಅವರು ಮಾತನಾಡಿ, ಸಾರ್ವಜನಿಕರು ರಸ್ತೆ ಸುರಕ್ಷತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ ಅಪಘಾತಗಳ ಪ್ರಮಾಣವನ್ನು ಕಡಿಮೆ ಮಾಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ವಿಭಾಗದ ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಇಂದಿರಾ ಕ್ಯಾಂಟಿನ್‌ಗೆ ಸಚಿವರಿಂದ ಪೂಜೆ

ಹಸಿದ ಹೊಟ್ಟೆ ತುಂಬಿಸಲು ಇಂದಿರಾ ಕ್ಯಾಂಟೀನ್ ಸಹ ಪ್ರಮುಖವಾಗಿದೆ. ಕ್ಯಾಂಟೀನ್‌ಗೆ ಉತ್ತಮ ಸೂಕ್ತ ಸ್ಥಳ ದೊರೆತಿರುವುದುಸಂತೋಷ ತಂದಿದೆ. ನೂತನ ಇಂದಿರಾ ಕ್ಯಾಂಟಿನ್ ಶೀಘ್ರದಲ್ಲಿಕಾರ್ಯರಂಭಗೊಳ್ಳಲಿದೆ. ದಿನನಿತ್ಯವೂ ಸುತ್ತಮುತ್ತಲ ಹಳ್ಳಿಗಳಿಂದನಗರಕ್ಕೆ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ರೈತರು,ಕಾರ್ಮಿಕರು ಓಡಾಡುತ್ತಿರುತ್ತಾರೆ. ಪ್ರತಿದಿನ ಕಚೇರಿಗಳಿಗೆಅಲೆದಾಡುವ ಸಾರ್ವಜನಿಕ ಅಲೆದಾಟ ಇರಲಿದೆ. ಇವರಿಗೆಲ್ಲಕಡಿಮೆ ದರದಲ್ಲಿ ಆಹಾರ ಸಿಕ್ಕರೆ ಅನುಕೂಲವಾಗಲಿದೆ ಎಂದರು.ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಮೆಹರೂನ ಬೇಗಂ, ರಮೇಶಬಡಿಗೇರ, ವಸಂತ ಸುರಪುರಕರ್, ಮುಸ್ತಫ ದರ್ಬಾನ, ತಲಾಕ್‌ಚಾಂದ್, ಶಾಂತಪ್ಪ ಕಟ್ಟಿಮನಿ, ಬಸವರಾಜ ಚೆನ್ನೂರ, ಎಇಇ

ನಾನಾಸಾಬ್ ಇದ್ದರು.

## ಬಾಗಲಕೋಟೆಯಲ್ಲೂ ಲೋಕಾ ದಾಳಿ

ಲೋಕಾಯುಕ್ತ ದಾಳಿ ನಡೆದಿದ್ದು, ಲೋಕಾಯುಕ್ತ ಅಧಿಕಾರಿಗಳು ಟೈಲ್ಸ್ ಉದ್ದಿಮೆಯಾಗಿರುವ ಸೀಮಿಕೇರಿಯ ರಾಜಶೇಖರ ಮನೆ ಮೇಲೂ ದಾಳಿ ಮಾಡಿ ದಾಖಲೆಗಳನ್ನು ಪರಿಶೀಲಿಸಿದರು.

# ಮಹಾತ್ಮರ ಜಯಂತಿಗಳನ್ನು ಅದ್ದೂರಿಯಾಗಿ ಆಚರಿಸಿ:ಶಿವಕುಮಾರ ಶೀಲವಂತ



ಮಲ್ಲಮ ನುಡಿ ವಾರ್ತೆ

ಬೀದರ.ಜ.08: ಬರುವ ಜನವರಿ.14ರಂದು ಶಿವಯೋಗಿ ಸಿದ್ಧಾರಾಮೇಶ್ವರ ಜಯಂತಿ, ಜನವರಿ.19 ರಂದು ವೇಮನ ಜಯಂತಿ ಮತ್ತು ಜನವರಿ.21 ರಂದು ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ಹಾಗೂ ಫೆಬ್ರವರಿ.1 ರಂದು ಮಡಿವಾಳ ಮಾಚಿದೇವ ಜಯಂತಿಯನ್ನು ಎಲ್ಲರೂ ಸೇರಿ ಅದ್ದೂರಿಯಾಗಿ ಆಚರಿಸೋಣ ಎಂದು ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬರುವ ವಿವಿಧ ಮಹಾನೀಯರ ಜಯಂತಿಗಳ ಆಚರಣೆ ಕುರಿತು ಕರೆದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸದರಿ ದಿನಾಂಕಗಳಂದು ಸರ್ಕಾರಿ, ಅರೆ ಸರ್ಕಾರಿ, ಸಂಘ–ಸಂಸ್ಥೆಗಳಲ್ಲಿ ಬೆಳಿಗ್ಗೆ 9.30 ಗಂಟೆಗೆ ಮಹನೀಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಹಾತ್ಮರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಗುವುದು. 10.45ಕ್ಕೆ ಜಿಲ್ಲಾಧಿಕಾರಿ ಕಚೇರಿಯಿಂದ ಮಹಾತ್ಮರ ಭಾವಚಿತ್ರದ ಮೆರವಣಿಗೆ ಪ್ರಾರಂಭಗೊಂಡು ಶಿವಾಜಿವೃತ್ತ, ಭಗತಸಿಂಗ ವೃತ್ತ, ಬಸವೇಶ್ವರ ವೃತ್ತ, ಅಂಬೇಡ್ಕರ ವೃತ್ತ, ಜನರಲ್ ಕರಿಯಪ್ಪ ವೃತ್ತದ ಮಾರ್ಗವಾಗಿ ಸಂಚರಿಸಿ ನೇರವಾಗಿ ಪೂಜ್ಯ ಚನ್ನಬಸವ ಪಟ್ಟದೇವರ ರಂಗಮಂದಿರಕ್ಕೆ ತಲುಪಿ ಮಧ್ಯಾಹ್ನ 1 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಜನವರಿ.19 ರಂದು ಬರುವ ಮಹಾಯೋಗಿ ವೇಮನ ಅವರ ಜಯಂತಿಯು ಬೆಳಿಗ್ಗೆ 10 ಗಂಟೆಗೆ ಜಿಲ್ಲಾದಿಕಾರಿಗಳ ಕಚೇರಿಯಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಬೆಳಿಗ್ಗೆ 11.30 ಗಂಟೆಗೆ ಹೇಮವೇಮ ಸಮುದಾಯ ಭವನ ಅಮಲಾಪೂರದ ವೇದಿಕೆ ಕಾರ್ಯಕ್ರಮ ಜರುಗಲಿದೆ. ಸದರಿ ದಿನಾಂಕಗಳಂದು ಬರುವ ಜಯಂತಿಗಳ ದಿನ ಮೆರವಣಿಗೆ ಹಾದು ಹೋಗುವ ಮಾರ್ಗಗಳಲ್ಲಿ ಎಲ್ಲ ವೃತ್ತಗಳ ಮೇಲೆ ದೀಪಾಲಂಕಾರ ನರಸಭೆ ವತಿಯಿಂದ ವಾಹನ ವ್ಯವಸ್ಥೆ, ವೃತ್ತದ ಸುತ್ತ–ಮುತ್ತ ಸ್ವಚ್ಚತೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲು ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ಮೆರವಣಿಗೆ ಸಮಯದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ ಹಾಗೂ ಟ್ರಾಫಿಕ ವ್ಯವಸ್ಥೆ ಮಾಡಲು ಪೊಲೀಸ್ ಇಲಾಖೆ ಅವರಿಗೆ ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾ ತಂಡಗಳನ್ನು ವ್ಯವಸ್ಥೆ ಮಾಡಲು ಸೂಚಿಸದರು.

ಈ ಸಭೆಯಲ್ಲಿ ಬೀದರ ಸಹಾಯಕ ಆಯುಕ್ತರಾದ ಎಂ.ಡಿ.ಶಕೀಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ರಾಮ ಶಿಂಧೆ, ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಸಂಜೀವಕುಮಾರ ಅತಿವಾಳ, ಜಾನಪದ ಅಕಾಡೆಮಿ ಸದಸ್ಯರಾದ ವಿಜಯಕುಮಾರ ಸೊನಾರೆ, ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷರಾದ ಮಾಣಿಕರಾವ ವಾಡೇಕರ, ಜಗನ್ನಾಥ ಜಮಾದಾರ, ಶಂಕ–ರೆಡ್ಡಿ ಚಿಟ್ಟಾ, ಶ್ರೀನಿವಾಸ ರೆಡ್ಡಿ ಬಿಲ್ಲಗಿ ಸಮಾಜದ ಗಣ್ಯರು, ಸಂಘ ಸಂಸ್ಥೆ ಮುಖಂಡರು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಭೀಮವಾದ ಕೋರ್ ಕಮಿಟಿ
## ರಾಜ್ಯಾಧ್ಯಕ್ಷರಾಗಿ ಎಲ್ಲಪ್ಪ ಹಳೆಮನೆ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜ.8: ಪ್ರವಾಸಿ ಮಂದಿರದಲ್ಲಿ ಇಂದು ನಡೆದ ಭೀಮ ವಾದ ಕೋರ್ ಕಮಿಟಿ ಸಭೆಯಲ್ಲಿ ರಾಜ್ಯ ಅಧ್ಯಕ್ಷರಾಗಿ ಎಲ್ಲಪ್ಪಹಳೆಮನೆಆಯ್ಕೆಯಾದರು ಅಧ್ಯಕ್ಷರ ಪದವನ್ನು ಸ್ವೀಕರಿಸಿದ ನಂತರ ಎಲ್ಲಪ್ಪ ಹಳೆಮನಿ ಮಾತನಾಡಿ ಸಂವಿಧಾನ ಶಿಲ್ಪಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ತತ್ವಸಿದ್ಧಾಂತಗಳನ್ನು ಅಳವಡಿಸಿಕೊಂಡು ಸತ್ಯದ ಪರವಾಗಿ ಸಮಾಜದಲ್ಲಿ ತಾರತಮ್ಯ ನಿರ್ಮೂಲನೆ ಮತ್ತು ಸರ್ವ ಸಮಾಜದ ಸಮಾನತೆಗಾಗಿ ಹೋರಾಟ ಮಾಡುವುದಾಗಿ ಬರವಸೆ ಕೊಟ್ಟರು ಮಹಿಳಾ ಮತ್ತು ಮಕ್ಕಳ ಶೋಷಿತರ ಏಳಿಗೆಗಾಗಿ ಎಲ್ಲರೂ ಸೇರಿ ಕೈಜೋಡಿಸೋಣ ಎಂದು ಪ್ರತಿಜ್ಞೆ ಸ್ವೀಕರಿಸಿದರು ಈ ಸಂದರ್ಭದಲ್ಲಿ ಎಂ ಸಿ ನಾರಾಯಣ್ ರಾಜ್ಯ ಸಂಚಾಲಕರು ಪರಶುರಾಮ್ ನಿಲ್ಲಾಯಕ್ ಡಿಎ???ಸ್ ಸಂಸ್ಥಾಪಕರು ರವಿಚಂದ್ರ ಕಾಳಿ ಗುಡ್ಲಾನೂರ್ ತಾಲೂಕ ಸಂಚಾಲಕರು ನಾಗರಾಜ್ ನರೇಗಲ್ ಕೊಪ್ಪಳ ತಾಲೂಕ ಸಂಚಾಲಕರು ಪ್ರಕಾಶ್ ವಿಠಲಪುರ್ ಜಿಲ್ಲಾ ಸಂಘಟನಾ ಸಂಚಾಲಕರು ಗಾಳೆಪ್ಪ ಎಲಿಮ್ಗೇರಿ ಶಂಕರ್ ನಾಯಕ್ ಸಮಾಜದ ಎಲ್ಲ ಮುಖಂಡರು ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದರು

# ಕಾಯಕ ಬಂಧುಗಳ ಪಾತ್ರ ದೊಡ್ಡದು



ಮಲ್ಲಮ್ಮ ನುಡಿ ವಾರ್ತೆ

(ಮಲ್ಲಪ್ಪಾ ಟಿ ಹಾಸಗೊಂಡ)

ಭಾಲ್ಕಿ:ಜ.8: ಗ್ರಾಮೀಣ ಭಾಗದಲ್ಲಿ ನರೇಗಾ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಯಕ ಬಂಧುಗಳ ಪಾತ್ರ ದೊಡ್ಡದಿದೆ ಎಂದು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ್ ಹೇಳಿದರು.ಪಟ್ಟಣದ ತಾಲೂಕು ಪಂಚಾಯತಿ ಆವರಣದಲ್ಲಿನ ಸಾಮರ್ಥ್ಯ ಸೌಧದಲ್ಲಿ ಗುರುವಾರ ಆಯೋಜಿಸಿದ್ದ ಕಾಯಕ ಬಂಧುಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ನರೇಗಾ ಯೋಜನೆ ಕಾರ್ಮಿಕರಿಗೆ ಆಶಾಕಿರಣವಾಗಿದ್ದು ಕಾರ್ಮಿಕರ ಕುಟುಂಬದ ಆರ್ಥಿಕ ಪರಿಸ್ಥಿತಿ ಸದೃಢಗೊಳ್ಳಲು ಸಹಕಾರಿಯಾಗಿದೆ. ಕಾಯಕ ಬಂಧುಗಳ ಕರ್ತವ್ಯ ಹಾಗೂ ಹಕ್ಕುಗಳನ್ನು ಪ್ರತಿಯೊಬ್ಬರು ಪಾಲನೆ ಮಾಡಬೇಕು ಎಂದು ತಿಳಿಸಿದರು.

ಸಹಾಯಕ ನಿರ್ದೇಶಕ ಚಂದ್ರಶೇಖರ ಬನ್ನಾಳೆ ಮಾತನಾಡಿ, ಕಾಯಕ ಬಂಧುಗಳು ಕಾರ್ಯಾಗರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸರಿಯಾದ ಮಾಹಿತಿ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಸಹಯೋಗ ಸೇವಾ ಸಂಸ್ಥೆಯ ನಿರ್ದೇಶಕ ಎಂ.ಡಿ.ಶಫಿಯೋದ್ದಿನ್ ತರಬೇತಿ ನೀಡಿದರು. ಈ ಸಂದರ್ಭದಲ್ಲಿ ತಾಪಂ ವಿನೋದ ರೆಡ್ಡಿ ಸೇರಿದಂತೆ ಕಾಯಕ ಬಂಧುಗಳು ಹಾಜರಿದ್ದರು.

# ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಉಮಾದೇವಿ ಸೊನ್ನದ




ಮಲ್ಲಮ್ಮ ನುಡಿ ವಾರ್ತೆ

ಇಂಡಿ:ಜ.8: ಮಕ್ಕಳಿಗೆ ಕಲಿಕಾಂಶಗಳ ಮೂಲಕ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಶಿಕ್ಷಕರು ಅನುಕೂಲ ಕಲ್ಪಿಸಿ ಕಲಿಕೆಯ ಫಲಿತಾಂಶವನ್ನು ಸುಧಾರಿಸುವದು ಇಂದಿನ ದಿನಗಳಲ್ಲಿ ಬಹುಮುಖ್ಯವಾಗಿದೆ ಎಂದು ವಿಜಯಪುರ ಡಯಟ್‌ನ ಉಪನಿರ್ದೇಶಕಿ ಉಮಾದೇವಿ ಸೊನ್ನದ ಶಿಕ್ಷಕರಿಗೆ ಕರೆ ನೀಡಿದರು.

ಅವರು ಇಂದು ಪಟ್ಟಣದ ಗುರುಭವನದಲ್ಲಿ ಶಾಲಾ ಶಿಕ್ಷಣ ಇಲಾಖೆ, ಎಸ್ ಎಸ್ ಕೆ, ಡಯಟ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ಇಂಡಿ ಹಾಗೂ ಚಡಚಣ ಶೈಕ್ಷಣಿಕ ವಲಯಗಳ ಬಿಇಓ, ಬಿ ಆರ್ ಸಿ ಹಾಗೂ ಸಿ ಆರ್ ಪಿ, ಬಿ ಆರ್ ಪಿ ರವರಿಗೆ ಹಮ್ಮಿಕೊಂಡಿರುವ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಜಾಗತಿಕ ಶಿಕ್ಷಣದ ಮೂಲಕ ಸುಸ್ಥಿರ ಅಭಿವೃದ್ಧಿ, ಸುಸ್ಥಿರ ಜೀವನಶೈಲಿ, ಮಾನವ ಹಕ್ಕುಗಳ ರಕ್ಷಣೆ ಮತ್ತು ಲಿಂಗ ಸಮಾನತೆಯನ್ನು ಉತ್ತೇಜಿಸಲು ಅಗತ್ಯವಿರುವ ಜ್ಞಾನ ಮತ್ತು ಕೌಶಲ್ಯಗಳನ್ನು ಮಕ್ಕಳಿಗೆ ಒದಗಿಸುವದು ಶಿಕ್ಷಕರ ಬಹುಮುಖ್ಯ ಕಾರ್ಯವಾಗಿದೆ ಎಂದರು.

ಡಯಟ್‌ನ ಉಪನ್ಯಾಸಕ ಅಬ್ದುಲ್‌ಹಿಮ ಮುಜಾವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಇಂಡಿ ಕ್ಷೇತ್ರ ಶಿಕ್ಷಣಾಧಿಕಾರಿ ಟಿ ಎಸ್ ಆಲಗೂರ ಮಾತನಾಡಿ, ಶಿಕ್ಷಕರು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಗುಣಾತ್ಮಕ ಶಿಕ್ಷಣ ನೀಡಲು ಮುಂದಾಗಬೇಕು ಎಂದರು.

ಚಡಚಣ ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತಾ ಹುನ್ನೂರ ಅವರು ಸುಸ್ಥಿರ ಅಭಿವೃದ್ಧಿ ಗುರಿಗಳ ಕುರಿತು ಮಾತನಾಡಿದರು. ಡಯಟ್ ಉಪನ್ಯಾಸಕ ನಾಗೇಂದ್ರ ಸಿನ್ನೂರ, ಸುಮಂಗಲಾ ಮಲ್ಲಾರಿ ಸುಸ್ಥಿರ ಅಭಿವೃದ್ಧಿ ಗುರಿಗಳ ಕುರಿತು ತರಬೇತಿ ನೀಡಿದರು.

ಕ್ಷೇತ್ರಸಮನ್ವಯ ಅಧಿಕಾರಿಗಳಾದ ಎಸ್ ಆರ್ ನಡುಗಡ್ಡಿ, ಬಿ ಎಸ್ ನಾಡಿಗೇರ ಹಾಗೂ ಇಂಡಿ ಚಡಚಣ ವಲಯದ 50 ಕ್ಕೂ ಹೆಚ್ಚು ಸಿ ಆರ್ ಪಿ ಹಾಗೂ ಬಿ ಆರ್ ಪಿ ಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಎ ಜಿ ಚೌಧರಿ ಸ್ವಾಗತಿಸಿದರು. ಬಿ ಆಯ್ ಗೊರನಾಳ ನಿರೂಪಿಸಿದರು.

## ಮುತ್ತಂಗಿ; ಪಿಕೆಪಿಎಸ್ ಚುನಾವಣೆಗೆ 19 ಜನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ತಾಲೂಕಿನ ಮುತ್ತಂಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಆಯ್ಕೆ ಚುನಾವಣೆ ಜನವರಿ 12ಕ್ಕೆ ಮತದಾನ ನಡೆಯಲ್ಲಿದು. ಒಟ್ಟು 12 ನಿರ್ದೇಶಕರ ಆಯ್ಕೆ ಪೈಕಿ ಒಟ್ಟು 19ಜನ ನಾಮಪತ್ರ ಅರ್ಜಿ ಸಲ್ಲಿಸಿ ಚುನಾವಣೆ ಕಣದಲ್ಲಿದ್ದಾರೆ ಎಂದು ಚುನಾವಣಾಧಿಕಾರಿ ಮೃತುಂಜಯ ತಿಳಿಸಿದ್ದಾರೆ. ಸಾಮಾನ್ಯ ಕ್ಷೇತ್ರದಲ್ಲಿ(08) ಪರಿಶಿಷ್ಟ ಜಾತಿ(04) ಪರಿಶಿಷ್ಟ ಪಂಗಡ(02) ಹಿಂದುಳಿದ ವರ್ಗ ಪ್ರವರ್ಗ(ಎ)(02) ಮಹಿಳಾ(03) ಹಿಂದುಳಿದ ವರ್ಗ ಪ್ರವರ್ಗ(ಬಿ) ಮತ್ತು ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರಕ್ಕೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇನ್ನು 10 ನಿರ್ದೇಶಕರ ಅಯ್ಕೆಗೆ 19ಜನ ನಾಮಪತ್ರ ಸಲ್ಲಿಸಿ ಚುನಾವಣೆ ಕಣದಲ್ಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಿಕೆಪಿಎಸ್ ಚುನಾವಣೆಗೆ 24 ನಾಮಪತ್ರ ಅರ್ಜಿ ಸಲ್ಲಿಕೆ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ತಾಲೂಕಿನ ನಿರ್ಣಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಅಯ್ಕೆ ಚುನಾವಣೆ ಜನವರಿ 12ಕ್ಕೆ ಮತದಾನ ನಡೆಯಲ್ಲಿದು. ಒಟ್ಟು 12 ನಿರ್ದೇಶಕರ ಆಯ್ಕೆಯ ಪೈಕಿ 24 ಜನ ಅಭ್ಯರ್ಥಿಗಳು ನಾಮಪತ್ರ ಅರ್ಜಿ ಸಲ್ಲಿಸಿ ಚುನಾವಣೆ ಕಣದಲ್ಲಿದ್ದಾರೆ ಎಂದು ಚುನಾವಣಾಧಿಕಾರಿ ಬಸವರಾಜಯ್ಯಾ ಸಾಲಿಮಠ ತಿಳಿಸಿದ್ದಾರೆ. ಸಾಮಾನ್ಯಕ್ಷೇತ್ರಕ್ಕೆ(10) ಪರಿಶಿಷ್ಟ ಜಾತಿ(2) ಪರಿಶಿಷ್ಟ ಪಂಗಡ(2) ಮಹಿಳಾ(04) ಪ್ರವರ್ಗ(ಎ)(02) ಪ್ರವರ್ಗ(ಬಿ)(02) ಸಾಲಗರರಲ್ಲದಕ್ಷೇತ್ರಕ್ಕೆ(02) ಒಟ್ಟು 24 ಜನ ಚುನಾವಣೆ ಕಣದಲ್ಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪೊಲೀಸ ಇಲಾಖೆಗೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಹೊಸ ವಾಹನಗಳ ಹಸ್ತಾಂತರ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕೆ.ಕೆ.ಆರ್.ಡಿ.ಬಿ ಹಾಗೂ ಕೊಪ್ಪಳ ಶಾಸಕರ ಅನುದಾನದಲ್ಲಿ ಕೊಪ್ಪಳ ಜಿಲ್ಲಾ ಪೊಲೀಸ್ ಇಲಾಖೆಗೆ ನೀಡಲಾದ 21 ಹೊಸ ವಾಹನಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಮಂಗಳವಾರ ಕೊಪ್ಪಳ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿ ಆವರಣದಲ್ಲಿ ಪೊಲೀಸ್ ಇಲಾಖೆಗೆ ಹಸ್ತಾಂತರಿಸಿದರು.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕೊಪ್ಪಳ ಜಿಲ್ಲಾ ಪೊಲೀಸ್ ಇಲಾಖೆಗೆ 2024-25ನೇ ಆರ್ಥಿಕ ವರ್ಷದಲ್ಲಿ ಮಂಜೂರಾಗಿರುವ 200 ಲಕ್ಷ ರೂ. ಅನುದಾನದಲ್ಲಿ ಪೊಲೀಸ್ ಇಲಾಖೆಯ ದೈನಂದಿನ ಕರ್ತವ್ಯಕ್ಕಾಗಿ 16 ಬುಲೆರೋ, 2 ಸ್ಕಾರ್ಪಿಯೋ ಮತ್ತು 1 ಇನ್ನೋವಾ ಕ್ರಿಸ್ಟಾ ವಾಹನಗಳನ್ನು ಹಾಗೂ ಕೊಪ್ಪಳ ಶಾಸಕರ ಅನುದಾನದಡಿ ಮಂಜೂರಾದ 20 ಲಕ್ಷ ರೂ. ಅನುದಾನದಲ್ಲಿ 2 ಬೋಲೆರೊ ಖರೀದಿಸಲಾಗಿದ್ದು, ಈ ವಾಹನಗಳ ಪೊಲೀಸ್ ಸೇವೆಗೆ ಸಚಿವರು, ಶಾಸಕರು ಈ ವಾಹನಗಳಿಗೆ ಹಸಿರು ನಿಶಾನೆ ತೋರಿಸಿದರ ಮೂಲಕ ಇಲಾಖೆಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ದಿ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತಕುಮಾರ, ಡಿವೈಎಸ್ಪಿ ಮುತ್ತಣ್ಣ ಸವರಗೋಳ, ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ ಸೇರಿದಂತೆ ಪೊಲೀಸ್ ಇಲಾಖೆ ಇತರೆ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



ಚಿಟಗುಪ್ಪ:- ಪುರಸಭೆ ಮುಖ್ಯಾಧಿಕಾರಿ ಹುಸಾಮುದ್ದೀನ್ ಬಾಬಾ ಅವರನ್ನು ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆ-ಯ ಕ್ಯಾಲೆಂಡರ್ ನೀಡಲಾಯಿತ್ತು. ಜೊತೆಯಲ್ಲಿ ಸಾಮಾಜಿಕ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ, ವರದಿಗಾರ ಸೈಯದ್ ಅಜೀಮ ಇದ್ದರು.

## ಬಂದಳ್ಳಿ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಜನವರಿ08-ಯಾದಗಿರಿ ಜಿಲ್ಲೆಯ ಬಂದಳ್ಳಿ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ 2025-26ನೇ ಸಾಲಿಗೆ 6ನೇ ತರಗತಿಗೆ ಶಾಲೆಯ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಸಿದ್ದಣ್ಣ ಅಣಬಿ ಅವರು ತಿಳಿಸಿದ್ದಾರೆ.

ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರೀಯ ಪಠ್ಯಕ್ರಮ ಹೊಂದಿರುವ ಏಕಲವ್ಯ ಮಾದರಿ ವಸತಿ ಶಾಲೆಗೆ 2025-26 ನೇ ಸಾಲಿಗೆ 6ನೇ ತರಗತಿಗೆ ಪ್ರವೇಶ ಕಲ್ಪಿಸಲು ಆದೇಶಿಸಿರುತ್ತಾರೆ. ಪ್ರಸ್ತುತ ವರ್ಷದಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿ ಸಲ್ಲಿಸಬಹುದು. ಪ್ರವೇಶಾತಿಯು ನವದೆಹಲಿಯ ರಾಷ್ಟ್ರೀಯ ಬುಡಕಟ್ಟು ವಿದ್ಯಾರ್ಥಿಗಳ ಶೈಕ್ಷಣಿಕ ಸಂಘ ರೂಪಿಸಿರುವ ನಿಯಮಗಳಿಗೆ ಬದ್ಧವಾಗಿ ಪರೀ-ಕ್ಷೆ ನಡೆಸಲಾಗುವುದು. 6ನೇ ತರಗತಿ ಏಕಲವ್ಯ ಮಾದರಿ ವಸತಿ ಶಾಲೆ ಬಂದಳ್ಳಿ ಪ್ರವೇಶಾತಿಗೆ 2025ರ ಜನವರಿ 31ರ ಒಳಗೆ ಅರ್ಜಿ ಸಲ್ಲಿಸಬೇಕು, 2025ರ ಫೆಬ್ರವರಿ 17 ರಂದು ಪ್ರವೇಶ ಪತ್ರ ಬಿಡುಗಡೆ ನೀಡಲಾಗುವುದು.

## ಮೃತ ರೇಣುಕಾ ಹಿರೇಮನಿ ಮನೆಗೆ ರಾಜ್ಯ ಬಿಜೆಪಿ ಸತ್ಯಶೋಧನಾ ತಂಡ ಭೇಟಿ ಸಾಂತ್ವಾನ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಕುಕನೂರು ತಾಲೂಕಿನ ಆಡೂರು ಗ್ರಾಮದ ಬಾಣಂತಿ ರೇಣುಕಾ ಪ್ರಕಾಶ್ ಹಿರೇಮನಿ ಅವರ ಮನೆಗೆ ಬಾಣಂತಿ ಮತ್ತು ಹಸುಗುಸು ಮೃತಪಟ್ಟ ಹಿನ್ನೆಲೆಯಲ್ಲಿ ಆಡೂರು ಗ್ರಾಮದ ಹಿರೇಮನಿ ಕುಟುಂಬದವರ ಮನೆಗೆ ರಾಜ್ಯ ಬಿಜೆಪಿ ಪಕ್ಷದ ಸತ್ಯಶೋಧನಾ ತಂಡ ಭೇಟಿ ನೀಡಿ ಸಾಂತ್ವನ ಹೇಳಿದರು.

ಕೇಂದ್ರ ಸರ್ಕಾರದ ಮಾತೃ ವಂದನ, ಪೋಷಣ ಅಭಿಯಾನ, ಜನನಿ ಸುರಕ್ಷಾ ಯೋಜನೆ ಯಾವುದನ್ನು ಸರಿಯಾಗಿ ಅನುಷ್ಠಾನ ಮಾಡದೆ ರಾಜ್ಯ ಸರ್ಕಾರ ವಿಫಲಗೊಂಡಿದೆ.

ಆರೋಗ್ಯ ಇಲಾಖೆಯಲ್ಲಿ ಅತಿ ಕಳಪೆ ಗುಣಮಟ್ಟದ ಔಷಧಿ ಪೂರೈಕೆ ಆಗುತ್ತಿದ್ದು ಇದರ ಬಗ್ಗೆ ಗಮನಹರಿಸದೆ ರಾಜ್ಯ ಸರ್ಕಾರದ ಆರೋಗ್ಯ ಇಲಾಖೆ ಸಚಿವರಾದ ದಿನೇಶ್ ಗುಂಡೂರವರು ಕೈಕಟ್ಟಿ ಕುಳಿತಿದ್ದಾರೆ ಎಂದು ಕು. ಮಂಜುಳಾ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಶಾಸಕ ಶೈಲೇಂದ್ರ ಬ್ಯಾಳೆ ರಾಜ್ಯ ಸರ್ಕಾರ ಬಾಣಂತಿಯರು ಮತ್ತು ಮಕ್ಕಳ ಸಾವಿನ ವಿಷಯಗಳನ್ನು ಗಂಭೀರವಾಗಿ ಪರಿಗಣಿಸದೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾನವೀಯತೆ ಇಲ್ಲದ ಸಚಿವರು ಸೌಜನ್ಯಕ್ಕಾದರೂ ಕುಟುಂಬದವರನ್ನು ಭೇಟಿ ಮಾಡುವ ಪ್ರಯತ್ನ ಕೂಡ ಮಾಡಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಹಾಲಪ್ಪ ಆಚಾರ್ ಅವರು ಮೃತ ರೇಣುಕಾ ಹಿರೇಮನಿ ಕುಟುಂಬದವರಿಗೆ ಸಾಂತ್ವನ ಹೇಳಿ ವೈಯಕ್ತಿಕ ಧನಸಹಾಯ ಮಾಡಿದರು.

ಈ ಸಂದರ್ಭದಲ್ಲಿ ಸತ್ಯಶೋಧನಾ ತಂಡದಲ್ಲಿ ವಿರೋಧ ಪಕ್ಷದ ಮುಖ್ಯ ಸಂಚೇತಕ ಶಾಸಕ ದೊಡ್ಡನಗೌಡ ಪಾಟೀಲ್, ಶಾಸಕ ಡಾ. ಅವಿನಾಶ ಜಾಧವ್, ಗಂಗಾವತಿ ಮಾಜಿ ಶಾಸಕ ಪರಣ್ಣ ಮನವಳ್ಳಿ, ಡಾ. ಬಸವರಾಜ ಕ್ಯಾವ ಟರ್, ಡಾ. ನಾರಾಯಣ, ಡಾ ಅರುಣ, ವಿಜಯಲಕ್ಷ್ಮಿ ಕರೂರ್, ಬಿಜೆಪಿ ಕೊಪ್ಪಳ ಜಿಲ್ಲಾಧ್ಯಕ್ಷ ನವೀನ ಗುಳಗಣ್ಣನವರ್, ಮಾರುತಿ ಗಾವರಳ, ವೀರಣ್ಣ ಹುಬ್ಬಳ್ಳಿ, ಶಿವಕುಮಾರ್ ನಾಗಲಾಪುರ ಮಠ, ಬಸವರಾಜ್ ಆಳಕೇರಿ, ಲಕ್ಷ್ಮಣ್ ಕಾಳೆ, ಕರಬಸಯ್ಯ ಬಿನ್ನಾಳ, ಸಿದ್ದಲಿಂಗಯ್ಯ ಉಳ್ಳಾಗಡ್ಡಿ, ಬಾಲರಾಜ್ ಗಾಳಿ, ಜಗದೀಶ್ ಸೋಡಿ, ಪ್ರಕಾಶ್ ಹಿರೇಮನಿ, ಹಾಗೂ ಬಿಜೆಪಿ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

## ಸಚಿನ್ ಸಾವು ಪ್ರಕರಣ ನ್ಯಾಯಾಂಗ ತನಿಖೆ ನಡೆಸಿ : ಜಿಲ್ಲಾ ವಿಶ್ವಕರ್ಮ ಸಮಾಜದಿಂದ ಪ್ರತಿಭಟನಾ ಮೆರವಣಿಗೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕಲಬುರಗಿ ಗುತ್ತಿಗೆದಾರ ಸಚಿತ್ ಪಂಚಾಳ ಅವರ ಸಾವಿನ ಪ್ರಕರಣವನ್ನು ನ್ಯಾಯಾಂಗ ತನಿಖೆ ನಡೆಸಿ ನೊಂದ ಕುಟುಂಬಕ್ಕೆ ನ್ಯಾಯ ಕೊಡಬೇಕು ಎಂದು ಒತ್ತಾಯಿಸಿ ಜಿಲ್ಲಾ ವಿಶ್ವಕರ್ಮ ಸಮಾಜದಿಂದ ನಗರದ ಅಶೋಕ ವೃತ್ತದಿಂದ ಡಿಸಿ ಕಚೇರಿಯ ವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿ ಸರ್ಕಾರಕ್ಕೆ ಒತ್ತಾಯಿಸಲಾಯಿತು.

ಕಲಬುರಗಿಯ ಗುತ್ತಿಗೆದಾರ ಸಚಿನ್ ಪಾಂಚಾಳ ಸಾವಿನ ಪ್ರಕರಣ ನಿಜಕ್ಕೂ ಸಮಾಜಕ್ಕೆ ನೋವು ತರುವಂತಾಗಿದೆ. ಇಂದು ಯುವಕರು ರಾಜಕಾರಣಕ್ಕೆ ಹಾಗೂ ಉದ್ಯಮಕ್ಕೆ ಬರುವುದು ಕಷ್ಟದ ಕೆಲಸವಾಗುತ್ತಿದೆ. ಸಚಿನ್ ಅವರು ಗುತ್ತಿಗೆದಾರನಾಗಿ ಕೆಲಸ ನಿರ್ವಹಿಸುತ್ತಿದ್ದರು. ಅವರಿಗೆ ರಾಜಕಾರಣದ ಒತ್ತಡ ಸೇರಿದಂತೆ ನಾನಾ ಕಾರಣಗಳಿಂದ ಮಾನಸಿಕ ತೊಂದರೆಯನ್ನ ಅನುಭವಿಸಿದ್ದಾರೆ. ಇಂತಹ ವ್ಯವಸ್ಥೆಯಿಂದಾಗಿ ಅವರ ಸಾವು ಸಂಭವಿಸಿದೆ. ಇದರಿಂದ ಮೃತ ಗುತ್ತಿಗೆದಾರನ ಕುಟುಂಬವು ತುಂಬ ದುಃಖದಲ್ಲಿ ಮುಳುಗಿದೆ. ಕೂಡಲೇ ಸರ್ಕಾರವು ಅವರಿಗೆ ಸಾಂತ್ವಾನ ಹೇಳಿ ಪರಿಹಾರ ಕೊಡುವ ಕೆಲಸ ಮಾಡಲಿ ಎಂದು ಒತ್ತಾಯಿಸಿದರು.

ರಾಜಕೀಯ ಒತ್ತಡ, ದಬ್ಬಾಳಿಕೆ, ದೌರ್ಜನ್ಯಗಳು ನಿಲ್ಲಬೇಕಿದೆ. ಇಂದು ಯುವ ಸಮೂಹ ಗುತ್ತಿಗೆದಾರರ ಕೆಲಸ ಮಾಡಲು ಹೆದರುವಂತ ಪರಿಸ್ಥಿತಿ ಉಲ್ಬಣಿಸಿದೆ. ಸಚಿನ್ ಅವರು ಇಡೀ ಕುಟುಂಬಕ್ಕೆ ಆಸರೆಯಾಗಿದ್ದರು. ಅವರ ಆತ್ಮಹತ್ಯೆ ಮುನ್ನಾ ಡೆತ್‌ನೋಟ್ ಬರೆದಿಟ್ಟಿದ್ದಾನೆ. ಇದನ್ನು ತನಿಖೆ ಮಾಡಬೇಕು. ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಿದರೆ ಎಲ್ಲವೂ ಬೆಳಕಿಗೆ ಬರಲಿದೆ. ಆತನ ಸಾವಿಗೆ ಕಾರಣರಾದ ಎಲ್ಲರನ್ನು ಬಂಧಿಸಬೇಕು. ತಕ್ಷಣ ಮೃತ ಗುತ್ತಿಗೆದಾರನ ಕುಟುಂಬಕ್ಕೆ ಪರಿಹಾರ ನೀಡಬೇಕು ಹಾಗೂ ಆ ಕುಟುಂಬದಲ್ಲಿ ಒಬ್ಬರಿಗೆ ಸರ್ಕಾರಿ ನೌಕರಿ ಕೊಡಬೇಕು ಎಂದರು. ಗುತ್ತಿಗೆದಾರರಿಗೆ ಆಗುತ್ತಿರುವ ಕಿರುಕುಳ ತಡೆಗೆ ದೌರ್ಜನ್ಯ ಹಾಗೂ ಶೋಷಣೆ ತಡೆಗೆ ಸರ್ಕಾರವು ಕಾನೂನು ಜಾರಿ ಮಾಡಬೇಕು ಎಂದು ಒತ್ತಾಯಿಸಿ ವಿಶ್ವಕರ್ಮ ಸಮಾಜದ ಜಿಲ್ಲಾ ಘಟಕ ಸೇರಿ ವಿವಿಧ ಘಟಕಗಳಿಂದ ನಗರದ ಅಶೋಕ ವೃತ್ತದಿಂದ ಡಿಸಿ ಕಚೇ-ರಿಯ ವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿ ಸರ್ಕಾರಕ್ಕೆ ಒತ್ತಾಯಿಸಿತು. ಡಿಸಿ ಕಚೇರಿ ಮುಂದೆ ಅರ್ಧ ಗಂಟೆಗೂ ಹೆಚ್ಚುಕಾಲ ಪ್ರತಿಭಟನೆ ನಡೆಸಿ ಎಸಿ ಕ್ಯಾ.ಮಹೇಶ ಮಾಲಗಿತ್ತಿ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿತು.

ಪ್ರತಿಭಟನೆಯಲ್ಲಿ ಲೇಬಗೇರಿಯ ನಾಗಮೂರ್ತೇಂದ್ರ ಮಹಾ ಸ್ವಾಮಿಗಳು, ನಾಗಲಿಂಗ ಮಹಾ ಸ್ವಾಮಿಗಳು, ಸಿರಸಪ್ಪಯ್ಯ ಸ್ವಾಮಿಗಳು, ಮುದ್ದಾಬಳ್ಳಿಯ ಗುರುನಾಥ ಸ್ವಾಮಿಗಳು, ಗಿಣಗೇರಿಯ ಶ್ರೀಕಂಠ ಸ್ವಾಮಿಗಳು ನೇತೃತ್ವದಲ್ಲಿ ವಿಶ್ವಕರ್ಮ ಸಮಾಜದ ಜಿಲ್ಲಾಧ್ಯಕ್ಷ ನಾಗೇಶ ಕುಮಾರ ಕಮ್ಸಾಳ, ಜಿಲ್ಲಾ ಗೌರವಾಧ್ಯಕ್ಷ ಈಶಪ್ಪ ಬಡಿಗೇರ, ಜಿಲ್ಲಾ ಕಾರ್ಯಾಧ್ಯಕ್ಷ ರುದ್ರಪ್ಪ ಬಡಿಗೇರ, ವಿವಿಧ ತಾಲೂಕು ಅಧ್ಯಕ್ಷರುಗಳಾದ ದೇವೇಂದ್ರಪ್ಪ ಬಡಿಗೇರ, ಶಂಕ್ರಪ್ಪ ಬಡಿಗೇರ, ಕಾಳೇಶ ಬಡಿಗೇರ, ದೇವಪ್ಪ ಬಡಿಗೇರ, ಸೂಗೂರೇಶ್ವರ ಅಕ್ಕಸಾಲಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಪ್ರಕಾಶ, ಸಮಾಜದ ಮುಖಂಡರಾದ ಪ್ರಭಾಕರ ಬಡಿಗೇರ, ಕಲ್ಲೇಶ ಬಡಿಗೇರ, ದೇವೇಂದ್ರಪ್ಪ ರಾಜೂರು, ಕೃಷ್ಣಾ ಬಡಿಗೇರ, ಮೌನೇಶ ಮಾದಿನೂರು, ಶರಣಪ್ಪ ಬಡಿಗೇರ, ವೀರಭದ್ರಪ್ಪ ಬಡಿಗೇರ, ಮಂಜುನಾಥ ಬಡಿಗೇರ, ಮೌನೇಶ ಕಿನ್ನಾಳ, ಬ್ರಹ್ಮಾನಂದ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಡಾ.ಕೆ.ಆರ್.ದುರುಗೇಶ್ ಅಧಿಕಾರ ಸ್ವೀಕಾರ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರುಜ.08-:ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಡಾ.ಕೆ.ಆರ್. ದುರುಗೇಶ್ ಅವರು ಸೋಮವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಯಾಗಿರುವ ದುರುಗೇಶ್ ಅವರಿಗೆ ಇದೀಗ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಹುದ್ದೆಯ ಹೆಚ್ಚುವರಿ ಪ್ರಭಾರ ವಹಿಸಿ ಆದೇಶಿಸಲಾಗಿದೆ.

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರ ವೈಯಕ್ತಿಕ ಗಮನಕ್ಕೆ ತರುವಂತಹ ಪತ್ರಗಳು ಹಾಗೂ ಅರೆ ಸರಕಾರಿ ಪತ್ರಗಳನ್ನು ಡಾ.ಕೆ.ಆರ್.ದುರುಗೇಶ್ ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು ಐ.ಡಿ.ಎಸ್.ಎಮ್.ಟಿ ಬಡವಾಣೆ, ಮಂತ್ರಾಲಯ ರೋಡ್, ರಾಯಚೂರಿಗೆ ಕಳುಹಿಸಿಕೊಡುವಂತೆ ಪ್ರಕಟಣೆ ತಿಳಿಸಿದೆ.

## ಜನ ವಿರೋಧಿ ಬೆಲೆ ಏರಿಕೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಜೆಡಿಎಸ್ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಭ್ರಷ್ಟಾಚಾರ, ನಿರಂತರ ಬೆಲೆ ಏರಿಕೆ ಹಾಗೂ ದುರಾಡಳಿತದಲ್ಲಿ ನಿರತವಾಗಿರುವ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರದ ಅಂತ್ಯ ಸನ್ನಿಹಿತವಾಗಿದೆ ಎಂದು ಜೆ ಡಿ (ಎಸ್) ರಾಜ್ಯ ಕೋರ್ ಕಮಿಟಿ ಸದಸ್ಯರಾದ ಸಿ ವಿ ಚಂದ್ರಶೇಖರ್ ವಾಗ್ದಾಳಿ ನಡೆಸಿದರು.

ಬೆಲೆ ಏರಿಕೆ ವಿರುದ್ಧ ನಗರದ ಬಸವೇಶ್ವರ ವೃತ್ತದಲ್ಲಿ ಜೆ ಡಿ (ಎಸ್) ಪಕ್ಷ ಆಯೋಜಿಸಿದ್ದ ಪ್ರತಿಭಟನಾ ರ್‍ಯಾಲಿಯಲ್ಲಿ ಅವರು ಮಾತನಾಡುತ್ತಿದ್ದರು.

ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಹಳ್ಳ ಹಿಡಿದಿದೆ ಎಂದು ಕೊಪ್ಪಳದ ಶಾಸಕರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕ್ಷೇತ್ರದಲ್ಲಿ ರಸ್ತೆಗಳೇ ಮಾಯವಾಗಿವೆ. ಮರಳು ದಂಧೆ ಹೇಳತಿರದಾಗಿದೆ. ಹಿರೇಹಳ್ಳದಲ್ಲಿ ಸುಮಾರು ಒಂದು ನೂರು ಯಂತ್ರಗಳು ಪ್ರತಿನಿತ್ಯ ಮರಳಿಗೆ ಕನ್ನ ಹಾಕುತ್ತಿವೆ. ಶಾಸಕರು ಹಾಗೂ ಲೋಕಸಭಾ ಕ್ಷೇತ್ರದ ಸದಸ್ಯರಾದ ಅವರ ಸಹೋದರ ಕುಟುಂಬ ರಾಜಕಾರಣದಲ್ಲಿ ತೊಡಗಿಕೊಂಡಿದ್ದಾರೆ. ನಮ್ಮ ಕ್ಷೇತ್ರ ಕೊಪ್ಪಳ ರಿಪಬ್ಲಿಕ್ ಆಗಿ ಪರಿವರ್ತನೆಗೊಂಡಿದೆ. ಮೂರನೇ ಸಲ ಶಾಸಕರಾದರೂ ಅಭಿವೃದ್ಧಿಯನ್ನೇ ಮಾಡದ ಇವರಿಗೆ ಜನ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ನಂತರ ಜಿಲ್ಲಾಧ್ಯಕ್ಷ ಸುರೇಶ ಭೂಮರೆಡ್ಡಿ ಮಾತನಾಡಿ "ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗ ಸಿದ್ದರಾಮಯ್ಯನವರ ಮೇಲೆ ಜನರು ಅಪಾರವಾದ ನಿರೀಕ್ಷೆ ಇಟ್ಟಿದ್ದರು. ಆದರೆ ನಿರಂತರ ಬೆಲೆ ಏರಿಕೆ ಮಾಡುವ ಮೂಲಕ ಜನರ ಭಾವನೆಗಳಿಗೆ ಸಿದ್ದರಾಮಯ್ಯನವರು ಕೊಳ್ಳಿ ಇಟ್ಟಿದ್ದಾರೆ. ಬಸ್ ದರ, ಹಾಲಿನ ದರ ಸ್ಟ್ಯಾಂಪ್ ಪೇಪರ್ ದರ ಹೆಚ್ಚಿಸಲಾಗಿದೆ.

ಗುತ್ತಿಗೆದಾರರು ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರಕ್ಕಾಗಿ ಒಳಜಗಳ ತಾರಕಕ್ಕೇರಿದೆ. ಇದರಿಂದ ಅಭಿವೃದ್ಧಿ ಕುಂಠಿತಗೊಂಡು ಜನ ಹಿಡಿ ಶಾಪ ಹಾಕುವಂತಾಗಿದೆ," ಎಂದು ಟೀಕಿಸಿದರು.

ಬಸ್ ದರ ಏರಿಕೆಯಿಂದ ಸಾಮಾನ್ಯ ಜನ ತತ್ತರಿಸಿ ಹೋಗಿದ್ದಾರೆ. ಗೃಹಲಕ್ಷ್ಮಿ, ಶಕ್ತಿ ಯೋಜನೆ, ಗ್ಯಾರಂಟಿ ಯೋಜನೆ ಎಂದು ಸರಕಾರ ಒಂದು ಕಡೆ ಪುಕ್ಕಟೆ ಹಣ ನೀಡಿ ಇನ್ನೊಂದು ಕಡೆ ಬೆಲೆ ಏರಿಸುವ ಮೂಲಕ ದುರಾಡಳಿತ ನಡೆಸಿದೆ ಎಂದು ಜೆಡಿಎಸ್ ಮುಖಂಡ ಈಶಪ್ಪ ಮಾದನೂರ ವಾಗ್ದಾಳಿ ನಡೆಸಿದರು.

ಜೆಡಿಎಸ್ ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ ಮಾತನಾಡಿ ಸರಕಾರ ಸಾರಾಯಿಯನ್ನು ಮುಕ್ತವಾಗಿ ಹಂಚಿಕೆ ಮಾಡುವ ಮೂಲಕ ಸಾಮಾಜಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿದೆ. ಕೊಪ್ಪಳ- ಕುಷ್ಟಗಿ ರೈಲ್ವೆ ಮೇಲು ಸೇತುವೆಗೆ ತಮ್ಮ ಕೊಡುಗೆ ಎಂದು ಬೋರ್ಡ್ ಹಾಕಿಸುವ ಮೂಲಕ ಕಾಂಗ್ರೆಸ್ ಪಕ್ಷದ ನಾಯಕರಾದ ಸಂಗಣ್ಣ ಕರಡಿಯವರು ಸತ್ಯಕ್ಕೆ ಮಸಿ ಬಳಿದಿದ್ದಾರೆ. ತಮ್ಮ ಸ್ವ-ಂತ ಹಣದಿಂದ ಸೇತುವೆಯನ್ನು ಅವರು ನಿರ್ಮಿಸಿಲ್ಲ. ಅದನ್ನು ನಿರ್ಮಿಸಿದ್ದು ಕೇಂದ್ರ ಸರಕಾರ. ಅವರಿಗೆ ಕನಿಷ್ಠ ಮಾನ ಮರ್ಯಾದೆ ಇದ್ದಿದ್ದರೆ ಇಂತಹ ಕೆಲಸಗಳನ್ನು ಮಾಡುತ್ತಿರಲಿಲ್ಲ. ವಿರೋಧ ಪಕ್ಷದ ಕಾರ್ಯಕರ್ತರು ಸರಕಾರದ ದುರಾಡಳಿತವನ್ನು ಪ್ರಶ್ನಿಸಿ ಪ್ರತಿಭಟನೆ ನಡೆಸಿದರೆ ಸರಕಾರ ಅಧಿಕಾರಿಗಳನ್ನು ಬಳಸಿಕೊಂಡು ಅವರ ಮೇಲೆ ಕೇಸ್ ಹಾಕುತ್ತಿದೆ. ಇದು ಅಂಬೇಡ್ಕರ್ ಅವರು ನೀಡಿದ ಸಂವಿಧಾನವನ್ನು ಗೌರವಿಸುವ ರೀತಿಯೇ? ಇದಕ್ಕೆ ಜನ ತಕ್ಕ ಪಾಠ ಕಲಿಸಲಿದ್ದಾರೆ ಎಂದರು

ರಾಜ್ಯ ಸರ್ಕಾರ ದಿವಾಳಿಯಾಗಿದ್ದು ಜನರನ್ನ ದಿಕ್ಕು ತಪ್ಪಿಸಿ ಹೆಂಡತಿ ಕೈಗೆ ಒಂದು ರೂಪಾಯಿ ಕೊಟ್ಟು ಗಂಡ ಮಗನ ಜೇಬಿನಿಂದ 10ರೂಪಾಯಿ ಕದಿಯುವ ಹುನ್ನಾರ ನಡೆಸಿದೆ ಜನ ಮೂರ್ಖರಲ್ಲ ಸಿದ್ದರಾಮಯ್ಯ ಸರ್ಕಾರಕ್ಕೆ ತಕ್ಕ ಉತ್ತರ ನೀಡುತ್ತಾರೆ ಎಂದು ಜೆಡಿಎಸ್ ಮುಖಂಡ ಕರಿಯಪ್ಪ ಹಾಲವರ್ತಿ ಕಿಡಿಕಾರಿದರು.

ನಂತರ ಸ್ಥಳಕ್ಕೆ ಆಗಮಿಸಿದ ಸಹಾಯಕ ಆಯುಕ್ತರಾದ ಮಹೇಶ ಮಾಲಗಿತ್ತಿ ಮನವಿ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ನಾಯಕರಾದ ದೇವಪ್ಪ ಕಟ್ಟಿಮನಿ, ಶರಣಪ್ಪ ಜಡಿ, ವೀರೇಶಗೌಡ ಬಗನಾಳ, ಮಾರುತಿ ಪೇರಮಿ, ರಮೇಶ ಡಂಬರಳ್ಳಿ, ಹುಚ್ಚಪ್ಪ ಚೌದ್ರಿ, ಮಂಜುನಾಥ ಕುಣಕೇರಿ, ಯಮನಪ್ಪ ಕಟಿಗಿ, ಸೋಮನಗೌಡ, ಶಾಂತಕುಮಾರ, ಆನಂದ ಕರ್ಕಿಹಳ್ಳಿ, ಮೂರ್ತಪ್ಪ ಗೀಣಗೇರಿ, ಮಹೇಶ ಆಗಳಕೇರಿ, ದೇವರಾಜ ಆಗಳಕೇರಿ, ಮೆಹಮೂದ ಹುಸೇನಿ ಬಲ್ಲೆ, ವಿರೂಪಾಕ್ಷಗೌಡ, ವಸಂತ ಹಟ್ಟಿ, ಪ್ರವೀಣ ಇಟಗಿ, ರುದ್ರೇಶ ಕೊಪ್ಪಳ, ಮಲ್ಲಪ್ಪ ಹಂದ್ರಾಳ, ಮಹೇಶ ಮಾದನೂರ, ಯಂಕಪ್ಪ ಕಲಕೇರಿ, ಮಹೇಶ ಕಂದಾರಿ, ಸಿದ್ದರೆಡ್ಡಿ, ಶರಣಪ್ಪ ಸಾಲಮನಿ, ಭೀಮರಡ್ಡಿ ಗದ್ದಿಕೇರಿ, ವಿಜಯ ಕುಮಾರ್ ಪೂಜಾರ, ಮಂಜುನಾಥ್ ಸೊರಟೂರ

ಸೇರಿದಂತೆ ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

## ಜನನ-ಮರಣ ನೋಂದಣೆ ಬಗ್ಗೆ ನಕಲು ಪ್ರತಿ ಬರೆಯುವುದನ್ನು ಕಂಡು ಬಂದರೆ ಕ್ರಮಕೈಗೊಳ್ಳಲು ಸೂಚನೆ:ಜಿಲ್ಲಾಧಿಕಾರಿ ಬಿ ಫೌಜಿಯಾ ತರನ್ನುಮ್

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಜನವರಿ 08- ಜನನ -ಮರಣ ನೋಂದಣಿ ಬಗ್ಗೆ-ಮರು ನೋಂದಣಿ, ನಕಲು ಪ್ರತಿ ಬರೆಯುತ್ತಿರುವುದು ಕಂಡು ಬಂದಿರುವ ಹಿನ್ನಲೆಯಲ್ಲಿ ಅಂಥವರ ವಿರುದ್ಧ ಅಧಿಕಾರಿ ಅಥವಾ ಸಿಬ್ಬಂದಿಯಾಗಲಿ ನೇರವಾಗಿ ಎಫ್.ಐ.ಆರ್. ದಾಖಲು ಮಾಡಲು ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಸೂಚಿಸಿದರು.



ಸೋಮವಾರದಂದು ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ 2024-25ನೇ ಸಾಲಿನ ಎರಡನೇ ತ್ರೈಮಾಸಿಕ ಜಿಲ್ಲಾಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯಾವುದೇ ರೀತಿಯ ರೈತರಿಗೆ ತೊಂದರೆಯಾಗಕೂಡದು, ರೈತರಿಗೆ ಸಿಗಬೇಕಾದ ಸವಾಲತ್ತುಗಳನ್ನು ನೀಡಬೇಕು ಎಂದರು.

2024-25 ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮ್ (ವಿಮಾ) ಯೋಜನೆಯಡಿ ಬೆಳೆ ಕಟಾವು ಪ್ರಯೋಗಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೃಷಿ ಅಂಕಿ ಆಂಶಗಳನ್ನು ಸುಧಾರಣೆಗಾಗಿ 11 ನೇ ಕೃಷಿ ಗಣತಿಯ ಎರಡನೇ ಹಂತದ ಮುಕ್ತಾಯದ ಕುರಿತು ಮತ್ತು ಜನನ-ಮರಣ ನೋಂದಣಿಯ ಕುರಿತು ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಬಗ್ಗೆ ಚರ್ಚಿಸಲಾಯಿತು,.

ತಾಲೂಕು ಹೊಬಳ್ಳಿ ಗ್ರಾಮಮಟ್ಟದಲ್ಲಿ ಜನನ-ಮರಣ ನೋಂದಣಿ ಬಗ್ಗೆ ಜಾಗೃತಿ ಮೂಡಿಸಲು ಸೂಚಿಸಿದರು. ಪ್ರತಿ ವರ್ಷ ಋತುವಾರು ( ಮುಂಗಾರು, ಹಿಂಗಾರು, ಹಾಗೂ ಬೇಸಿಗೆ ) ಬೆಳೆ ಕ್ಷೇತ್ರ ಮರು ಹೊಂದಾಣಿಕೆ ವರದಿಯನ್ನು ತಯಾರಿಸುವುದು. ಬೆಳೆ ಸಮೀಕ್ಷೆ ತಂತ್ರಾಂಶದಲ್ಲಿ ಗ್ರಾಮವಾರು ಬೆಳೆ ಕ್ಷೇತ್ರ ಅಂತಿಮಗೊಳಿಸಲು ನಿಗದಿತ 7-10 ದಿನಗಳ ಕಾಲಾವಕಾಶ ಮಾತ್ರ ಇರುತ್ತದೆ ಎಂದರು.

ಗ್ರಾಮವಾರು ಬೆಳೆಗಳು ಕ್ಷೇತ್ರವನ್ನು ಅಂತಿಮಗೊಳಿಸುವಾಗ, ಗ್ರಾಮದಲ್ಲಿ ಸಮೀಕ್ಷೆಯನ್ನು ಕೈಗೊಳ್ಳುವ ಸಂದರ್ಭದಲ್ಲಿ ಕೈಬಿಟ್ಟು ಹೋದ ಬೆಳೆಗಳ ಕ್ಷೇತ್ರವನ್ನು ಸೇರ್ಪಡೆ ಮಾಡಬೇಕಾದರೆ ಸಂಬಂಧಪಟ್ಟ ಮೇಲಾಧಿಕಾರಿಗಳು ನಿಗದಿತ (7-10) ದಿನಗಳ ಕಾಲಾವಕಾಶ ನೀಡಿರುವ ಸಮಯದಲ್ಲಿ ಬೆಳೆಗಳ ವಿಸ್ತೀರ್ಣವನ್ನು ದೃಢೀಕರಿಸಿ ವರದಿಯನ್ನ ಸಲ್ಲಿಸಿದ್ದಲ್ಲಿ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಬೆಳೆಗಳ ವಿಸ್ತೀರ್ಣವನ್ನು ಸೇರ್ಪಡೆ ಮಾಡಬಹುದು ಎಂದರು.

ಮೊದಲನೇ ಹಂತದಲ್ಲಿ ಹಿಡುವಳಿದಾರರ ಪಟ್ಟಿಯೊಂದಿಗೆ ಅವರು ಹೊಂದಿರುವ ಕ್ಷೇತ್ರ ಮತ್ತು ಸಾಮಾಜಿಕ ಗುಂಪು ಮತ್ತು ಲಿಂಗ ಇವುಗಳಿಗೆ ಸಂಬಂಧಿತದಾಗಿರುತ್ತದೆ ಈಗಾಗಲೇ ಮೊದಲ ಹಂತದ ಕ್ಷೇತ್ರ ಪೂರ್ಣಗೊಂಡಿರುತ್ತದೆ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ಎರಡನೇ ಹಂತದಲ್ಲಿ ಒಟ್ಟು 188 ಗ್ರಾಮಗಳು ಕಲಬುರಗಿ ಜಿಲ್ಲೆಗೆ ಆಯ್ಕೆಯಾಗಿರುತ್ತವೆ ಎರಡನೇ ಹಂತವು ಕ್ಷೇತ್ರ ಸಮೀಕ್ಷೆಯನ್ನು 2021-22 ಆಧಾರ ವರ್ಷವೆಂದು ಪರಿಗಣಿಸಿ ಸಮೀಕ್ಷೆ ಕೈಗೊಳ್ಳುವುದು ಎಂದರು.

ರೈತರಿಗೆ ಅರಿವು ಮೂಡಿಸುವುದು ಸರಕಾರ ಯೋಜನೆಗಳ ತಾಲ್ಲೂಕು ಮಟ್ಟದಲ್ಲಿ ಜನರಿಗೆ ಅರಿವು ಮೂಡಿಸುವ ಕೆಲಸಗಳನ್ನು ಮಾಡಬೇಕೆಂದರು. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಅಡಿಯಲ್ಲಿ ಸಿಗಬೇಕಾದ ಸವಲತ್ತುಗಳ ಬಗ್ಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಶರಣಯ್ಯ ಮಠಪತಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಸಮದ್ ಪಟೇಲ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಸಂತೋಷ ಇನಾಂದರ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಜಯಶ್ರೀ ಕರಗಿ, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಸಂತೋಷ ಕುಮಾರ ಪಾಟೀಲ, ವಿಮಾ ಕಂಪನಿಯ ಪ್ರತಿ ನಿಧಿ ಸೇರಿದಂತೆ ನೋಡಲ್ ಅಧಿಕಾರಿಗಳು ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

## ಜ. 21 ರಂದು ಅಂಬಿಗರ ಚೌಡಯ್ಯ

# ಜಯಂತಿ ಆಚರಣೆ



ಮಲ್ಲಮ ನುಡಿ ವಾರ್ತೆ

ಕಲಬುರಗಿ:ಜ.8: ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಅರ್ಥಪೂರ್ಣವಾಗಿ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿಯನ್ನುಆಚರಿಸಲಾಗುತ್ತಿದೆ ಎಂದು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅವರು ಹೇಳಿದರು.

ಮಂಗಳವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜನವರಿ 21ರಂದು ಮಧ್ಯಾಹ್ನ 2 ಗಂಟೆಗೆ ಡಾ.ಎಸ್.ಎಂ. ಪಂಡಿತರಂಗಮಂದಿರದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಶಿಷ್ಟಾಚಾರದಂತೆಅತಿಥಿಗಣ್ಯರನ್ನು ಆಹ್ವಾನಿಸಲು ವೇದಿಕೆ ಆಹ್ವಾನ ಪತ್ರಿಕೆ ಸೇರಿದಂತೆ ಇನ್ನಿತರ ಸಿದ್ಧತೆಗಳನ್ನುಮಾಡಿಕೊಳ್ಳಲಾಗುತ್ತದೆ ಎಂದರು.

ಕುಡಿಯುವ ನೀರಿನ ಸಭಾಂಗಣ ಸುತ್ತಮುತ್ತಲ್ಲಿನ ಸ್ವಚತೆ ಕುರಿತು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಳಿಗ್ಗೆ 9 ಗಂಟೆಗೆ ಜಿಲ್ಲೆಯ ಎಲ್ಲ ಸರ್ಕಾರಿ ಅರೆ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಕಚೇರಿಗಳಲ್ಲಿ ಜಯಂತಿಯನ್ನು ಆಚರಿಸಬೇಕೆಂದರು. ಈ ಜಯಂತಿಯು ಜನವರಿ 21 ರಂದು ಆಚರಣೆಗೆ ಸಕಲ ಕ್ರಮಕೈಗೊಳ್ಳಬೇಕು.ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಜಯಂತ್ಯೋತ್ಸವ ಸಮಿತಿಯ ಅಧ್ಯಕ್ಷರಾದ ಶಿವಾನಂದ ರಾಯಪ್ಪ ಹೊನ್ನಗುಂಟಿ ಅವರನ್ನುನೇಮಿಸಲಾಯಿತು.

ಒಬ್ಬ ನುರಿತ ಉಪನ್ಯಾಸಕ ಒಬ್ಬ ಸಮಿತಿಯ ಅಧ್ಯಕ್ಷರನ್ನು ನೇಮಿಸಲು ಸೂಚಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ವಿವಿಧ ಶಾಲೆಗಳ ಸಹಯೋಗದೊಂದಿಗೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜಿಸಬೇಕು.ಸಿಬ್ಬಂದಿಗಳು ಆಯಾ ಸಮಾಜದ ಮುಖಂಡರು ಸಂಘ ಸಂಸ್ಥೆಗಳವರು ತಪ್ಪದೇ ಜಯಂತಿಯನ್ನು ಯಶಸ್ವಿಗೊಳಿಸುವಂತೆ ಸಲಹೆ ಸೂಚನೆಗಳನ್ನ ನೀಡಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ದತ್ತಪ್ಪ ಸಾಗನೂರ, ಜಿಲ್ಲಾಮಟ್ಟದ ಅಧಿಕಾರಿಗಳಾದ ಸಮಾಜ ಮುಖಂಡರಾದ ಶಾಂತಪ್ಪ ಕೂಡಿ, ಬಸವರಾಜು ಬೂದಿಯಾಳ, ಪ್ರಕಾಶ ಕಮಕನೂರ, ನಟರಾಜ ಕಟ್ಟಿ, ಸಂತೋಷ ತಳವಾರ , ರಮೇಶ ಫೆರೋಜಾಬಾದ ಉಪಸ್ಥಿತರಿದ್ದರು.

## ಜ. 19 ರಂದು ವೇಮನ ಜಯಂತಿ ಆಚರಣೆ



ಮಲ್ಲಮ ನುಡಿ ವಾರ್ತೆ

ಕಲಬುರಗಿ:ಜ.8: ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಅರ್ಥಪೂರ್ಣವಾಗಿ ವೇಮನ ಜಯಂತಿಯನ್ನು ಆಚರಿಸಲಾಗುತ್ತಿದೆ ಎಂದು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅವರು ಹೇಳಿದರು.

ಮಂಗಳವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಶ್ರೀಮಹಾಯೋಗಿ ವೇಮನಜಯಂತಿಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜನವರಿ 19 ರಂದು ಬೆಳಿಗ್ಗೆ 11 ಗಂಟೆಗೆ ಡಾ.ಎಸ್.ಎಂ. ಪಂಡಿತರಂಗಮಂದಿರದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಶಿಷ್ಟಾಚಾರದಂತೆಅತಿಥಿಗಣ್ಯರನ್ನು ಆಹ್ವಾನಿಸಲು ವೇದಿಕೆ ಆಹ್ವಾನ ಪತ್ರಿಕೆ ಸೇರಿದಂತೆ ಇನ್ನಿತರ ಸಿದ್ಧತೆಗಳನ್ನುಮಾಡಿಕೊಳ್ಳಲಾಗುತ್ತದೆ ಎಂದರು. ಕುಡಿಯುವ ನೀರಿನಸಭಾಂಗಣಸುತ್ತಮುತ್ತಲ್ಲಿನ ಸ್ವಚತೆ ಕುರಿತು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.ಬೆಳಿಗ್ಗೆ 9 ಗಂಟೆಗೆ ಜಿಲ್ಲೆಯ ಎಲ್ಲ ಸರ್ಕಾರಿ ಅರೆ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಕಚೇರಿಗಳಲ್ಲಿ ಜಯಂತಿಯನ್ನು ಆಚರಿಸಬೇಕೆಂದರು. ಈ ಜಯಂತಿಯು ಜನವರಿ 19 ರಂದು ಆಚರಣೆಗೆ ಸಕಲ ಕ್ರಮಕೈಗೊಳ್ಳಬೇಕು.ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಸೂಚಿಸಿದರು.

ಅಂದು ನಡೆಯುವ ಕಾರ್ಯಕ್ರಮಕ್ಕೆ ಶಾಲಾ ಶಿಕ್ಷಣ ಇಲಾಖೆಯ ವಿದ್ಯಾರ್ಥಿಗಳನ್ನು ಕರೆ ತರಲು ಸೂಚಿಸಿದರು

ಸಣ್ಣಕೈಗಾರಿಕೆಮತ್ತುಸಾರ್ವಜನಿಕ ಉದ್ದಿಮೆಗಳ ಸಚಿವರಾದ ಶರಣಬಸಪ್ಪ ದರ್ಶನಾಪೂರ ಸಮಿತಿಯ ಅಧ್ಯಕ್ಷತೆಯನ್ನು ವಹಿಸುವರು.

ಒಬ್ಬ ನುರಿತ ಉಪನ್ಯಾಸಕ ಒಬ್ಬ ಸಮಿತಿಯ ಅಧ್ಯಕ್ಷರನ್ನು ನೇಮಿಸಲು ಸೂಚಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ವಿವಿಧ ಶಾಲೆಗಳ ಸಹಯೋಗದೊಂದಿಗೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜಿಸಬೇಕು.ಸಿಬ್ಬಂದಿಗಳು ಆಯಾ ಸಮಾಜದ ಮುಖಂಡರು ಸಂಘ ಸಂಸ್ಥೆಗಳವರು ತಪ್ಪದೇ ಜಯಂತಿಯನ್ನು ಯಶಸ್ವಿಗೊಳಿಸುವಂತೆ ಸಲಹೆ ಸೂಚನೆಗಳನ್ನ ನೀಡಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ದತ್ತಪ್ಪ ಸಾಗನೂರ, ಜಿಲ್ಲಾಮಟ್ಟದ ಅಧಿಕಾರಿಗಳು, ಸರ್ವಜ್ಞ ಕಾಲೇಜಿನ ಸಂಸ್ಥಾಪಕರಾದ ಚನ್ನರೆಡ್ಡಿ ಪಾಟೀಲ, ಸಮಾಜ ಮುಖಂಡರುಭಾಗವಹಿಸಿದ್ದರು.

## ಕೋನಮೇಳಕುಂದಾ ಪಿಕೆಪಿಎಸ್

## ಚುನಾವಣೆ ಎಲ್ಲ ಸ್ಥಾನಕ್ಕೆ ಅವಿರೋಧ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

(ಮಲ್ಲಪ್ಪಾ ಟಿ ಹಾಸಗೊಂಡ)

ಭಾಲ್ಕಿ:ಜ.8: ತಾಲೂಕಿನ ಕೋನಮೇಳಕುಂದಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ಪಿಕೆಪಿಎಸ್) ಆಡಳಿತ ಮಂಡಳಿಯ ಎಲ್ಲ 12 ಸ್ಥಾನಗಳು ಅವಿರೋಧವಾಗಿ ಆಯ್ಕೆಯಾಗಿವೆ. ಸಾಮಾನ್ಯ, ಮಹಿಳಾ, 3(ಬಿ), 2(ಎ), ಎಸ್ಸಿ, ಎಸ್ಟಿ ಸೇರಿ ಸಾಲ ರಹಿತ ಕ್ಷೇತ್ರದಿಂದ ಸ್ಪರ್ಧಿಸಿದ ಕೋನಮೇಳಕುಂದಾ, ಕರಡ್ಯಾಳ, ಕದಲಾಬಾದ ಮತ್ತು ಧಾರಜವಾಡಿಯ ಅಭ್ಯರ್ಥಿಗಳು ತಲಾ ಒಂದೊಂದೆ ನಾಮಪತ್ರ ಸಲ್ಲಿಸಿದ್ದರಿಂದ ಎಲ್ಲ 12 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಕೋನಮೇಳಕುಂದಾ ಗ್ರಾಮದ ಅಭ್ಯರ್ಥಿ ಅಶೋಕ ಶಿವರುದ್ರಪ್ಪ, ಕರಡ್ಯಾಳ ಗ್ರಾಮದ ಶಂಕರ ಶರಣಪ್ಪ, ರಾಜೇಂದ್ರಕುಮಾರ ವೈಜಿನಾಥ ಮತ್ತು ಧಾರಜವಾಡಿಯ ಬಳಿರಾಮ ದಿಲೀಪಕುಮಾರ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ. 3(ಬಿ) ಕ್ಷೇತ್ರದಿಂದ ಕೋನಮೇಳಕುಂದಾ ಗ್ರಾಮದ ಗೋರಖನಾಥ ವೀರಶೆಟ್ಟಿ, ಸಾಲ ರಹಿತ ಕ್ಷೇತ್ರದಿಂದ ಸತೀಶ ಬಸವರಾಜ, ಮಹಿಳಾ ಕ್ಷೇತ್ರದಿಂದ ಕೋನಮೇಳಕುಂದಾ ಗ್ರಾಮದ ಈರಮ್ಮ ರುದ್ರಯ್ಯ ಸ್ವಾಮಿ, ಕದಲಾಬಾದ ಗ್ರಾಮದ ಮಹಾದೇವಿ ಮಲ್ಲಿಕಾರ್ಜುನ, ಎಸ್ಟಿ ಕ್ಷೇತ್ರದಿಂದ ಕರಡ್ಯಾಳ ಗ್ರಾಮದ ವಿಜಕುಮಾರ ಶಂಕರ, ಎಸ್ಸಿ ಕ್ಷೇತ್ರದಿಂದ ಕೋನಮೇಳಕುಂದಾ ಗ್ರಾಮದ ನಾಗಪ್ಪ ಶರಣಪ್ಪ ಮತ್ತು 2(ಎ) ಕ್ಷೇತ್ರದಿಂದ ವಿದ್ಯಾವತಿ ರಮೇಶ ಪಂಚಾಳ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಸನ್ಮಾನ : ಇದೇ ವೇಳೆ ಅವಿರೋಧವಾಗಿ ಆಯ್ಕೆಗೊಂಡ ಅಭ್ಯರ್ಥಿಗಳನ್ನುಸನ್ಮಾನಿಸಲಾಯಿತು. ಈಸಂದರ್ಭದಲ್ಲಿಕೋನಮೇಳಕುಂದಾ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂತೋಷ ಮಾನಕಾರ, ಕರಡ್ಯಾಳ ಗ್ರಾಮದ ಮುಖಂಡ ಶಿವಶಂಕರ ಪಾಟೀಲ್, ಕದಲಾಬಾದ ಗ್ರಾಮದ ಬಮಶೆಟ್ಟಿ ಬಿರಾದಾರ್ ಸೇರಿದಂತೆ ಪ್ರಮುಖರು ಇದ್ದರು.

ಕಣಜಿ ಪಿಕೆಪಿಎಸ್ ಅವಿರೋಧ ಆಯ್ಕೆ :

ತಾಲೂಕಿನ ಕಣಜಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ಎಲ್ಲ 12 ಸ್ಥಾನಗಳು ಅವಿರೋಧವಾಗಿ ಆಯ್ಕೆಗೊಂಡಿವೆ. ಸಾಮಾನ್ಯ ಕ್ಷೇತ್ರದಿಂದ ತೂಗಾಂವ(ಕೆ) ಗ್ರಾಮದ ಅಭ್ಯರ್ಥಿ ಸೂರ್ಯಕಾಂತ ಶಂಕ್ರೆಪ್ಪ, ಘಾಳೆಪ್ಪ ಗೋವಿಂದರಾವ, ಕಣಜಿ ಗ್ರಾಮದ ಚನ್ನಯ್ಯ ಶಂಕರ, ಶರಣಪ್ಪ ಭೀಮರಾವ ಮತ್ತು ಸಂತೋಷ ಕಲ್ಯಾಣರಾವ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪರಿಶಿಷ್ಟ ಜಾತಿ ಕ್ಷೇತ್ರದಿಂದ ಕಣಜಿ ಗ್ರಾಮದ ಬಸವರಾಜ ಗುಂಡಪ್ಪ, ಪರಿಶಿಷ್ಟ ಪಂಗಡ ಕ್ಷೇತ್ರದಿಂದ ಸಿದ್ರಾಮ ಭೀಮಣ್ಣ, ಪ್ರವರ್ಗ(ಎ) ಕ್ಷೇತ್ರದಿಂದ ನಸೀರಮಿಯ್ಯ ಹುಸೇನಸಾಬ್, ಪ್ರವರ್ಗ (ಬಿ) ಕ್ಷೇತ್ರದಿಂದ ವಿಜಯಕುಮಾರ ನಾಗಶೆಟೆಪ್ಪ, ಮಹಿಳಾ ಕ್ಷೇತ್ರದಿಂದ ತೂಗಾಂವ(ಕೆ) ಗ್ರಾಮದ ಸುಜಾತಾ ಸಿದ್ದಪ್ಪ, ಲಲಿತಾಬಾಯಿ ವೀರಯ್ಯ ಮತ್ತು ಸಾಲರಹಿತ ಕ್ಷೇತ್ರದಿಂದ ಕಣಜಿ ಗ್ರಾಮದ ಅಶೋಕ ಶಾಮರಾವ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಯಾಕತಪೂರ್ ಪಿಕೆಪಿಎಸ್‌ಗೆ ಅವಿರೋಧ ಆಯ್ಕೆ :

## ಸೈಯದ್ ಅಹ್ಮದ್ ಮುದ್ದೆ ಅಧ್ಯಕ್ಷರಾಗಿ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 08 : ಬೀದರ್ ತಾಲೂಕಿನ ಯಾಕತಪೂರ್ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಸೈಯದ್ ಅಹ್ಮದ್ ಮುದ್ದೆ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ನರಸಪ್ಪಾ ಪೋಚಪ್ಪಾ ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದಂತೆ ನಿರ್ದೇಶಕರಾಗಿ ಸಿಜಾವೋದ್ದೀನ್, ರಾಜೇಶ್ ಸ್ವಾಮಿ, ಖಾಜಾಮಿಯ್ಯಾ, ವೈಜಿನಾಥ್, ಸಿರಾಜೋದ್ದೀನ್, ವಿಠಲ, ಅಬ್ದುಲ್ ರಶೀದ್ ಖುದ್ದೆ, ವಿಶ್ವನಾಥ್ ಪಾಟೀಲ್, ಜಾಹೇದಬೇಗಂ ಶಬ್ಬುಪಟೇಲ್ ಹಾಗೂ ಅಮೀನಾಬೀ ಹಾಲೀಂಸಾಬ್ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಡಿಸೆಂಬರ್ 28ರಂದು ಪಿಕೆಪಿಎಸ್ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಸೈಯದ್ ಅಹ್ಮದ್ ಮುದ್ದೆ ಅವರು ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

## ಜ.20ರವರೆಗೆ ರಾಯಚೂರಿನಲ್ಲಿ ಯುವನಿಧಿ

## ವಿಶೇಷ ನೋಂದಣಿಗೆ ಅವಕಾಶ




ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.08: ಯುವನಿಧಿ ಯೋಜನೆಯ ಫಲಾನುಭವಿಯಾಗಲು ಆಸಕ್ತಿ ಉಳ್ಳವರು ಸೇವಾಸಿಂಧು ವೆಬ್‌ಪೋರ್ಟಲನಲ್ಲಿ ಹೆಸರು ನೋಂದಾಯಿಸಿಕೊಳ್ಳಲು 2025ರ ಜನವರಿ 6ರಿಂದ 20ರವರೆಗೆ ವಿಶೇಷ ನೋಂದಣಿ ಅಭಿಯಾನವನ್ನು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ರಾಯಚೂರಿನಲ್ಲಿ ಏರ್ಪಡಿಸಿದ್ದು, ಅರ್ಹ ಫಲಾನುಭವಿಗಳು ಈ ಸದಾವಕಾಶ ಉಪಯೋಗಿಸಿಕೊಳ್ಳಬೇಕು ಎಂದು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್ ಅವರು ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜ.08ರಂದು ಬುಧವಾರ ನಡೆದ ಯುವನಿಧಿ ಯೋಜನೆಯ ವಿಶೇಷ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪದವಿ ಮತ್ತು ಡಿಪ್ಲೋಮಾ ಪದವಿಯಲ್ಲಿ ತೇರ್ಗಡೆಯಾಗಿ ಉದ್ಯೋಗ ಸಿಗದ ಜಿಲ್ಲೆಯ 8 ಸಾವಿರಕ್ಕೂ ಮೇಲ್ಪಟ್ಟು ಅಭ್ಯರ್ಥಿಗಳು ಈಗಾಗಲೇ ಈ ಯೋಜನೆಯ ಲಾಭ ಪಡೆದಿದ್ದಾರೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಇತರರು ಯೋಜನೆಯನ್ನು ಲಾಭ ಪಡೆಯಬೇಕೆಂದರು.

ಪದವೀಧರರಿಗೆ ಪ್ರತಿ ತಿಂಗಳ 3000ರೂ. ಹಾಗೂ ಡಿಪ್ಲೋಮಾ ಪದವೀಧರರಿಗೆ 1500 ರೂ.ಗಳ ನೀರುದ್ಯೋಗ ಭತ್ಯೆ ನೀಡಲಾಗುತ್ತದೆ. ಫಲಿತಾಂಶದ ನಂತರ ನೀರುದ್ಯೋಗಿಗಳಾಗಿ 180 ದಿವಸಗಳ ಪೂರೈಸಿ ಹೆಸರನ್ನುನೋಂದಾಯಿಸಿಕೊಂಡ ಅಭ್ಯರ್ಥಿಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗುತ್ತದೆ ಎಂದರು.ನಂತರ ಪ್ರತಿ ತಿಂಗಳು ಯುವನಿಧಿ ಯೋಜನೆಯ ಪ್ರಯೋಜನ ಪಡೆಯಬೇಕಿದ್ದರೆ, ಸೇವಾಸಿಂಧು ವೆಬ್‌ಪೋರ್ಟಲನಲ್ಲಿ ಮಾಹೆಯಾನ ತಾನು ನೀರುದ್ಯೋಗಿ ಎಂದು ಉನ್ನತ ವ್ಯಾಸಂಗ ಮುಂದುವರಿಸಿರುವುದಿಲ್ಲ ಎಂದು ಹಾಗೂ ಸ್ವಯಂ ಉದ್ಯೋಗಿಯುಲ್ಲವೆಂದು ಪ್ರತಿ ತಿಂಗಳ 25ನೇ ತಾರೀಖಿನೊಳಗೆ ಸ್ವಯಂ ಘೋಷಣೆಮಾಡಬೇಕಾಗಿರುವುದು ಕಡ್ಡಾಯವಾಗಿರುತ್ತದೆ. ಸ್ವಯಂ ಘೋಷಣೆಯ ಆಧಾರದ ಮೇಲೆ ಅಭ್ಯರ್ಥಿಗಳು ಮುಂದಿನ ಪಾವತಿಯನ್ನು ಸ್ವೀಕರಿಸಲಾಗುವುದು.ಅಭ್ಯರ್ಥಿಗಳು ಕರ್ನಾಟಕ ಒನ್, ಗ್ರಾಮ ಒನ್ ಮತ್ತು ಬಾಪೂಜಿ ಕೇಂದ್ರಗಳಲ್ಲಿ ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಸಬೇಕು ಎಂದರು.

ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಆಧಾರ್ ಕಾರ್ಡ್, ಬ್ಯಾಂಕ್ ಖಾತೆ, ಹಾಗೂ ಆಧಾರ್ ಲಿಂಕ್ಡ್ ಮೊಬೈಲ್ ನಂಬರನ್ನು ಹೊಂದಿರಬೇಕು. ಅರ್ಜಿ ಸಲ್ಲಿಸಿದ ನಂತರ ಸೇವಾಸಿಂಧು ಪೋರ್ಟಲನಲ್ಲಿ ತಮ್ಮ ಅರ್ಜಿಯು ಯಾವ ಹಂತದಲ್ಲಿ ಇದೆ ಎಂಬುದನ್ನು ಪರಿಶೀಲಿಸಿ ಒಂದು ವೇಳೆ ಅರ್ಜಿಯ ನೋಂದಾಣಿಯಾಗದಿದ್ದ ಸಂದರ್ಭದಲ್ಲಿ ಸೂಚಿಸಲ್ಪಟ್ಟ ಇಲಾಖೆಯ ಕಚೇರಿಗಳಿಗೆ ತಮ್ಮ ಎಲ್ಲಾ ಮೂಲ ಅಂಕಪಟ್ಟಿ ಹಾಗೂ ಇತರೆ ಪ್ರಮಾಣ ಪತ್ರಗಳೊಂದಿಗೆ ಖುದ್ದಾಗಿ ಭೇಟಿ ನೀಡಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ನವೀನ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ವೆಂಕಣ್ಣ, ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರಾದ ವೆಂಕಟೇಶ್ ನಾಯಕ, ರಾಧಾಕೃಷ್ಣ ರೆಡ್ಡಿ, ವೀರೇಶ್ ಗಾಣದಾಳ, ಶಶಿಕಲಾ, ಭಾರತಿ, ಮೊಹಮ್ಮದ ಜಾವೀದ್, ರಾಘವೇಂದ್ರ, ತಿಮ್ಮಪ್ಪ ಸೇರಿದಂತೆ ಕಾಲೇಜಿನ ವಿವಿಧ ವಿಷಯಗಳ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಪ್ರಕೃತಿಗೆ ಪೂರಕವಾಗಿ ಬದುಕಲು ಡಿಸಿ ಜಾನಕಿ ಕರೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ : ಜ. 08: ಪ್ರಕೃತಿಗೆ ಹೆಚ್ಚಿನ ಮಹತ್ವವನ್ನು ನೀಡಿ, ಅದಕ್ಕೆ ಪೂರಕವಾಗಿ ಬದುಕುವ ಮೂಲಕ ಮಾಲಿನ್ಯವನ್ನು ತಡೆಗಟ್ಟುವಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಬೇಕೆಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ತೋವಿವಿಯ ಉದ್ಯಾನಗಿರಿಯಲ್ಲಿರುವ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೋಸೈಟಿ ಹಾಗೂ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡ ಹವಾಮಾನ ಬದಲಾವಣೆ ಎಂಬ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ವೈಜ್ಞಾನಿಕ ಆಲೋಚಣೆಗಳೊಂದಿಗೆ ಪರಿಸರ ಸಂರಕ್ಷಣೆ ಮಾಡಲು ಮುಂದಾಗಬೇಕು ಎಂದರು.

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ಮುಖ್ಯಸ್ಥರಾದ ಲತಾ ಎಮ್. ಹೆಚ್ ಮಾತನಾಡಿ ಹವಾಮಾನ ಬದಲಾವಣೆ, ಅದರ ಹಿಂದಿನ ವಿಜ್ಞಾನ ಪರಿಣಾಮಗಳು ಮತ್ತು ಅದರ ಜಾಗತಿಕ ಸವಾಲುಗಳ ಬಗ್ಗೆ ತಿಳಿಸಿದರೆ, ತೋವಿವಿಯ ಪ್ರಾಧ್ಯಾಪಕ ಡಾ.ವಸಂತ ಗಾಣಿಗೇರ ಹವಾಮಾನ ಬದಲಾವಣೆಯಿಂದ ತೋಟಗಾರಿಕೆ ಬೆಳೆಗಳಲ್ಲಿ ಆಗುವ ಬದಲಾವಣೆಯ ಬಗ್ಗೆ ಹಾಗೂ ಇಎಂಪಿಆರ್‌ಐ ಸಂಸ್ಥೆಯ ಹಿರಿಯ ಸಮಾಲೋಚಕ ಡಾ.ಸರಿತಾ ಬೋಯಾ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಪರಿಹರಿಸಲು ರೂಪಿಸಿರುವ ಕ್ರೀಯಾ ಯೋಜನೆಯ ಬಗ್ಗೆ ತಿಳಿಸಿದರು.

ತರಬೇತಿ ಕಾರ್ಯಾಗಾರದಲ್ಲಿ ಹೊರಾಂಗಣ ಮತ್ತು ಒಳಾಂಗಣ ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಯಿತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಸಂತೋಷಗೌಡ ಪಾಟೀಲ್, ಉಪ ವ್ಯವಸ್ಥಾಪಕರು, ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆ ರವರು ಮಾತನಾಡಿ ತೋಟಗಾರಿಕೆ ಮತ್ತು ಕೃಷಿ ಕ್ಷೇತ್ರದಲ್ಲಿನ ಕಾರ್ಬನ್ ಕ್ರೆಡಿಟ್ ಸ್ಕೋರ್‌ನ ವಿವರವಾದ ಮಾಹಿತಿಯನ್ನು ತಿಳಿಸಿದರು.ಅದರಂತೆ, ಕಾರ್ಯಕ್ರಮದ ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶೇಖರ ಮನೋಜಿ ರವರು ಮಾತನಾಡಿ, ಬೆಳೆಗಳು ಮತ್ತು ಜಾನುವಾರುಗಳನ್ನು ಉಳಿಸಿಕೊಳ್ಳಲು ಮತ್ತು ಸಮಗ್ರ ಕೃಷಿಯ ಮೂಲಕ ಈ ಅಸ್ಥಿರ ವಾತಾವರಣದಲ್ಲಿ ಉತ್ತಮ ಇಳುವರಿಯನ್ನು ಪಡೆಯಲು ಕೃಷಿಯ ಉಪಯೋಗಿಸುವ ಕಾರ್ಯವಿಧಾನಗಳು ಮತ್ತು ಅಭ್ಯಾಸಗಳ ಬಗ್ಗೆ ವಿವರವಾಗಿ ತಿಳಿಸಿದರು.


ಮುಂದುವರೆದು, ಕಾರ್ಯಕ್ರಮದ ಭಾಗವಾಗಿ ಎಲ್ಲ ಅಧಿಕಾರಿಗಳಿಗೆ ಹೊರಾಂಗಣ ಮತ್ತು ಒಳಾಂಗಣ ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಯಿತು.

ಅದರಂತೆ, ಸದರಿ ಕಾರ್ಯಕ್ರಮವನ್ನು ಕುಮಾರಿ. ರುಚಿತಾಶ್ರೀ ಎ.ಎಮ್. ನಿರೂಪಿಸಿದರು ಹಾಗೂ ಶ್ರೀಮತಿ ಜಗದಂಬಾ ಬಿ ಆರ್. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು ರವರು ವಂದಿಸಿದರು.

ಮುಂದುವರೆದು, ಸದರಿ ಕಾರ್ಯಕ್ರಮದಲ್ಲಿ, ಶ್ರೀ ಈರಣ್ಣಾ ಬುಳ್ಳಾ, ಕ್ಯೂರೇಟರ್, ಶ್ರೀ ಆಸೀಫ ಬಾಗವಾನ, ತಾಂತ್ರಿಕ ಸಹಾಯಕರು, ಶ್ರೀ ಗಂಗನಗೌಡ ಪಾಟೀಲ, ದ್ವಿ.ದ.ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಜಿಲ್ಲೆಯ ವಿವಿಧ ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಹಾರ ಮೇಳ

# ಬಾಯಲ್ಲಿ ನೀರೂರಿಸಿದ ಖಾದ್ಯಗಳು



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 08 :ಯುವ ಸವಿ ಸಂಗಮ ಶೀರ್ಷಿಕೆಯಡಿ ನಗರದ ನೌಬಾದನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ಆಹಾರ ಮೇಳವು ನೆರೆದವರ ಬಾಯಲ್ಲಿ ನೀರೂರಿಸಿತು.

ಮೇಳದಲ್ಲಿ ವಿದ್ಯಾರ್ಥಿಗಳು ಪಾನಿ ಪುರಿ, ಬೇಲ್ ಪುರಿ, ಗೋಬಿ ಮಂಚೂರಿ, ಸಾಬುದಾನ ವಡಾ, ಪೇಡಾ, ರಾಗಿ ಬಿಸ್ಕತ್, ಬೆಲ್ಲದ ಚಹಾ ಸೇರಿದಂತೆ 20ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆದಿದ್ದರು. ವಿದ್ಯಾರ್ಥಿಗಳು, ಪಾಲಕರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಖಾದ್ಯಗಳನ್ನು ಖರೀದಿಸಿ, ಅವುಗಳ ರುಚಿ ಸವಿದರು.

ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಕೌಶಲ ಬೆಳೆಸಲು ಆಹಾರ ಮೇಳ ಆಯೋಜಿಸಲಾಗಿದೆ ಎಂದು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಚಾರ್ಯೆ ಡಾ. ಜೈಶ್ರೀ ಪ್ರಭಾ ಹೇಳಿದರು.

ನಿವೃತ್ತ ಪ್ರಾಚಾರ್ಯ ಎಂ.ಜಿ. ದೇಶಪಾಂಡೆ ಉದ್ಘಾಟಿಸಿದರು. ದಾನಾಪಾನಿ ಹೋಟೇಲ್ ಮಾಲೀಕ ಮಹೇಶ ಚಂದಾಪುರೆ, ಪ್ರೊ. ಚೆನ್ನಕೇಶವ ಮೂರ್ತಿ, ಶ್ರೀಕಾಂತ ಪಾಟೀಲ, ಸಪ್ನಾ, [illegible], ಬಸವರಾಜ ರಾಜೋಳಿ, ಡಾ. ಪ್ರಕಾಶ, ಸಂಜುಕುಮಾರ, ಪ್ರೊ. ಶಂಕರರಾವ್ ಗಣಗೊಂಡ, ಡಾ. ರಾಜಕುಮಾರ ಅಲ್ಲೂರೆ, ಪ್ರೊ. ಪ್ರೇಮಲತಾ ಇದ್ದರು.

ಕಾಲೇಜಿನ ಸಾಂಸ್ಕೃತಿಕ ಸಂಚಾಲಕ ಯಲೀಷ್ ದೇವಿದಾಸ ಸ್ವಾಗತಿಸಿದರು. ಡಾ. ಮಹಾದೇವಿ ಹೆಬ್ಬಾಳೆ ನಿರೂಪಿಸಿದರು.

## ಇಂದು ತಮಲೂರು ಶ್ರೀಗಳ ತಪೋನುಷ್ಟಾನ ಅಂತ್ಯ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 08 : ಇಂದು ಗುರುವಾರ ನಗರದ ಹೊರವಲಯದಲ್ಲಿರುವ ಬೀದರ್-ಭಾಲ್ಕಿ ರಸ್ತೆಯಲ್ಲಿನ ಜಗದ್ಗುರು ಪಂಚಾಚಾರ್ಯ ಪುಣ್ಯಾಶ್ರಮದಲ್ಲಿ ತಮಲೂರಿನ ಪೂಜ್ಯಶಿವಾನಂದಮಹಾಸ್ವಾಮಿಗಳ ತಪ್ಪೋನುಷ್ಠಾನ ಮಂಗಲ ಕಾರ್ಯಕ್ರಮ ಜರುಗಲಿದೆ.

ಈ ತಿಂಗಳ 3ರಿಂದ 9ನೇ ತಾರೀಖಿನ ವರೆಗೆ ತಮಲೂರು ಶ್ರೀಗಳು ಪುಣ್ಯಾಶ್ರಮದಲ್ಲಿ ತಪೋನುಷ್ಠಾನ ಕೈಗೊಂಡಿದ್ದರು.

ಭಕ್ತರ ಏಳಿಗೆಗಾಗಿ ಹಾಗೂ ಜಗದ್ಗುರು ಪಂಚಾಚಾರ್ಯ ಪುಣ್ಯಶ್ರಮದ ಜೀರ್ಣೋದ್ಧಾರಕ್ಕೆ ಶ್ರೀಗಳು ಈ ತಪೋನುಷ್ಠಾನ ಕೈಗೊಂಡಿದ್ದರು. ಆದ ಕಾರಣ ಈ ತಪೋನುಷ್ಠಾನ ಮಂಗಲ ಕಾರ್ಯಕ್ರಮದಲ್ಲಿ ಜಿಲ್ಲೆಯ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀಗಳ ದರುಶನ ಪಡೆದು ಪುನೀತರಾಗಬೇಕೆಂದು ಶ್ರೀ ರೇಣುಕಾಚಾರ್ಯ ಮಂದಿರ ಹಾಗೂ ಶ್ರೀ ಜಗದ್ಗುರು ಪಂಚಾಚಾರ್ಯ ಎಜುಕೇಶನ್ ಮತ್ತು ಚಾರಿಟೇಬಲ್ ಟ್ರಸ್ಟ್ ಕಾರ್ಯದರ್ಶಿ ಶಿವಕುಮಾರ ಸ್ವಾಮಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ನೂತನ ಪದಾಧಿಕಾರಿಗಳ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್: ನಗರದ ಟೀಚರ್ಸ್ ಕಾಲೊನಿಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಾಲ್ಲೂಕು ಶಾಖೆ ಕಚೇರಿಯಲ್ಲಿ ದಲಿತ ಸಮಾಜದ ಹಿರಿಯ ಮುಖಂಡ ಕೃಷ್ಣಪ್ಪ ಹಾಳಗೋರ್ಟೆರವರ ಅಧ್ಯಕ್ಷತೆ ಮತ್ತು ರಾಜ್ಯ ಸಂಘಟನಾ ಸಂಚಾಲಕ ರಮೇಶ ಡಾಕುಳಗಿ ಅವರ ನೇತ್ರತ್ವದಲ್ಲಿ ನಡೆದ ತಾಲ್ಲೂಕು ಕಾರ್ಯಕಾರಿ ಮಂಡಳಿ ಸಭೆಯಲ್ಲಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ರಾಹುಲ್ ಉದ್ದಾ ದುಬಲಗುಂಡಿ (ತಾಲ್ಲೂಕು ಸಂಚಾಲಕ), ಸಂಘಟನಾ ಸಂಚಾಲಕರುಗಳಾಗಿ ಸುಧಾಕರ ಶಿಂಧೆ, ತುಕಾರಾಮ ಮುಸ್ತಾಪೂರೆ, ಶಾಂತಕುಮಾರ ಅರಳ್ಳಿ, ಮೊಹನ ಹುಡಗಿ, ಬಲಭೀಮ ಶಿಂಧೆ, ಸುಧಾಕರ ಸಂಗಮ್, ಸಂತೋಷ ಅತಿವಾಳ, ರವಿಚಂದ್ರ ಸಂಗಮ್, ಅರ್ಜುನ ಚೀನಕೇರಿ, ವಿನೋದ ಮೇಲಕೇರಿ, ಶ್ರೀನಿವಾಸ ಕಟ್ಟಿಮನಿ, ರಾಹುಲ್ ಹಳಗೋರ್ಟೆ (ಸಂಘಟನಾ ಸಂಚಾಲಕರು),

ಚಂದ್ರಶೇಖರ ಮಾಲೆ (ಖಜಾಂಚಿ), ಸುಲೆಮ್ಮಾ ದಂಡೆ (ಮಹಿಳಾ ಘಟಕದ ಸಂಚಾಲಕಿ), ಅವಿನಾಶ ಮೇಲಕೇರಿ (ವಿದ್ಯಾರ್ಥಿ ಘಟಕದ ಸಂಚಾಲಕ), ನಾಸೀರ ಸೌದಾಗರ್ ಅಲ್ಪಸಂಖ್ಯಾತ ಘಟಕದ ಸಂಚಾಲಕ ಹಾಗೂ ಕಾರ್ಯಕಾರಿ ಮಂಡಳಿ ಸದಸ್ಯರುಗಳಾಗಿ ಪ್ರಕಾಶ ಗಡವಂತಿ, ಪ್ರಭು ಮಾಳನಾಯಕ್, ನೀಲಕಂಠ ಡೊಳ್ಳೆ, ಭರತ್ ಭಾಗ್ಯಕರ್, ಈಶ್ವರ ಮೆಲಕೇರಿ, ಶಿವರಾಜ ಸಿಂಧನಕೇರಾ, ಮಹಾಂತೇಶ ಕುಂದನ್, ನೀಲಕಂಠ ಶೆಟ್ಟಿ, ಅಮರ ಉತ್ತಮಕರ, ಮಹೇಶ ಕ್ಯಾದೆ, ಸುನೀಲ ಕಟ್ಟಿಮನಿ ಅವರನ್ನು ಆಯ್ಕೆಯಾಗಿದ್ದಾರೆ.

ತಾಲ್ಲೂಕು ಪಂಚಾಯತಿ ಮಾಜಿ ಅಧ್ಯಕ್ಷರು, ಡಿಎಸ್ಎಸ್ ರಾಜ್ಯ ಸಂಘಟನಾ ಸಂಚಾಲಕ ರಮೇಶ ಡಾಕುಳಗಿ ಅವರು ಮಾತನಾಡಿ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ನೂತನವಾಗಿ ಆಯ್ಕೆಯಾದ ಪಾದಾಧಿಕಾರಿಗಳು ತಮ್ಮ ಜವಾಬ್ದಾರಿಗಳು ಅರಿತು, ತಾಲ್ಲೂಕಿನ ಜನರ ಸಮಸ್ಯಗೆ ಸ್ಪಂದಿಸಿ, ನ್ಯಾಯ ಕೋಡಿಸುವಂತಹ ಪ್ರಮಾಣಿಕ ಪ್ರಯತ್ನ ಮಾಡಬೇಕು, ಮತ್ತು ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಂಘಟನೆಯ ಗ್ರಾಮ ಶಾಖೆಯನ್ನು ರಚನೆ ಮಾಡಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸಂಘಟನೆ ಬಲ ಪಡಿಸಬೇಕು ಎಂದು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಚಾಲಕ ರಮೇಶ ಮಂದಕನಳ್ಳಿ, ವಿಭಾಗಿಯ ಸಂಚಾಲಕ ರಾಜಕುಮಾರ ಬನ್ನೇರೆ, ಪ್ರಭು ಚಿತ್ತಕೋಟಾ, ರಂಜೀತಾ ಜೈನೂರ್, ವಿಠಲ್ ಲಾಡಕರ್, ಬಾಬುರಾವ ಮಾಲೆ, ತುಕಾರಾಮ ಲಾಡಕರ್, ಸಿದ್ಧಾರ್ಥ ಕಾಂಬಳೆ, ಕೈಲಾಸ ಮೇಟಿ, ಇದ್ದರು.

## ಕೋಲಿ ಸಮಾಜದ ಒಗ್ಗಟ್ಟು ಒಡೆಯಬೇಡಿ: ಭೀಮಣ್ಣಾ ಸಾಲಿ

ಮಲ್ಲಮ್ಮ ನುಡಿ ವಾರ್ತೆ

ಚಿತ್ತಾಪುರ:ಜ.8: ಜಿಲ್ಲೆಯಲ್ಲಿ ಕೋಲಿ ಸಮಾಜದ ಸ್ವಯಂ ಘೋಷಿತ ಅಧ್ಯಕ್ಷರು ಬಹಳ ಜನರಿದ್ದಾರೆ. ಎಲ್ಲರೂ ಒಗ್ಗೂಡಿ ಸಮಾಜದ ಸಂಘಟನೆಗೆ ಶಕ್ತಿ ತುಂಬಬೇಕು. ಸಮಾಜದ ಒಗ್ಗಟ್ಟಿಗೆ ಧಕ್ಕೆಯುಂಟು ಮಾಡಿ ಸಮಾಜವನ್ನು ಒಡೆಯುವ ಕೆಲಸ ಯಾರೂ ಮಾಡಬಾರದು. ಸಮಾಜದ ಅಧ್ಯಕ್ಷರಾಗಲು ಯಾವುದೇ ಆದೇಶದ ಅಗತ್ಯವಿಲ್ಲ ಎಂದು ಕೋಲಿ ಸಮಾಜದ ಹಿರಿಯ ಮುಖಂಡ ಭೀಮಣ್ಣಾ ಸಾಲಿ ಅವರು ಹೇಳಿದರು.

ಪಟ್ಟಣದಲ್ಲಿರುವ ನಿಜಶರಣ ಅಂಬಿಗರ ಚೌಡಯ್ಯ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕೋಲಿ ಸಮಾಜದ ತಾಲ್ಲೂಕು ಘಟಕ ಮತ್ತು ನಗರ ಘಟಕದ ನೂತನ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿರಿಯರಾದವರು ಸಮಾಜದವರನ್ನು ಕೂಡಿಸಿ ಒಗ್ಗೂಡಿಸಬೇಕೆ ಹೊರತು ಒಡೆಯಬಾರದು. ಸಮಾಜಕ್ಕಾಗಿ ದುಡಿಯುವವರು ಬೇಕು. ಕೇವಲ ಹಣದಿಂದ ಸಮಾಜ ನಡೆಯುವುದಿಲ್ಲ ಎಂದು ಅವರು ಹೇಳಿದರು. ಪಕ್ಷಕ್ಕಿಂತ ಸಮಾಜ ಮುಖ್ಯ. ರಾಜಕೀಯ ವಿಷಯ ಬಂದಾಗ ರಾಜಕೀಯ ಮಾಡಿ. ಸಮಾಜದ ವಿಷಯದಲ್ಲಿ ಪಕ್ಷಪಾತ ಬದಿಗಿಟ್ಟು ಒಗ್ಗೂಡಬೇಕು. ಚಿತ್ತಾಪುರ ಕೋಲಿ ಸಮಾಜದ ಸಂಘಟನೆಯು ಜಿಲ್ಲೆಯಲ್ಲಿ ಹೆಸರುವಾಸಿಯಾಗಿದೆ. ಪಕ್ಷಾತೀತವಾಗಿ ಸಮಾಜ ಸಂಘಟಿಸುವ ಕೆಲಸ ಎಲ್ಲರೂ ಮಾಡುತ್ತಿದ್ದಾರೆ. ಇದೇ ಒಗ್ಗಟ್ಟು ನಿರಂತರ ಕಾಪಾಡಿಕೊಂಡು ಮುಂದುವರೆಯಬೇಕು ಎಂದು ಅವರು ಹೇಳಿದರು. ಸಮಾಜದ ಯಾವುದೇ ಸಮಸ್ಯೆ, ಅನ್ಯಾಯ, ದಬ್ಬಾಳಿಕೆ, ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವ ಕೆಲಸ ಮಾಡಬೇಕು. ಸಂಘಟನೆ ಎಂದರೆ ಕೇವಲ ಅಧ್ಯಕ್ಷರಾದವರ ಜವಾಬ್ದಾರಿ ಮಾತ್ರವಲ್ಲ, ಸಮಾಜದ ಪ್ರತಿಯೊಬ್ಬರೂ ಅವರಿಗೆ ಸಹಾಯ, ಸಹಕಾರ ಮಾಡಿ ಬೆಂಬಲಿಸಬೇಕು. ಅವರೊಂದಿಗೆ ಕೈಜೋಡಿಸಿ ಸಂಘಟನೆಗೆ ಮುಂದಾಗಬೇಕು ಎಂದು ಅವರು ಹೇಳಿದರು.

ಮುಖಂಡ ಮಲ್ಲಿಕಾರ್ಜುನ ಎಮ್ಮೆನೋರ್ ಅವರು ಮಾತನಾಡಿ, ಇಡೀ ಜಿಲ್ಲೆಯಲ್ಲಿಯೆ ತಾಲ್ಲೂಕು ಕೋಲಿ ಸಮಾಜದ ಸಂಘಟನೆ, ಒಗ್ಗಟ್ಟು, ಹೋರಾಟ ಹೆಸರುವಾಸಿಯಾಗಿದೆ. ಜಿಲ್ಲೆಯ ರಾಜಕಾರಣದ ಗತಿಯನ್ನೆ ಬದಲಾಯಿಸುವ ಶಕ್ತಿ ಸಮಾಜಕ್ಕಿದೆ. ಅಧ್ಯಕ್ಷರ ಆಯ್ಕೆ ಸಮಯದಲ್ಲಿ ಪೈಪೋಟಿ ಸಹಜ. ಪೈಪೋಟಿಯು ಸಮಾಜದ ಒಗ್ಗಟ್ಟು ಒಡೆಯಬಾರದು. ಸಮಾಜಕ್ಕಿಂತ ದೊಡ್ಡವರು ಯಾರಿಲ್ಲ. ಕತ್ತಲೆ ಕೋಣೆಯಲ್ಲಿ ಕುಳಿತು ಅಧ್ಯಕ್ಷರ ಆಯ್ಕೆ ಮಾಡಿಲ್ಲ. ಆಕಾಂಕ್ಷಿಗಳ ಒಪ್ಪಿಗೆ ಪಡೆದು ತುಂಬಿದ ಸಭೆಯಲ್ಲಿಯೆ ಘೋಷಣೆ ಮಾಡಲಾಗಿದೆ ಎಂದು ಅವರು ಹೇಳಿದರು.

ಮುಖಂಡರಾದ ಬಸವರಾಜ ಚಿನ್ನಮಳ್ಳಿ, ಶರಣಪ್ಪ ನಾಶಿ, ಸುರೇಶ ಬೆನಕನಳ್ಳಿ, ಮೌನೇಶ ಭಂಕಲಗಾ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೋಲಿ ಸಮಾಜದ ಮಾಜಿ ಅಧ್ಯಕ್ಷ ರಾಮಲಿಂಗ ಬಾನರ, ಮಾಜಿ ಗೌರವಾಧ್ಯಕ್ಷ ಹಣಮಂತ ಸಂಕನೂರು, ನಗರ ಘಟಕದ ಮಾಜಿ ಅಧ್ಯಕ್ಷ ರಾಜೇಶ ಹೋಳಿಕಟ್ಟಿ ಅವರು ಮಾತನಾಡಿದರು.

ತಾಲ್ಲೂಕು ಕೋಲಿ ಸಮಾಜದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ನಿಂಗಣ್ಣ ಹೆಗಲೇರಿ, ನಗರ ಘಟಕದ ಅಧ್ಯಕ್ಷ ಪ್ರಭು ಹಲಕರ್ಟಿ ಅವರಿಗೆ ರಾಮಲಿಂಗ ಬಾನರ, ಹಣಮಂತ ಸಂಕನೂರು ಅವರು ಸನ್ಮಾನಿಸಿ ಕೋಲಿ ಸಮಾಜದ ಧ್ವಜ ನೀಡುವ ಮೂಲಕ ಅಧಿಕಾರ ಹಸ್ತಾಂತರ ಮಾಡಿದರು. ಇದೇ ಸಂದರ್ಭದಲ್ಲಿ ಹಿರಿಯ ಮುಖಂಡ ಭೀಮಣ್ಣಾ ಸಾಲಿ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಮುಖಂಡರಾದ ವೆಂಕಟರಮಣ ಬೇವಿನಗಿಡ, ಬಸಣ್ಣಾ ತಳವಾರ, ಮುನಿಯಪ್ಪ ಕೊಳ್ಳಿ, ರಾಮು ನಾಟಿಕಾರ, ನಾಗರಾಜ ಜೈಗಂಗಾ, ಶರಣಪ್ಪ ಮಾಲಗತ್ತಿ, ಮಹಾದೇವ ಬೂನಿ, ರಾಮಲಿಂಗ ಅಲ್ಲೂರ್, ದುರ್ಜನಪ್ಪ ಅಲ್ಲೂರ, ಚಂದ್ರು ಕಾಳಗಿ, ಭೀಮರಾಯ ಅಂಬಾರ, ಕರಣಕುಮಾರ ಅಲ್ಲೂರ್, ಶರಣು ಡೋಣಗಾಂವ, ಸಾಬಣ್ಣ ಹೋಳಿಕಟ್ಟಿ, ದೇವು ದಿಗ್ಗಾಂವ, ಶರಣು ಸಿದ್ರಾಮಗೋಳ, ಸಾಬಣ್ಣಾ ಹಾಸಬಾ, ಚಂದ್ರಕಾಂತ ಜೀವಣಗಿ ಸೇರಿದಂತೆ ನೂರಾರು ಜನರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕೋಲಿ ಸಮಾಜದ ಮಾಜಿ ಪ್ರಧಾನ ಕಾರ್ಯದರ್ಶಿ ದೇವಿಂದ್ರ ಅರಣಕಲ್ ಅವರು ಸ್ವಾಗತಿಸಿ, ನಿರೂಪಿಸಿದರು.

# ನಿಜವಾದ ಫಲಾನುಭವಿಗಳಿಗೆ ಲಾಭ ಸಿಗಲಿ:ದರ್ಶನಾಪುರ್



ಮಲ್ಲಮ್ಮ ನುಡಿ ವಾರ್ತೆ
(ಮಲ್ಲಿಕಾರ್ಜುನ್ ಮಳಿಕೇರಿ)

ದಿನಕ್ಕೆ ಬೃಹದಾಕಾರವಾಗಿ ಬೆಳೆಯುತ್ತಿರುವ ನಗರಕ್ಕೆ ಬೇಡಿಕೆಗೆ ತಕ್ಕಂತೆ ಅನುದಾನ ಒದಗಿಸಲಾಗುತ್ತಿದೆ. ಇನ್ನೂ ನೂರು ಇರದ ಅರ್ಹ ಫಲಾನುಭವಿಗಳಿಗೆ

ಸೂರು ಒದಗಿಸಿದಲ್ಲಿ ಯೋಜನೆಗೆ ಅರ್ಥ ಸಿಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ್ ಹೇಳಿದರು.

ನಗರಸಭೆ ಕಾರ್ಯಲಯದಲ್ಲಿ ಆಶ್ರಯ ಸಮಿತಿ ಕಟ್ಟಡ ನಿವೇಶನಗಳ ಹಾಗೂ ಹಕ್ಕುಪತ್ರಗಳ ವಿತರಣೆ ಹಾಗೂ ಇನ್ನಿತರ ವಿಷಯಕ್ಕೆ ಸಂಭಂಧಿತ ಸಭೆ ನಡೆಸಿ ಮಾತನಾಡಿದ ಅವರು, ಸರ್ವೆ ನಂ.105, 106ರಲ್ಲಿ ಖಾಲಿ ಉಳಿದ ಜಾಗದಲ್ಲಿ ಜೋಪಡಿ ಹಾಕಿಕೊಂಡು 9 ಕುಟುಂಬಗಳು ಸುಮಾರು 20 ವರ್ಷದಿಂದ ವಾಸ ಮಾಡುತ್ತಿದ್ದಾರೆ. ಹಳೆಯ ಆಶ್ರಯ ಲೇಹೌಟ್ ನಕ್ಷೆಯಲ್ಲಿ 9 ನಿವೇಶನಗಳನ್ನು ಸೇರಿಸಿ ಪರಿಷ್ಕೃತ ಲೇಔಟ್ ನಕ್ಷೆ ಮಾಡಿ ಹಕ್ಕುಪತ್ರ ನೀಡಬೇಕು. ಸರ್ವೆ ನಂ.532ರಲ್ಲಿ 207

ನಿವೇಶನಗಳು 1995–96ರಲ್ಲಿ ರಚನೆಯಾಗಿ ಹಂಚಿಕೆ

ಮಾಡಲಾಗಿದ್ದು, ನಿವೇಶನಗಳ ಗಡಿ ಗುರುತು ಮಾಡಲು ಅಧಿಕಾರಿಗಳಿಗೆ ಸಚಿವರು ತಿಳಿಸಿದರು.

ಸರ್ವೆ ನಂ.408, 409 ಪೀಲ್ಟರ್ ಬೇಡ್ ಮತ್ತು 299ರಲ್ಲಿ ರಚನೆಯಾದ ನಿವೇಶನಗಳಲ್ಲಿ ಅನಧಿಕೃತವಾಗಿ ಜೋಪಡಿ ಹಾಕಿದ್ದು, ಅವುಗಳನ್ನು ತೆರವುಗೊಳಿಸಬೇಕು.

ಸರ್ವೆ ನಂ.22ರಲ್ಲಿ 5 ಜನ ಖೋಟ್ಟಿ ದಾಖಲಾತಿ ಸೃಷ್ಠಿಸಿ ನೊಂದಣಿ ಮಾಡಿಕೊಂಡಿದ್ದು, ಕ್ರಮ ತೆಗೆದುಕೊಳ್ಳಲು ಸೂಚಿಸಿದರು. ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದವರು

ಪೌರಾಯುಕ್ತರಿಗೆ ನಿವೇಶನ ಒದಗಿಸಲು ತಿಳಿಸಿರುವ ಬಗ್ಗೆ ಚರ್ಚಿಸಲಾಗಿದೆ. ಸರ್ವೆ ನಂ.248ರಲ್ಲಿ ಆಶ್ರಯ ನಿವೇಶನ 15–7–2300 ತಹಸೀಲ್ದಾರರಿಗೆ ಜಮೀನು

ಅನುಮೋದನೆಗಾಗಿ ಕಳುಹಿಸಿದ್ದು, ಜಿಲ್ಲಾಧಿಕಾರಿ, ಕಂದಾಯ ಇಲಾಖೆ ಬೆಂಗಳೂರ ಅವರಿಗೆ ಪತ್ರ ಬರೆದಿಯಲಾಗಿದೆ ಮತ್ತು 2016 ರಲ್ಲಿ ಜರಗಿದ ಬಲಭೀಮೇಶ್ವರ ಮತ್ತು ದಿಗ್ಗಿ ಸಂಗಮೇಶ್ವರ ಜಾತ್ರೆಯ ಸಮಯದಲ್ಲಿ ರೇಣುಕಾ ಎನ್ನುವ ಹುಡುಗಿ ವಿದ್ಯುತ್ ಅಂಗವಿಕಲಳಾಗಿದ್ದು" ಅವರಿಗೆ ನಿವೇಶನ ತಗುಲಿ ಮಂಜೂರು ಮಾಡಲು ತಿಳಿಸಿದರು. ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಮೆಹರೂನ ಬೇಗಂ, ಆಶ್ರಯ ಸಮಿತಿ ಅಧ್ಯಕ್ಷ ವಸಂತ ಸುರಪುರಕ, ಪೌರಾಯುಕ್ತ ರಮೇಶ ಬಡಿಗೇರ, ಗ್ರೇಡ್–2 ತಹಸೀಲ್ದಾರ ವೆಂಕಟೇಶ, ಪರಿಸರ ಅಭಿಯಂತರ ಹರೀಶ ಸಜ್ಜನ್ ಶೆಟ್ಟಿ, ನಗರ ಯೋಜನೆ ಪ್ರಾಧಿಕಾರ ಅಧಿಕಾರಿ ಗೋವಿಂದ ಸಿಂಗ್, ಆರ್ಐ ಶರಣುಬಸವ, ಮಲ್ಲಿಕಾರ್ಜುನ, ಆರ್ಓ ತಿಪ್ಪೇಸ್ವಾಮಿ, ವಿಶ್ವನಾಥ, ಬಿ.ಜಿ ತಳವಾರ ಇದ್ದರು.

## ಜ.14 ರಂದು ಶಿವಯೋಗಿ ಸಿದ್ಧರಾಮೇಶ್ವರ 853 ನೇ ಜಯಂತ್ಯೋತ್ಸವ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.08–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಶಿವಯೋಗಿ ಸಿದ್ಧರಾಮೇಶ್ವರ 853ನೇ ಜಯಂತಿ ಕಾರ್ಯಕ್ರಮವನ್ನು ಜ.14ರಂದು ಮಧ್ಯಾಹ್ನ 12.30 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ಬಿ.ಎಂ.ನಾಗರಾಜ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಬಳ್ಳಾರಿ ಜಿಲ್ಲಾ ಭೋವಿ ಸಂಘ ಅಧ್ಯಕ್ಷ ವಿ.ರಾಮಾಂಜನೇಯ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಹೊಸಪೇಟೆಯ ವಿಜಯನಗರ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಗಾದೆಪ್ಪ ಅವರು ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡುವರು.

ಕಾರ್ಯಕ್ರಮದಲ್ಲಿ ರಾಘವೇಂದ್ರ ಗುಡುದೂರು ತಂಡದಿಂದ ಭಕ್ತಿ ಸಂಗೀತ ಕಾರ್ಯಕ್ರಮ ಇರಲಿದೆ.

ಮೆರವಣಿಗೆ: ಮುನ್ಸಿಪಾಲ್ ಕಾಲೇಜು ಮೈದಾನದಿಂದ ಮೆರವಣಿಗೆಯು ಆರಂಭವಾಗಿ ಗಡಿಗೆ ಚೆನ್ನಪ್ಪ ವೃತದಿಂದ ತೇರು ಬೀದಿ, ಜೈನ್ ಮಾರ್ಕೆಟ್, ಹೆಚ್.ಆರ್.ಗವಿಯಪ್ಪ ವೃತ, ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದವರೆಗೆ ನಡೆಯಲಿದೆ.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ಹಾಲುಮತ ಸಂಸ್ಕೃತಿ ವೈಭವ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕುಕನೂರ ಜನವರಿ 12,13,14 – 2025 ಕಾಗಿನೆಲೆ ಕನಕ ಗುರು ಪೀಠ, ತಿಂಥಣಿ ಬ್ರಿಡ್ಜ್ ದೇವದುರ್ಗದಲ್ಲಿ ನಡೆಯುವ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮವನ್ನು ಕುಕನೂರ ಪಟ್ಟಣದ ಪರಿವೀಕ್ಷಣ ಮಂದಿರದಲ್ಲಿ ಹಾಲುಮತ ಸಮಾಜದ ಗುರು ಹಿರಿಯರು ಹಾಗೂ ಗಣ್ಯಮಾನ್ಯರ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿ ಕಳಕಪ್ಪ ಕಂಬಳಿ ಕುಕನೂರು ತಾಲೂಕಿನ ಎಲ್ಲಾ ಸಮಾಜದವರು ಸೇರಿಕೊಂಡು ಹಾಲುಮತ ಸಾಂಸ್ಕೃತಿಕ ವೈಭವ ಜಾತ್ರೆ ಕಾರ್ಯಕ್ರಮಕ್ಕೆ ತಾಲೂಕಿನಿಂದ ದವಸ ಧಾನ್ಯ ಕಾಣಿಕೆಯನ್ನು ಸಲ್ಲಿಸಬೇಕು ಹಾಲುಮತ ಸಾಂಸ್ಕೃತಿಕ ವೈಭವ ವಿಜೃಂಭಣೆಯಿಂದ ನಡೆಯಲು ಸಮಾಜದ ಎಲ್ಲಾ ಗುರುಹಿರಿಯರು ಶ್ರಮಿಸಿದಾಗ ಕುಕನೂರು ತಾಲೂಕಿನಿಂದ ಒಳ್ಳೆಯ ಸಂದೇಶ ಕಳಿಸೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಾಲುಮತ ಸಮಾಜದ ಕೂಕನೂರ ತಾಲೂಕ ಅಧ್ಯಕ್ಷ ಗಗನ್ ನೋಟಗಾರ, ಮಂಜುನಾಥ್ ಕಡೆಮನಿ, ಲಕ್ಷ್ಮಣ್ ಬೆದವಟ್ಟಿ, ಸಿದ್ದಯ್ಯ ಕಳ್ಳಿಮಠ, ಸಂಗಮೇಶ್ ಗುತ್ತಿ, ಹನುಮಂತಗೌಡ ಚಂಡೂರ, ರೈಮನ್ ಸಾಬ್ ಮಕಪ್ಪನವರ್, ಶಿವಣ್ಣ ರಾಜೂರ, ಎಲ್ಲಪ್ಪ ನೋಟಗಾರ, ಮಂಜು ಎಡಿಯಾಪುರ, ಹಾಗೂ ಇತರರು ಇದ್ದರು.

ಮಲ್ಲಮ್ಮ ನುಡಿ ಕನ್ನಡ ದಿನ ಪತ್ರಿಕೆಯಲ್ಲಿ ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿ:
09964206170

# ಬಾಲ್ಯ ವಿವಾಹ ತಡೆಗೆ ಜಾಗೃತಿ ಮೂಡಿಸಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.08–ಮಹಿಳಾ ಅಭಿವೃದ್ಧಿ ಯೋಜನೆಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಜಿಲ್ಲೆಯಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಾಗಿ ಕಂಡುಬರುವ ಸಮುದಾಯಗಳಲ್ಲಿ ಅದರಿಂದಾಗುವ ದುಷ್ಪರಿಣಾಮ ಕುರಿತು ಹೆಚ್ಚಿನ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಬುಧವಾರ, ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ಮತ್ತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಕಂಡು ಬಂದಾಗ ಅಧಿಕಾರಿಗಳು ಪೊಲೀಸರು ಹಾಗೂ ಇತರೆ ಇಲಾಖೆ ಅಧಿಕಾರಿಗಳ ಸಹಕಾರ ಪಡೆದು ಬಾಲ್ಯ ವಿವಾಹ ತಡೆಗಟ್ಟಬೇಕು. ಈ ಕುರಿತು ಅಧಿಕಾರಿಗಳು ಸಮನ್ವತೆ ಸಾಧಿಸಬೇಕು ಎಂದು ಅವರು ತಿಳಿಸಿದರು.

ಶಾಲಾ ಕಾಲೇಜುಗಳಲ್ಲಿ ಪೋಕ್ಸೋ ಕಾಯ್ದೆ ಕುರಿತು ಅರಿವು ಮೂಡಿಸಬೇಕು. ಪೊಲೀಸ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಶಾಲೆಗಳಲ್ಲಿ ಮಕ್ಕಳ ಸಹಾಯವಾಣಿ, ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಬಾಲ ಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ ಮತ್ತಿತರ ವಿಷಯಗಳ ಬಗ್ಗೆ ತಿಳಿಸಬೇಕು ಎಂದರು.

ಶಾಲೆಯಲ್ಲಿ ಮಕ್ಕಳು ತಮ್ಮ ಮೇಲಿನ ದೌರ್ಜನ್ಯವನ್ನು ಹೇಗೆ ತಡೆಗಟ್ಟಬಹುದು. ಬ್ಯಾಡ್ ಟಚ್ ಅಂದರೇನು? ಗುಡ್ ಟಚ್ ಅಂದರೇನು? ಯಾರಾದಾರೂ ಬ್ಯಾಡ್ ಟಚ್ ಮಾಡಿದರೆ ಅದನ್ನು ಹೇಗೆ ಗುರುತಿಸಬೇಕು. ಅವುಗಳನ್ನು ತಡೆಗಟ್ಟಲು ಮಕ್ಕಳು ಏನು ಮಾಡಬೇಕು ಎಂಬುದರ ಮಾಹಿತಿ ಮಕ್ಕಳಿಗೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಡಿಡಿಪಿಐ ಅಧಿಕಾರಿಗಳಿಗೆ ತಿಳಿಸಿದರು.

ಪೋಷಕರು ಇಲ್ಲದ ಮಕ್ಕಳನ್ನು ಗುರುತಿಸಿ, ಸರ್ಕಾರಿ ಬಾಲ ಮಂದಿರದಲ್ಲಿ ದಾಖಲಾತಿ ಪಡೆದುಕೊಳ್ಳಬೇಕು. ಅಂತಹ ಮಕ್ಕಳು ಕಂಡುಬಂದಲ್ಲಿ ಸರ್ಕಾರಿ ಬಾಲಮಂದಿರಕ್ಕೆ ನೋಂದಾಯಿಸಲು ಸಾರ್ವಜನಿಕರಲ್ಲಿ ಮನವರಿಕೆ ಮಾಡಿಕೊಡಬೇಕು ಎಂದು ಹೇಳಿದರು. ದೈಹಿಕ ಹಾಗೂ ಮಾನಸಿಕವಾಗಿ ಕೌಟುಂಬಿಕ ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರಿಗಾಗಿ ಮಹಿಳಾ ಸಂರಕ್ಷಣೆ ಅಧಿನಿಯಮ 2005 ಕಾಯ್ದೆ ಜಾರಿಯಲ್ಲಿದ್ದು, ಈ ಕಾಯ್ದೆ ಕುರಿತು ಗ್ರಾಮಾಂತರ ಪ್ರದೇಶದವರಿಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡಬೇಕು ಎಂದರು.

ಶೋಷಣೆಗೆ ಒಳಗಾಗುವ ಮಹಿಳೆಯರ ಸಮಸ್ಯೆಗಳನ್ನು ಕೌನ್ಸಲಿಂಗ್ ಮೂಲಕ ಬಗೆಹರಿಸಲು ಪ್ರಯತ್ನಿಸಬೇಕು ಎಂದು ಹೇಳಿದ ಅವರು, ಈ ಕಾಯ್ದೆ ಬಗ್ಗೆ ಗ್ರಾಮಾಂತರ ಪ್ರದೇಶದ ಮಹಿಳೆಯರಲ್ಲಿ ಅರಿವು ಮೂಡಿಸಲು ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರ ಸಹಕಾರ ಪಡೆಯಬೇಕು. ಅಧಿಕಾರಿಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ, ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆನಾಗಪ್ಪ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ವಿವಿಧ ಎನ್‌ಜಿಓ ಸಂಸ್ಥೆಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳು ಮೊಬೈಲ್ ಬಳಕೆ ಮಾಡುವುದನ್ನು ಕಡಿಮೆ ಮಾಡಿ:– ಓಂಪ್ರಕಾಶ ಧಡ್ಡೆ





ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಮನುಷ್ಯ ಬದುಕಲು ಅನಿವಾರ್ಯವಾಗಿರುವ ಮೂಲ ಅವಶ್ಯಕಗಳು ಸಿಗುವುದೇ ಪರಿಸರದಿಂದ. ಹೀಗಾಗಿ ಸುಸ್ಥಿರ ಬದುಕಿಗೆ ಪರಿಸರವನ್ನು ಸಂಕ್ಷಿಸುವುದು ಅಗತ್ಯ ಎಂದು ಓಂಪ್ರಕಾಶ ಧಡ್ಡೆ ಹೇಳಿದರು. ತಾಲೂಕಿನ ನಿರ್ಣಾ ಗ್ರಾಮದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ದೇವಸ್ಥಾನದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಸಮಾಜದ ಪಾತ್ರ ವಿಷಯ ಕುರಿತು ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಎನ್ನುವುದು ಸಾಮೂಹಿಕ ಜವಾಬ್ದಾರಿ ಮಾತ್ರವಲ್ಲದೆ ಪ್ರತಿಯೊಬ್ಬರ ಹೊಣೆಗಾರಿಕೆಯೂ ಆಗಿದೆ. ಪರಿಸರ ಸಂರಕ್ಷಣೆಯಲ್ಲಿ ಸರ್ಕಾರದೊಂದಿಗೆ ಸಂಘ, ಸಂಸ್ಥೆಗಳ ಪಾತ್ರ ಪ್ರಮುಖವಾಗಿದೆ. ಪರಿಸರ ಸಂರಕ್ಷಣೆಗೆ ನಾವು ಸ್ವಯಂ ಪ್ರೇರಿತರಾಗಿ ಗಿಡ, ಮರಗಳನ್ನು ಬೆಳೆಸಬೇಕಿದೆ. ಇದು ಸದ್ಯ ಆಗಬೇಕಾದ ತುರ್ತು ಕಾರ್ಯವಾಗಿದೆ. ಆಪ್ತರ ಸಂತೋಷದ ಕ್ಷಣಗಳಿಗೆ ಕಾರಣರಾಗಲು ನಾವು ಸವಿನೆನಪಿಗಾಗಿ ಉಡುಗೂರೆ ನೀಡುತ್ತೇವೆ. ಇದರ ಜತೆಗೆ ಪರಿಸರಕ್ಕೆ ಪೂರಕವಾಗುವಂತೆ ಒಂದು ಗಿಡ ನೆಟ್ಟು ಪೋಷಿಸಿದಾಗ ಪರಿಸರ ಸಂರಕ್ಷಣೆಗೆ ವೈಯಕ್ತಿಕ ಜವಾಬ್ದಾರಿ ಮೆರೆದಂತೆ ಆಗುತ್ತದೆ.

ವಿದ್ಯಾರ್ಥಿಗಳು ಮೊಬೈಲ್ ಬಳಕೆ ಮಾಡುವುದನ್ನು ಕಡಿಮೆ ಮಾಡಿ ಓದಿನ ಕಡೆ ಹೆಚ್ಚಿನ ಗಮನ ಕೊಟ್ಟು, ಉನ್ನತ ಹುದ್ದೆಗಳನ್ನು ಅಲಂಕರಿಸಿ ಉತ್ತಮ ಪ್ರಜೆಗಳಾಗಿ ಬಾಳಬೇಕು ಸಾಮಾಜಿಕ ಮಾಧ್ಯಮದಿಂದ ಉಂಟಾಗುವ ದುಷ್ಪರಿಣಾಮಗಳು, ವಿದ್ಯಾರ್ಥಿಗಳ ಜೀವನವನ್ನು ತಾವೇ ರೂಪಿಸಿಕೊಳ್ಳಬೇಕು, ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯನ್ನು ಹೊಂದಿ ಬೆನ್ನಟ್ಟಿದರೆ ಅದನ್ನು ಸಾಧಿಸಬಹುದು ಎಂದು ಹೇಳಿದರು. ಇನ್ನೋರ್ವ ಮುಖ್ಯ ಅತಿಥಿ ರಾಜಕುಮಾರ ಆರ್. ಹಡಪದ ಮಾತನಾಡಿ, ವಿನಯವಂತನಲ್ಲದವ ಪಡೆದ ಉನ್ನತ ಶಿಕ್ಷಣಕ್ಕೆ ಸಮಾಜದಲ್ಲಿ ಯಾವುದೇ ಬೆಲೆ ಇರುವುದಿಲ್ಲ. ಆದ್ದರಿಂದ ಶಿಕ್ಷಣದ ಜತೆಯಲ್ಲಿ ವಿದ್ಯಾರ್ಥಿಗಳು ಜೀವನದ ಮೌಲ್ಯಗಳನ್ನು ಕಲಿಯಬೇಕು. ಗಾಂಧೀಜಿ, ಸ್ವಾಮಿ ವಿವೇಕಾನಂದ, ಬಸವಣ್ಣ, ಅಂಬೇಡ್ಕರ್ ಅವರ ತತ್ವ ಆದರ್ಶಗಳು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿ ಜೀವನದ ಬಹುಮುಖ್ಯ ಘಟ್ಟವಾಗಿದ್ದು, ನಿಮ್ಮ ಭವಿಷ್ಯ ನಿರ್ಧಾರವಾಗುವ ಈ ಸಂದರ್ಭದಲ್ಲಿ ಪಠ್ಯ ಮತ್ತು ಪಠ್ಯೇತರ ಎರಡಕ್ಕೂ ಸಮಾನ ಆದ್ಯತೆ ನೀಡುವ ಮೂಲಕ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಬೇಕು ಎಂದು ಹೇಳಿದರು. ಹೆತ್ತ ತಂದೆ ತಾಯಿ ಹಾಗೂ ವಿದ್ಯೆ ಕಲಿಸಿದ ಗುರುಗಳಿಗೆ ಗೌರವಿಸಬೇಕು ಎಂದು ಹೇಳಿದರು. ಉಪನ್ಯಾಸಕ ಓಂಕಾರ ರೆಡ್ಡಿ ಸಲಗರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಿರ್ಣಾ ಗ್ರಾಮ ಶರಣರ ನಾಡು ಇಂತಹ ಪುಣ್ಯಭೂಮಿಯಲ್ಲಿ ಬದುಕುವುದು ನಮ್ಮೆಲ್ಲರ ಭಾಗ್ಯ ಎಂದರು. ವಿದ್ಯಾರ್ಥಿಗಳು ತಮ್ಮ ಬಡಾವಣೆಯ ರಸ್ತೆಯ ಪಕ್ಕದಲ್ಲಿ, ಮನೆಯ ಅಕ್ಕ–ಪಕ್ಕದಲ್ಲಿ ಗಿಡಗಳನ್ನು ನೆಟ್ಟು ಪೋಷಿಸಬೇಕು. ಪ್ರಸ್ತುತ ದಿನಗಳಲ್ಲಿ ವಾಯುಮಾಲಿನ್ಯ ಉಂಟಾಗಬಹುದು, ಪರಿಸರವನ್ನು ಉಳಿಸಬೇಕಾದರೆ ಹೆಚ್ಚು ಗಿಡ–ಮರಗಳನ್ನು ಬೆಳೆಸಬೇಕು. ಹಸಿರೇ ಉಸಿರು ಎಂಬುದು ಹಿಂದಿನಿಂದಲೂ ಚಾಲ್ತಿಯಲ್ಲಿರುವ ಮಾತಾಗಿದ್ದು, ಇತ್ತೀಚಿನ ದಿನಗಳಲ್ಲಿ ಮಾನವ ತನ್ನ ಅತಿ ಆಸೆಗೆ ಪರಿಸರದ ಮೇಲೆ ದೌರ್ಜನ್ಯ ಎಸಗುತ್ತಿದ್ದು, ಇದನ್ನು ತಪ್ಪಿಸುವ ಕೆಲಸಕ್ಕೆ ವಿದ್ಯಾರ್ಥಿಗಳು ಮುಂದಾಗಬೇಕೆಂದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರು ಹಾಗೂ ಶಿಬಿರದ ನಿರ್ದೇಶಕ ಶಿವರಾಜ ಬಿರಾದಾರ್, ಎನ್‌ಎಸ್‌ಎಸ್ ಅಧಿಕಾರಿ ಸಂತೋಷ, ಉಪನ್ಯಾಸಕಿ ರೇಣುಕಾ, ನೂರಲಿ, ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಗೀತಾ ಪ್ರಾರ್ಥನೆ ಗೀತೆ ಹಾಡಿದರು. ಪ್ರಥಮ ಪಿಯುಸಿ ವಿದ್ಯಾರ್ಥಿನಿ ಪಿಂಕು, ಸ್ವಾಗತಿಸಿದರು. ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಕನ್ಯಾಕುಮಾರಿ ನಿರೋಪಿಸಿದರು. ಪ್ರಥಮ ಪಿಯುಸಿ ವಿದ್ಯಾರ್ಥಿ ಸಾಯಿಕಿರಣ ರೆಡ್ಡಿ ವಂದಿಸಿದರು.

## ರಸ್ತೆ ಅಪಘಾತದಲ್ಲಿ ನ್ಯಾಯವಾದಿ ಸಾವು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.8–ರಸ್ತೆ ಅಪಘಾತದಲ್ಲಿ ನ್ಯಾಯವಾದಿಯೊಬ್ಬರು ಮೃತಪಟ್ಟಿರುವ ಘಟನೆ ಹುಮನಾಬಾದ ರೋಡ್‌ನ ತಾವರಗೇರಾ ಕ್ರಾಸ್ ಸಮೀಪದ ಶೋರೂಮ್ ಎದುರುಗಡೆ ನಡೆದಿದೆ.




ಮೃತರನ್ನು ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಬ್ಯಾಲಹಳ್ಳಿ (ಡಬ್ಲೂ) ಗ್ರಾಮದ ಅವಿನಾಶ ತಂದೆ ನಿರ್ಮಲಕಾಂತ ಪಾಟೀಲ (31) ಎಂದು ಗುರುತಿಸಲಾಗಿದೆ.

ಇವರು ಕಲಬುರಗಿ ಜಿಲ್ಲಾ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ ಕೆಲಸ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

# ಕ್ವಾರಿಯಲ್ಲಿ ಕಾಲು ಜಾರಿ ಬಿದ್ದು ಕುರಿಗಾಹಿ ಯುವಕ ಸಾವು



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕುಕನೂರು ತಾಲೂಕಿನ ಗಾವರಾಳ ಸಮೀಪದ ಕಲ್ಲು ಕ್ವಾರಿಯಲ್ಲಿ ಕುರಿ ಮೈ ತೊಳೆಯಲು ಹೋಗಿ ಕುರಿಗಾಯಿ ಒಬ್ಬ ಮೃತಪಟ್ಟ ಘಟನೆ ನಡೆದಿದೆ.

ಮೃತ ಯುವಕ ಗಾವರಾಳ ಗ್ರಾಮದ ಮಾರುತಿ ಎಂದು ಗುರುತಿಸಲಾಗಿದೆ. ಮಂಗಳವಾರದಂದು ಬೆಳಗ್ಗೆ ಸುಮಾರು 10.15ರ ಸುಮಾರಿಗೆ ಗ್ರಾನೆಟ್ ನಲ್ಲಿ ಇರುವ ಹೋಂಡಾದ ನೀರಿನಲ್ಲಿ ಕುರಿ ಮೈ ತೊಳೆಯುವಾಗ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾನೆ ಎಂದು ಕಂಡುಬಂದಿದೆ.

ಕುಕನೂರು ಅಗ್ನಿಶಾಮಕ ಠಾಣೆ ಸಿಬ್ಬಂದಿ ಹಾಗೂ ಕುಕನೂರು ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆಯಲ್ಲಿ ಮೃತ ಯುವಕನ ಶೋಧ ಕಾರ್ಯ ಕೈಗೊಳ್ಳಲಾಗಿದೆ.

ಈ ವೇಳೆಯಲ್ಲಿ ಕುಕನೂರು ಪೊಲೀಸ್ ಠಾಣೆಯ ಪಿಎಸ್‌ಐ ಟಿ ಗುರುರಾಜ್ ಹಾಗೂ ಅಗ್ನಿಶಾಮಕ ಠಾಣೆಯ ಅಧಿಕಾರಿ ಕೆ. ಜನಾರ್ದನ್ ಘಟನಾ ಸ್ಥಳದಲ್ಲಿ ಹಾಜರಿದ್ದರು.

ವ್ಯಕ್ತಿಯ ಮೃತದೇಹ ಪತ್ತೆಯಾಗಿದ್ದು ಕುಕನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣದ ಕಲಿಸಿಕೊಳ್ಳಲಾಗಿದೆ ಎಂದು ಪಿ ಎಸ್ ಐ ಟಿ ಗುರುರಾಜ್ ತಿಳಿಸಿದ್ದಾರೆ.

## ಫೆಬ್ರವರಿ ಮೊದಲ ವಾರದಲ್ಲಿ ಗ್ಯಾರಂಟಿ ಯೋಜನೆಗಳ ಸಮಾವೇಶ ಹಮ್ಮಿಕೊಳ್ಳಲಾಗುವುದು:ರೆಡ್ಡಿ ಶ್ರೀನಿವಾಸ'




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಸಮಾವೇಶವನ್ನು ಫೆಬ್ರವರಿ ಮೊದಲನೇ ವಾರ ಕೊಪ್ಪಳ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಕೊಪ್ಪಳ ಜಿಲ್ಲಾ ಗ್ರಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಹೇಳಿದರು.

ಅವರು ಬುಧವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಕರೆದ ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಸಮಾವೇಶ ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಹಾಗೂ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸಲಿದ್ದು, ಅವರು ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದವನ್ನು ನಡೆಸಲಿದ್ದಾರೆ. ಗೃಹಲಕ್ಷ್ಮೀ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಗಳಡಿ ಲಾಭ ಪಡೆದು-ಕೊಂಡ ಫಲಾನುಭವಿಗಳನ್ನು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಸಮಾವೇಶಕ್ಕೆ ಕರೆ ತರಬೇಕು ಎಂದರು.

ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಸಮಾವೇಶಕ್ಕಾಗಿ ಫಲಾನುಭವಿಗಳನ್ನು ಸೇರಿಸಲು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಎಲ್ಲಾ ತಾಲ್ಲೂಕುಗಳ ಅಧ್ಯಕ್ಷರು ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳಿ. ಈ ಹಿನ್ನೆಲೆಯಲ್ಲಿ ತಾಲ್ಲೂಕುವಾರು ಸಭೆಗಳನ್ನು ನಡೆಸಬೇಕು. ಸಮಿತಿಯ ಎಲ್ಲಾ ಸದಸ್ಯರು ಸಹಕಾರ ನೀಡಬೇಕು. ಇದರ ಜೊತೆಗೆ ಕಾರ್ಯಕ್ರಮಕ್ಕೆ ಫಲಾನುಭವಿಗಳನ್ನು ಸೇರಿಸಲು ಐದು ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ವಿಶೇಷ ಕ್ರಮ ವಹಿಸಬೇಕು ಎಂದರು.

ಗ್ಯಾರಂಟಿ ಯೋಜನೆಗಳು ಜಿಲ್ಲೆಯ ಅರ್ಹ ಫಲಾನುಭವಿಗಳಿಗೆ ಸಿಗಬೇಕು ಎನ್ನುವುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ಜನಪರವಾದ ಈ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಇವುಗಳ ಲಾಭವನ್ನು ಜಿಲ್ಲೆಯ ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೆ ಸಿಗಬೇಕು. ಯಾವುದೇ ಅರ್ಹ ಫಲಾನುಭವಿಗಳು ಈ ಯೋಜನೆಗಳಿಂದ ಹೊರಗುಳಿಯದಂತೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಮಾತನಾಡಿ, ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಸಮಾವೇಶಕ್ಕಾಗಿ ಸುಮಾರು 1.50 ಲಕ್ಷಕ್ಕೂ ಹೆಚ್ಚಿನ ಜನರನ್ನು ಸೇರಿಸುವ ಗುರಿ ಹೊಂದಲಾಗಿದ್ದು, ಗೃಹ ಲಕ್ಷ್ಮಿ ಮತ್ತು ಶಕ್ತಿ ಯೋಜನೆಯ ಲಾಭ ಪಡೆದುಕೊಂಡಿರುವ ಜಿಲ್ಲೆಯ ಕುಷ್ಟಗಿ, ಕನಕಗಿರಿ, ಗಂಗಾವತಿ ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರಗಳ ತಲಾ 20 ಸಾವಿರ ಮತ್ತು ಕೊಪ್ಪಳ ಜಿಲ್ಲಾ ಕೇಂದ್ರದಿಂದ 25 ಸಾವಿರ ಫಲಾನುಭವಿಗಳನ್ನು ಸೇರಿಸಬೇಕು. ಅದೇ ರೀತಿ ಅನ್ನಭಾಗ್ಯ ಯೋಜನೆಯಡಿ ಜಿಲ್ಲಾ ಕೇಂದ್ರದಿಂದ 15 ಸಾವಿರ ಮತ್ತು ವಿವಿಧ ವಿಧಾನಸಭಾ ಕ್ಷೇತ್ರವಾರು 5 ಸಾವಿರದಂತೆ, ಯುವನಿಧಿ ಯೋಜನೆಯಡಿ ಜಿಲ್ಲೆಯ ಒಂದು ಸಾವಿರ ಹಾಗೂ ಗೃಹಜ್ಯೋತಿ ಯೋಜನೆಯಡಿ ಲಾಭಪಡೆದ ಜಿಲ್ಲೆಯ 10 ಸಾವಿರ ಫಲಾನುಭವಿಗಳನ್ನು ಕರೆ ತರಲು ಸಂಬಂಧಪಟ್ಟ ಇಲಾಖೆಗಳ ಅನುಷ್ಠಾನಾಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ನಾಗರಜ ಅರಳಿ ಹಾಗೂ ಮಂಜುನಾಥ ಗೊಂಡಬಾಳ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಹಾಗೂ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು, ತಾಲ್ಲೂಕಾ ಅಧ್ಯಕ್ಷರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

ಬಳ್ಳಾರಿ,ಜ.08-ಜೆಸ್ಕಾಂ ನಗರ ಉಪವಿಭಾಗ-1 ರ ವ್ಯಾಪ್ತಿಗೆ ಬರುವ 110/11 ಕೆವಿ ಸೌತ್ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜು ಆಗುವ ಎಫ್-25 ಫೀಡರ್‌ನ ವಿವಿಧ ಏರಿಯಾಗಳ ವಿದ್ಯುತ್ ದುರಸ್ತಿ ಕಾರ್ಯ ಕೈಗೊಳ್ಳುತ್ತಿರುವುದರಿಂದ ಜ.09 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ನಗರದ ಆರ್‌ಕೆ ಮಿಲ್ ರಸ್ತೆ, ಬಾಪೂಜಿ ನಗರ, ಬಾಪೂಜಿ ನಗರ ವೃತ್ತ, ರಾಣಿ ತೋಟ, ಕಣೇಕಲ್ ಬಸ್‌ನಿಲ್ದಾಣ, ಮಾರ್ಕೆಟ್, ರ್ರಿಸ್ವಾಮಿ ಮಠ, ಟೋಪಿಗಲ್ಲಿ ಸೇರಿದಂತೆ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಲ್ಲರನ್ನೂ 'ನಮ್ಮವರು' ಎಂಬ ಭಾವ ಮೂಡಿಸಿದ ಶರಣರು: ಡಾ. ಮಾಜಿದ್.



(ವರದಿ.ಡಿ.ಕೆ. ಪ್ರಹ್ಲಾದ.)

ಮಲ್ಲಮ್ಮ ನುಡಿ ವಾರ್ತೆ.

ಬಸವಕಲ್ಯಾಣ:- ಎಲ್ಲರನ್ನೂ 'ನಮ್ಮವರು' ಎಂಬ ಭಾವ ಮೂಡಿಸಿದ ಕಲ್ಯಾಣದ ಶರಣರು, ಸಮಾಜದ ಎಲ್ಲ ಸ್ತರದವರೂ ಮಾತನಾಡುವ ಅಧಿಕಾರ ನೀಡಿದ್ದರು. ಸಮಾನತೆ ಹಾಗೂ ಸಮ ಸಮಾಜ ರೂಪಿಸಲು ಶ್ರಮಿಸಿದ್ದರು ಎಂದು ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಡಾ ಅಬ್ದುಲ್ ಮಾಜೀದ್ ಮಣಿಯಾರ ಹೇಳಿದರು.

ಇಲ್ಲಿನ ಶ್ರೀ ಬಸವೇಶ್ವರ ಪದವಿ ಕಾಲೇಜಿನಲ್ಲಿ ಐಕ್ಯೂಎಸಿ ವತಿಯಿಂದ ಹಮ್ಮಿಕೊಂಡಿದ್ದ 'ಇತಿಹಾಸ ಅಧ್ಯಯನದ ಆಯಾಮಗಳು' ಉಪನ್ಯಾಸ ಸಮಾರಂಭ ಉದ್ಘಾಟಿಸಿ ಮಾತನಾಡಿ , ಶರಣ, ಸೂಫಿ, ಬೌದ್ಧ, ಜೈನ, ವೈಷ್ಣವ, ಶಾಕ್ತ, ನಾಥ ಸೇರಿ ಹಲವು ಪಂಥಗಳಿದ್ದ ಕಲ್ಯಾಣ ಬಹುಸಂಸ್ಕೃತಿಯ ನೆಲ ಎಂದರು.

ಇತಿಹಾಸಕಾರರು ತಮ್ಮ ಸಂಶೋಧನೆಯ ಫಲಿತಗಳು ಸಮಾಜಕ್ಕೆ ನೀಡುತ್ತಾರೆ. ಸಮಾಜ ಹಲವು ಆಯಾಮಗಳಲ್ಲಿ ಅದನ್ನು ತಾನಾಗಿಯೇ ಗ್ರಹಿಸುತ್ತದೆ. ಮಸ್ಕಿ, ಸನ್ನಿತಿಯಲ್ಲಿ ದೊ-ರೆತ ಶಾಸನಗಳಿಂದ ಅಶೋಕ ಚಕ್ರವರ್ತಿಯ ಚರಿತ್ರೆಗೆ ಅಸ್ಮಿತೆ ದೊರೆಯಿತು. ಕರ್ನಾಟಕದಿಂದಲೇ ಅಶೋಕನ ಚರಿತ್ರೆಯ ರಚನೆಗೆ ಆಕರ ದೊರೆತಿವೆ ಎಂದರು.

ಕೋಟೆ, ಶಾಸನ, ಹಸ್ತಪ್ರತಿ, ತಾಡೋಲೆ,ದೇಗುಲಗಳ ರಚನಾ ವಿನ್ಯಾಸ, ಶಿಲ್ಪಕಲೆ, ಕಲಾಕೃತಿ ಬಗೆಗೆ ಸೂಕ್ಷ್ಮವಾಗಿ ಅಧ್ಯಯನ ಮಾಡಿ ಚರಿತ್ರೆಕಾರರು ತಮ್ಮ ನಿಲುವುಗಳು ಮಂಡಿಸುತ್ತಾರೆ ಎಂದರು.

ಶಿವಪುರ, ನಾರಾಯಣಪುರ, ಮೊರಖಂಡಿ,ಉಮಾಪುರದ ಹಳೆಯ ದೇವಾಲಯಗಳು, ಕೋಟೆ, ಶಾಸನಗಳು, ಹಳೆಯ ಬಾವಿಗಳು

ಕಲ್ಯಾಣದ ಪ್ರಾಚೀನ ನಾಗರಿಕತೆ, ವೈಭವದ ಇತಿಹಾಸಕ್ಕೆ ಸಾಕ್ಷಿಯಾಗಿವೆ. ಬಸವಣ್ಣನವರ ಹಾಗೂ ಜಾಗತಿಕ ತತ್ವಜ್ಞಾನಿಗಳ ತತ್ವಸಿದ್ಧಾಂತಗಳನ್ನು ಕುರಿತು ತೌಲನಿಕ ಅಧ್ಯಯನ ಇಂದು ಹೆಚ್ಚು ಅಗತ್ಯವಿದೆ ಎಂದರು.

ಪ್ರಾಚಾರ್ಯರಾದ ಡಾ ಭೀಮಾಶಂಕರ ಬಿರಾದಾರ ಮಾತನಾಡಿ, ಚರಿತ್ರೆಯನ್ನು ಎಲ್ಲ ಸ್ತರಗಳಿಂದ ಗ್ರಹಿಸಬೇಕಾಗಿದೆ. ಚರಿತ್ರೆ ರಚನೆಗೆ ಪರಿಗಣಿಸಿದ ಆಕರಗಳು,ಅನ್ವಯಿಸಿದ ಸಿದ್ಧಾಂತಗಳು ಈ ಎಲ್ಲವನ್ನೂ ಅಧ್ಯಯನದ ವ್ಯಾಪ್ತಿಗೆ ತರಬೇಕು. ಜಗತ್ತಿನ ಎಲ್ಲ ಕಡೆಗಳಲ್ಲೂ ಚರಿತ್ರೆಯಿದೆ. ಚರಿತ್ರೆಯ ಕೆಲ ಹಲವು ಕಡೆಗಳಲ್ಲಿ ಮಹಿಳೆಯರ, ಸಬ್ ಆಲ್ಟರ್ನ್ ಸಮುದಾಯದ ಗೈರು ಹಾಜರಿ ಎದ್ದು ಕಾಣುತ್ತದೆ. ಮಾರ್ಕ್ಸ್‌ವಾದಿ, ಮಹಿಳಾದಿ ಸೇರಿ ತಾತ್ವಿಕತೆಯ ನೆಲೆಗಟ್ಟಿನ ಮೇಲೆ ಚರಿತ್ರೆಯ ಪುನರ್ ರಚನೆ ಹಾಗೂ ಪುನರ್ ಮೌಲ್ಯಿಕರಣ ನಡೆಯಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಆಡಳಿತಾಧಿಕಾರಿ ಡಾ.ಮಲ್ಲಿಕಾರ್ಜುನ ಲಕಶೆಟ್ಟಿ ಮಾತನಾಡಿ, ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳು ಎದುರಿಸಲು ಇತಿಹಾಸದ ಅಧ್ಯಯನ ಬೇಕಾಗುತ್ತದೆ. ಪ್ರತಿಯೊಂದು ಕ್ಷೇತ್ರಕ್ಕೂ ಅದರದೇ ಆದ ಇತಿಹಾಸ ಇರುತ್ತದೆ ಎಂದರು.

ಈ ಸಂದರ್ಭದಲ್ಲಿ

ಶ್ರೀ ಬಸವೇಶ್ವರ ಪಿಯು ಕಾಲೇಜು ಪ್ರಾಚಾರ್ಯ ಡಾ ರುದ್ರಮಣಿ ಮಠಪತಿ, ಐಕ್ಯೂಎಸಿ ಸಂಯೋಜಕ ಪವನ ಪಾಟೀಲ,

ಡಾ. ಬಸವರಾಜ ಖಂಡಾಳೆ, ವಿವೇಕಾನಂದ ಶಿಂಧೆ, ಜಗದೇವಿ ಜವಳಗೆ, ಗಂಗಾಧರ ಸಾಲಿಮಠ, ಬಸವರಾಜ ಗುಂಗೆ, ಶೃತಿ ನೀಲಮಠ, ರೋಶನ್ ಬಿ, ಪ್ರವೀಣ ಬಿರಾದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಡಾ. ಶಾಂತಲಾ ಪಾಟೀಲ ಸ್ವಾಗತಿಸಿದರು. ಚನ್ನಬಸಪ್ಪ ಗೌರ ನಿರೂಪಿಸಿದರು. ಸಂಗೀತಾ ಮಹಾಗಾವೆ ವಂದಿಸಿದರು.

## ಸಂಜೀವಿನಿ ಒಕ್ಕೂಟಗಳು ಅಧ್ಯಕ್ಷರ ಪಾತ್ರ ಅಲಂಕಾರಿಕ ಹುದ್ದೆಯಲ್ಲ ಜವಾಬ್ದಾರಿ ಯುತ ಹುದ್ದೆ : ಅಂಬಣ್ಣ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಮಹಿಳೆಯರು ಪರಿವರ್ತನೆ ಹೆಜ್ಜೆ ತರಬೇತಿ ಪಡೆದವರು ಒಕ್ಕೂಟಗಳನ್ನು ಪರಿವರ್ತನೆ ಮಾಡಿ ಪಾರದರ್ಶಕ ದಿಂದ ನೆಡೆಸಿ ಸಮುದಾಯ ಆದಾರಿತ ಸಂಸ್ಥೆ ಯಾಗಿ ಬೆಳೆಸಬೆಕೆಂದು ಕೊಪ್ಪಳ ಸಂಜೀವಿನಿ ಯೋಜನೆಯ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಕಟಗಿ ಅಂಬಣ್ಣ ಹೇಳಿದರು

ಅವರು ಪಟ್ಟಣದ ತಾಲೂಕ ಪಂಚಾಯತ ಆವರಣದ ಕೆವಿಕೆ ಸಂಸ್ಥೆಯಲ್ಲಿ ಜರುಗಿದ ಬಳ್ಳಾರಿ ಜಿಲ್ಲೆಯ ಸಂಡೂರು, ಕಂಪ್ಲಿ ತಾಲೂಕಗಳ ಸಂಜೀವಿನಿ ಒಕ್ಕೂಟ-ದ ಅಧ್ಯಕ್ಷರಗಳ "ಪರಿವರ್ತನೆ ಹೆಜ್ಜೆ "ಮೂರು ದಿನಗಳ ವಸತಿ ಸಹಿತ ತರಬೇತಿ ಸಮಾರೂಪ ಸಮಾರಂಭದಲ್ಲಿ ಮಾತನಾಡಿದರು

ರಾಜ್ಯ ಸರಕಾರ ಪ್ರತಿಯೊಂದು ಜಿಲ್ಲೆಯ ಒಕ್ಕೂಟದ ಅಧ್ಯಕ್ಷರಿಗೆ ಪಾತ್ರ ಹಾಗೂ ಜವಾಬ್ದಾರಿಗಳ ಕುರಿತು ತರಬೇತಿಗಳು ಮಾಡಿರಲ್ಲಿ ಇಲ್ಲಿಯವರೆಗೆ ಏನೆಲ್ಲ ಕಾರ್ಯಕ್ಕಗಳನ್ನು ಮಾಡಿರೋ ಗೊತ್ತಿಲ್ಲಿನ್ನು ತರಬೇತಿ ಪಡೆದವರು ಪ್ರ ಪ್ರತಿಯೊಬ್ಬ ಅಧ್ಯಕ್ಷರು ಪರಿವರ್ತನೆ ಯಾಗಿ ಒಕ್ಕೂಟದ ಪರಿವರ್ತನೆ ಮಾಡಿದರೆ ಗ್ರಾಮವು ಅಭಿವೃದ್ಧಿ ಯಾಗುತವೆ ಒಕ್ಕೂಟದ ಅಧ್ಯಕ್ಷರು ಗ್ರಾಮದಲ್ಲಿ ಇರುವ ಒಬ್ಬಂಟಿ ಮಹಿಳೆ, ವಿಕಲಚೇತನ ಮಹಿಳೆ, ಕಡು ಬಡ ಮಹಿಳೆಯರನ್ನು ಗುರುತಿಸಿ ಸಂಘದ ವ್ಯಾಪ್ತಿಗೆ ಸೇರಿಸಿ ಜೀವನೋಪ ಚಟುವಟಿಕೆಗಳನ್ನು ಮಾಡಿಸಿ ಆದಾಯವನ್ನು ದ್ವಿಗುಣವಾಗುವಂತ ಜೀವನೋಪಾಯ ಚಟುವಟಿಕೆಗಳನ್ನು ಅಳವಡಿಸಿಕೊಂಡಾಗ ಒಕ್ಕೂಟವು ಸಾಮರ್ಥ್ಯ ಅಭಿವೃದ್ಧಿ ಯಾಗಿ ಬೆಳವಣಿಗೆಯಾಗುತ್ತದೆ ಇದೊಂದು ಅಲಂಕಾರಿಕ ಹುದ್ದೆಯಲ್ಲ ಜವಾಬ್ದಾರಿ ಯುತ ಹುದ್ದೆಯಾಗಿದೆ ನಮ್ಮ ಒಕ್ಕೂಟ ಎಂಬ ಭಾವನೆಗಳು ಎಲ್ಲಾರಲ್ಲಿ ಬರಬೇಕು, ಇಲ್ಲಿವರಗೆ ಕೊಪ್ಪಳದಲ್ಲಿ ನಾಲ್ಕು ಹಂತಗಳಲ್ಲಿ 151 ಅಧ್ಯಕ್ಷರಿಗೆ ತರಬೇತಿ ನೀಡಲಾಗಿದೆ ಇದು ಬಳ್ಳಾರಿ ಜಿಲ್ಲೆಯ ವರು 5 ನೇ ಬ್ಯಾಚ್ ಆಗಿದೆ

.ಒಕ್ಕೂಟದ ಎಲ್ಲಾ ದಾಖಲಾತಿಗಳನ್ನು ಸರಿಯಾಗಿ ಕಾರ್ಯನಿರ್ವಹಿಸುವ ಕೆಲಸ ಕಾರ್ಯಕಾರಿ ಸಮಿತಿಗೆ ಇದೆ ತಾವುಗಳು ಜವಾಬ್ದಾರಿ ಯುತವಾಗಿ ಕಾರ್ಯನಿರ್ವಹಿಸಬೇಕು ಸಮಾಜಿಕವಾಗಿ ಆರ್ಥಿಕವಾಗಿ ,ಶೈಕ್ಷಣಿಕವಾಗಿ ಕಾರ್ಯಗಳನ್ನು ಮಾಡಿ ಸಾಮೂದಾಯ ಆದಾರಿತ ಸಂಸ್ಥೆ ಯನ್ನಾಗಿ ಮಾಡುವದು ನಿಮ್ಮ ಕರ್ತವ್ಯವಾಗಿದೆಂದು ಹೇಳಿದರು

ಕಾರ್ಯಕ್ರಮದಲ್ಲಿ ಜಿಲ್ಲಾ ಸಂಜೀವಿನಿ ಯೋಜನೆಯ ವ್ಯವಸ್ಥಾಪಕ ವೆಂಕೋಬ ಗುರಿಕಾರ, ಜಿಲ್ಲಾ ಸಂಪನ್ಮೂಲ ವ್ಯಕ್ತಿ ಬಸವರಾಜ ಮುಂಡರಗಿ , ಶೋಭಾ ಜಗಳೂರ, ಬಳ್ಳಾರಿ ಜಿಲ್ಲೆಯ ವಲಯ ಸಂಯೋಜ-ಕರಾದ ಬಸವರಾಜ ಹಾಗೂ, ಪಾರ್ವತಿ, ಮತ್ತು ಸಂಡೂರ ,ಕಂಪ್ಲಿ ತಾಲೂಕು ಸಂಜೀವಿನಿ ಯೋಜನೆ ಒಕ್ಕೂಟದ ಅಧ್ಯಕ್ಷರು ಡಿಟಿಸಿ ತಿಮ್ಮಯ್ಯ ಕಾರ್ಯಕ್ರಮ ನಿರೂಪಿಸಿದರು.

## ಜ.10 ರಂದು ವಾಕ್ ಇನ್ ಇಂಟರ್‌ವ್ಯೂವ್

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕೊಪ್ಪಳ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ವಾಕ್ ಇನ್ ಇಂಟರ್‌ವ್ಯೂವ್ ಅನ್ನು ಜನವರಿ 10ರಂದು ಅಂದು ಬೆಳಿಗ್ಗೆ 10:30 ರಿಂದ 1.30 ಗಂಟೆಯವರೆಗೆ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಆಯೋಜಿಸಲಾಗಿದೆ. ಈ ವಾಕ್ ಇನ್ ಇಂಟರ್‌ವ್ಯೂವ್‌ನಲ್ಲಿ ಖಾಸಗಿ ಸಂಸ್ಥೆಗಳು ಭಾಗವಹಿಸಲಿದ್ದು, ತಮ್ಮಲ್ಲಿರುವ ಖಾಲಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿರುತ್ತದೆ. 18ರಿಂದ 30 ವರ್ಷ ವಯೋಮಾನದ ಪಿಯುಸಿ, ಯಾವುದೇ ಪದವಿ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಅರ್ಹ ವಿದ್ಯಾರ್ಹತೆ ಹೊಂದಿದ ಯುವಕ ನಿರುದ್ಯೋಗಿ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳು ಮತ್ತು ಆಧಾರ ಕಾರ್ಡಿನ ಪ್ರತಿ, ಬಯೋಡಾಟಾ ಹಾಗೂ ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ವಾಕ್ ಇನ್ ಇಂಟರ್‌ವ್ಯೂವ್‌ನಲ್ಲಿ ಭಾಗವಹಿಸಿ ಉದ್ಯೋಗದ ನೆರವು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ, ದೂ.ಸಂ: 08539-220859 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಧ್ಯಾರ್ಥಿಗಳು ಜನ್ಮ ದಿನದಂದು ಶಾಲೆಯಲ್ಲಿ ಸಸಿ ನೆಡೆಸಿ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ವಿಧ್ಯಾರ್ಥಿಗಳೆ ತಮ್ಮ ಜನ್ಮ ದಿನದಂದು ವ್ಯಥ9 ಖರ್ಚು ಮಾಡದೆ ಶಾಲೆಯಲ್ಲಿ ಸಸಿಗಳನ್ನು ನೆಡೆಸಿವುದರ ಮೂಲಕ ಆಚರಿಸಿಕೊಳ್ಳಬೇಕು ಎಂದು ಬಟಗೇರಾ ಸರಕಾರಿ ಪ್ರೌಢ ಶಾಲೆಯ ಶಿಕ್ಷಕರಾದ ಡಿ. ಗೋವಿಂದಪ್ಪಾ ತಿಳಿಸಿದರು. ತಾಲೂಕಿನ ಆಲಗೂಡ ಸರ್ಕಾರಿ ಪ್ರೌಢಶಾಲೆಯಲ್ಲಿ ಇಕೋ ಕ್ಲಬ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಗಿಡ ಮರಗಳ ರಕ್ಷಣೆ ಮಾಡಿ ಪ್ಲಾಸ್ಟಿಕ್ ಬಳಕೆ ಮಾಡಬೇಡಿ ನಿಸರ್ಗದ ಮಹತ್ವ ಬಹಳಷ್ಟು ಇದೆ ಎಂದು ತಿಳಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿಧ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಅಧ್ಯಕ್ಷತೆಯನ್ನು ಪ್ರಭಾರಿ ಮುಖ್ಯ ಗುರುಗಳಾದ ಸುಜಾತಾ ಖೈರಾಟಕರ ವಹಿಸಿ ಮಾತನಾಡಿ ಪ್ಲಾಸ್ಟಿಕ್ ನಿಷೇಧ ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಆಗ ಮಾತ್ರ ನಿಯಂತ್ರಣಕ್ಕೆ ಬರುತ್ತದೆ ಎಂದರು. ಶಾಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ಮಾತುಗಳು ವಿಜ್ಞಾನ ಶಿಕ್ಷಕರಾದ ಸುಲಭಾ ಪೋದ್ದಾರ್. ಬೊಮ್ಮಲಿಂಗಪ್ಪ ಕೆ. ಸ್ವಾಗತ ರಾಜಕುಮಾರ್ ಬಿರಾಜದಾರ. ಸಂಚಾಲನೆ ಹರ್ಷವರ್ಧನ ಕಾಂಬಳೆ. ರಾಮ ಅವರಾದೆ ವಂದಿಸಿದರು.

## ನರೇಂದ್ರನಾಥ ಮಹಾರಾಜರ ನಾಮ ಜಪ ಸಪ್ತಾಹ ಸಮಾರೋಪ ಸಮಾರಂಭ.



ಮಲ್ಲಮ್ಮ ನುಡಿ ವಾರ್ತೆ.

ಬಸವಕಲ್ಯಾಣ:-(ಹುಲಸೂರ): ಜನರು ಅಧ್ಯಾತ್ಮಿಕ ಚಿಂತನೆಗಳಿಂದ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಅನ್ನದಾನವು ಎಲ್ಲಾ ದಾನಗಳಲ್ಲಿ ಮಹಾದಾನ,ಹಸಿದು ಬಂದವನಿಗೆ ನಾವೆಲ್ಲರೂ ಅನ್ನದಾನ ಮಾಡಬೇಕು ಅದೆ ನಮ್ಮ ಸಂಸ್ಕಾರ ಮತ್ತು ಸಂಸ್ಕೃತಿ ಎಂದೂ ಪ್ರವಚನಕಾರ್ತಿ ಸಿಮಾತಾಯಿ ಭರೆಡೇ ಮಾರ್ಗದರ್ಶನ ನೀಡಿದರು"

ಸಮೀಪದ ಜಮಖಂಡಿ ಗ್ರಾಮದಲ್ಲಿ ನೆಡೆದ ನರೇಂದ್ರನಾಥ ಮಹಾರಾಜರ ನಾಮ ಜಪ ಸಪ್ತಾಹ ಸಮಾರೋಪ ಸಮಾರಂಭ ಉದ್ದೇಶಿಸಿ ಮಾತನಾಡಿ ನರೇಂದ್ರ ಮಹಾರಾಜರ ಸದ್ವಿಚಾರ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಂಡರೆ, ಸುಖ, ನೆಮ್ಮದಿ ಪ್ರಾಪ್ತವಾಗುತ್ತದೆ'.ನಾಡಿಗೆ ದಾರ್ಶನಿಕರ, ಮಹಾಪುರುಷರ, ಸಾಧು-ಸಂತರ ಪರಂಪರೆ ಇದೆ. ಆದರೂ ಜನರು ಪರಕೀಯ ಸಂಸ್ಕೃತಿಯ ಮೋಹಕ್ಕೆ ಒಳಗಾಗಿ ಅವನತಿ ಹೊಂದುತ್ತಿದ್ದಾರೆ. ನಮ್ಮ ಶ್ರೇಷ್ಠ ಸಂಸ್ಕೃತಿ ಪರಂಪರೆಯ ರಕ್ಷಣೆ ಮಾಡುವುದರ ಜೊತೆಗೆ ಅನುಕರಣೆ ಮಾಡಿದರೇ ಮನುಕುಲಕ್ಕೆ ಒಳಿತು ಬಯಸುವ ಕಾಲವೂ ಸಹ ಇದಾಗಿದೆ' ಎಂದರು. ನರೇಂದ್ರನಾಥ ಮಹಾರಾಜರ ನಾಮ ಸಪ್ತಾಹದ ನಿಮಿತ್ತ ಬೆಳಗ್ಗೆ ಗ್ರಾಮದ ಪ್ರಮುಖ ದೇವಸ್ಥಾನ, ಶಾಲೆ, ತೆರದ ಬಾವಿಗಳ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಅಭಿಷೇಕ, ಕಳಸಪೂಜೆ, ನರೇಂದ್ರನಾಥ ಮಹಾರಾಜರ ಭಾವಚಿತ್ರದೊಂದಿಗೆ ಗ್ರಂಥವನ್ನು ಪಲ್ಲಕ್ಕಿಯಲ್ಲಿ ಇರಿಸಿ ಮೆರವಣಿಗೆ ನಡೆಸಲಾಯಿತು.

ಈ ಸಂದರ್ಭದಲ್ಲಿ

ಪ್ರಮುಖರಾದ ಲಹೂ ಘಾಯಾಲ, ಕಿಶೋರ ತೆ-ಲೀಟೆ, ರಾಹುಲ ಬಿರಾದಾರ, ಶಿವಾಜಿ ತಾಂಬೋಳೆ, ತಾನಾಜಿ ಘಂಟೆ, ನಾಗನಾಥ ಬೊರೋಳೆ, ನಿವರ್ತಿ ಬಿರಾದಾರ, ನರ್ಸಿಂಗ್ ಬೊರೋಳೆ, ಶ್ರೀಧರ ಅಂಬೆಗಾಂವೆ, ರಾಮಚಂದ್ರ ಬಿರಾದಾರ, ಅಮೋಲ ಘಂಟೆ, ವಿಜಯಕುಮಾರ ಜಾಧವ ಹಾಗೂ ಮಹಿಳೆಯರು. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸಂಗೀತದಿಂದ ರೋಗಗಳು ನಿವಾರಣೆ ಮೃತ್ಯುಂಜಯ ಶಿವಾಚಾರ್ಯರು



ಮಲ್ಲಮ್ಮ ನುಡಿ ವಾರ್ತೆ.

ಹುಮನಾಬಾದ:ಸಂಗೀತದಿಂದ ಅನೇಕ ರೋಗಗಳು ನಿವಾರಣೆಯಾಗಿವೆ ಸಾಂಕ್ರಾಮಿಕ ರೋಗಗಳು ಕ್ಯಾನ್ಸರನಂತಹ ರೋಗಗಳು ಸಂಗೀತ ಕೇಳುವದರಿಂದ ವಾಸಿಯಾಗುತ ಮನುಷ್ಯನ ಒತ್ತಡದ ಜೀವನದಲ್ಲಿ ದಿನನಿತ್ಯ ಸಂಗೀತ ಕೇಳುವದರಿಂದ ಮನಸಿಗೆ ಶಾಂತಿಯನ್ನು ನೀಡುತ್ತದೆ ಎಂದು ಶ್ರೀ ಷ.ಬ್ರ ಮೃತ್ಯುಂಜಯ ಶಿವಾಚಾರ್ಯರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು ಬೀದರ ಹುಮನಾಬಾದ ತಾಲೂಕಿನ ಕಲ್ಲೂರ ಸಂಸ್ಥಾನ ಹಿರೇಮಠದಲ್ಲಿ ಶ್ರೀ ಕಿನ್ನರಿ ನಾದ ರುದ್ರ ಸಂಗೀತ ಕಲಾ ಸಂಸ್ಥೆ (ರಿ) ಹಳ್ಳಿಖೇಡ (ಕೆ) ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ನಡೆದ ಸಂಗೀತ ಸೌರಭ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು ಷ ಬ್ರ ಉದಯರಾಜಯೋಗೇಂದ್ರ ಶಿವಾಚಾರ್ಯರು ಪಾವನ ಸಾನಿಧ್ಯ ವಹಿಸಿದರು ಮುಖ್ಯ ಅತಿಥಿಗಳಾಗಿ ಮಾಣಿಕಪ್ಪ ಮಾಸ್ಟರ್ . ಭಿಮಶ್ಯಾ ಕೋರಿ. ಶಿವಕುಮಾರ ಯರಭಾಗ. ಸದಾಶಿವಯ್ಯ ಕರೋಳಿ . ಸಂಜುಕುಮಾರ ಪಾಟೀಲ. ಬಸವರಾಜ ಕಣಜಿ ಭಾಗವಹಿಸಿದರು. ನಂತರ ನಾಡಿನ ಹೆಸರಾಂತ ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾದ ಮಹಾಂತಯ್ಯ ಮಠಾಳ ಗುರುಶಾಂತಯ್ಯ ಸ್ಥಾವರಮಠ ಮಲ್ಲಿಕಾರ್ಜುನ ಶಾಸ್ತ್ರೀ ಐನಾಪೂರ. ಜನಾರ್ಧನ ವಾಘಮೋರೆ ಸೂರೆಕಾಂತ ಶಾಸ್ತ್ರಿತೋಟಯ್ಯ ಅಬ್ಬೆತುಮಕೂರ. ಉದಯಕುಮಾರ ಬೀಮಳ್ಳಿ ಸಾಧನಾ ಬುಕ್ಕಾ. ರೇಣುಕಾ ಪ್ರವಿಣಕುಮಾರ ವೀರಯ್ಯ ಸ್ವಾಮಿ ಮಾಡ್ಯಾಳ ವೀರಭದ್ರಯ್ಯ ಸ್ಥಾವರಮಠ. ಶರಣಯ್ಯ ಸ್ವಾಮಿ ಅಂತಪನಾಳ. ಲೋಕನಾಥ ಹಳ್ಳಿಖೇಡ ಚತ್ರಜ್ಞ ಅನೇಕ ಕಲಾವಿದರಿಂದ ಸಂಗೀತ ಕಾರ್ಯಕ್ರಮ ನಡೆಯಿತು ಮಲ್ಲಯ್ಯ ಚಿಕಮಠ ಸ್ವಾಗತಿಸಿದರು ಲಿಂಗಾನಂದ ಚಿಕ್ಕಮಠ ವಂದಿಸಿದರು.

# ಬಾಗಲಕೋಟೆ ಜಿಲ್ಲೆ-ಬೆಂಬಲ ಬೆಲೆಯಲ್ಲಿ ತೊಗರಿ ಖರೀದಿ

ಮಲ್ಲಮ್ಮ ನುಡಿ ವಾರ್ತೆ


ಬಾಗಲಕೋಟೆ,ಜ.8-2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ತೊಗರಿಗೆ ಪ್ರತಿ ಕ್ವಿಂಟಾಲ್ ಗೆ 7550 ರೂ.ಗಳಂತೆ ಪ್ರತಿ ಎಕರೆಗೆ 4 ಕ್ವಿಂಟಾಲ್ ಮತ್ತು ಗರಿಷ್ಟ ಪ್ರತಿ ರೈತರಿಂದ 40 ಕ್ವಿಂಟಾಲ್ ತೊಗರಿ ಖರೀದಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳೂ ಆಗಿರುವ ಜಿಲ್ಲಾ ಟಾಸ್ಕಪೋರ್ಷ ಸಮಿತಿಯ ಅಧ್ಯಕ್ಷೆ ಜಾನಕಿ ಕೆ.ಎಂ ತಿಳಿಸಿದ್ದಾರೆ.



ರೈತರ ನೋಂದಣಿ ಕಾರ್ಯವನ್ನು 75 ದಿನಗಳವರೆಗೆ ಮತ್ತು ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗದಿಪಡಿಸಲಾಗಿದೆ. ಖರೀದಿ ಕೇಂದ್ರಗಳಲ್ಲಿ ರೈತರು ಆಧಾರ ಕಾರ್ಡ ಪ್ರತಿ, ರೈತರಿಗೆ ಸಂಬಂಧಿಸಿದ ಎಫ್‌ಐಡಿ ಹಾಗೂ ಪಹಣಿ ಸಲ್ಲಿಸಿ ಹೆಸರು ನೋಂದಾಯಿಸಿಕೊಳ್ಳಬೇಕು. ತೊಗರಿ ಉತ್ಪನ್ನ ಖರೀದಿಸುವ ಪೂರ್ವದಲ್ಲಿ ರೈತರು ನೀಡಿರುವ ವಿವರವನ್ನು ಎನ್‌ಐಸಿ ಸಂಸ್ಥೆಯ ತಂತ್ರಾಂಶದೊಂದಿಗೆ ಭೂಮಿ ಯುಐಡಿಎಐ ಮತ್ತು ಬೆಳೆ ಸಮೀಕ್ಷೆ ದತ್ತಾಂಶದೊಂದಿಗೆ ತಾಳೆ ಮಾಡಿ ಪರಿಶೀಲಿಸಿದ ನಂತರವೇ ನೋಂದಾಯಿಸಿಕೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.

ಒಂದು ವೇಳೆ ಬೆಳೆ ದರ್ಶಕದಲ್ಲಿ ಬೆಳೆ ಬೆಳೆಯದೇ ಇರುವುದು ಕಂಡು ಬಂದಲ್ಲಿ ಅಂತಹ ರೈತರು ಹತ್ತಿರದ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆಯನ್ನು ಸಂಪರ್ಕಿಸಿ ಆಕ್ಷೇಪಣೆಯನ್ನು ಸಲ್ಲಿಸಿ ಬೆಳೆ ದರ್ಶಕದಲ್ಲಿ ಬೆಳೆಯನ್ನು ನಮೂದಿಸಿಕೊಂಡು ನಂತರ ಖರೀದಿ ಕೇಂದ್ರದಲ್ಲಿ ನೊಂದಾಯಿಸತಕ್ಕದ್ದು. ಜಿಲ್ಲೆಯ ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ಖರೀದಿ ಕೇಂದ್ರಗಳ ಮಾಹಿತಿ ಈ ಕೆಳಗಿನಂತಿದೆ. ಬಾಗಲಕೋಟೆ ತಾಲೂಕಿನ ಪಿಕೆಪಿಎಸ್.ಬೆನಕಟ್ಟಿ(9741066862), ಪಿಕೆಪಿಎಸ್ ಹಳ್ಳೂರು(9901325201), ಬಾದಾಮಿ ತಾಲೂಕಿನ ಪಿಕೆಪಿಎಸ್ ಬಾದಾಮಿ(9611358837), ಪಿಕೆಪಿಎಸ್ ಕೆರೂರು(9972301729), ಹುನಗುಂದ ಮತ್ತು ಇಳಕಲ್ಲ ತಾಲೂಕಿನ ಟಿಎಪಿಸಿಎಮ್‌ಎಸ್ ಹುನಗುಂದ(9480262655), ಪಿಕೆಪಿಎಸ್ ನಂದವಾಡಗಿ(9902377067), ಪಿಕೆಪಿಎಸ್ ಹಿರೇಅದಾಪೂರ(8497876996), ಪಿಕೆಪಿಎಸ್ ಬೂದಿಹಾಳ(7019825319), ಎಫ್‌ಪಿಓ ಸುಳೇಬಾವಿ(9449762433), ಪಿಕೆಪಿಎಸ್ ಮುಗನೂರು(8310324070), ಪಿಕೆಪಿಎಸ್ ಕೂಡಲಸಂಗಮ(9449357061), ಮುಧೋಳ ಟಿಎಪಿಎಂಎಸ್ ಮುಧೋಳ(9242783318), ಎಫ್.ಪಿ.ಓ ಲೋಕಾಪೂರ(9880927310), ಎಫ್.ಪಿ.ಓ ಲೋಕಾಪೂರ (9844474344), ಜಮಖಂಡಿ ತಾಲೂಕಿನ ಟಿ.ಎ.ಪಿ.ಸಿ.ಎಮ್.ಎಸ್ ಜಮಖಂಡಿ(7019445935), ಎಫ್.ಪಿ.ಓ ತೊದಲಬಾಗಿ (9741998771), ಬೀಳಗಿ ತಾಲೂಕಿನ ಟಿ.ಎ.ಪಿ.ಸಿ.ಎಮ್.ಎಸ್ ಬೀಳಗಿ (7019682890), ಪಿ.ಕೆ.ಪಿ.ಎಸ್ ಬೀಳಗಿ ಕ್ರಾಸ್ (9880376768).



ಶಾಹಪೂರ:ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಶಹಾಪೂರ ತಾಲೂಕ ಕಾರ್ಯಾಧ್ಯಕ್ಷರಾಗಿ ನೂತನವಾಗಿ ಆಯ್ಕೆಯಾದ ಶ್ರೀ ಧರ್ಮಣ್ಣ ತಹಸೀಲ್ದಾರ್ ರವರಿಗೆ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಕಲ್ಯಾಣ ಕರ್ನಾಟಕ ಕಾರ್ಮಿಕ ಹಿತ ರಕ್ಷಣಾ ಸಂಘ (ರಿ) ನಾ ಸಂಸ್ಥಾಪಕ ಅಧ್ಯಕ್ಷರಾದ ಮೌನೇಶ ಹಳಿಸಗರ ಅವರು ನೇತೃತ್ವದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮೌನೇಶ ಹಳಿಸಗರ ಮಾತನಾಡಿ ರೈತರ ಶೋಷಣೆ ನಿಂತಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ವನ ಪ್ರೀತಿ ಮತ್ತು ಅನು ಕೆಂಪದ ಮಾತುಗಳು ಬೇಡ ನೈರುತ್ಯವಾಗಿ ಅವರಿಗೆ ಸಲ್ಲಬೇಕಾದ ಸೌಲಭ್ಯಗಳು ನೀಡಬೇಕು ನನ್ನ ನೆಡುವ ನಾಡಿನ ರೈತರನ್ನು ಮತ್ತು ದೇಶ ಕಾಯುವ ಸೈನಿಕರನ್ನು ಪ್ರತಿಯೊಬ್ಬರು ಗೌರವಿಸಬೇಕು ರೈತ ದೇಶದ ಬೆನ್ನೆಲುಬು ಎನ್ನುತ್ತಾರೆ ನಿತ್ರಾಣಕ್ಕೆ ತಂದು ನಿಲ್ಲಿಸಿದ್ದಾರೆ ರೈತರು ಸುಭಿಕ್ಷೆಯಾಗಿದ್ದರೆ ಮಾತ್ರ ನಾವೆಲ್ಲರೂ ಸುಭಿಕ್ಷೆವಾಗಿರುತ್ತೇವೆ ಎಂದು ಹೇಳಿದರು ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ್ ಹೈಯಾಳಕರ. ಬಸವರಾಜ ನಗನೂರ. ಮಲ್ಲಪ್ಪ ನಾಯ್ಕೋಡಿ. ಮಾರ್ತಂಡಪ್ಪ ಮೋಡ್ನಾಳ. ಮುದುಕಪ್ಪ ಹಳಿಸರ. ಹಾಗೂ ಇನ್ನಿತ ಅಲವಾರು ಅಮಾಲರು ಉಪಸ್ಥಿತರಿದ್ದರು

# ಕಾರಗನೂರ ವಿರೇಶಗೌಡ ಪಾಟೀಲ ಅವಿರೋಧ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ:ತಾಲೂಕಿನ ದೇವರ ಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯ ಕೊಡಗಾನೂರ ಗ್ರಾಮ ಪಂಚಾಯತ್ ಇದರ ತೆರವಾದ ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಕಾರಗನೂರ ಗ್ರಾಮದ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ವೀರೇಶಗೌಡ ಶ್ರೀಮಂತಗೌಡ ಪಾಟೀಲ ಅವಿರೋಧವಾಗಿ ಆಯ್ಕೆಯಾದರು. ತೆರವಾದ ಉಪಾಧ್ಯಕ್ಷ ಸ್ಥಾನಕ್ಕೆ ವೀರೇಶಗೌಡ ಪಾಟೀಲ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರು. ಬೇರೆ ಯಾರೂ ನಾಮಪತ್ರ ಸಲ್ಲಿಸದೇ ಇರುವುದರಿಂದ ಚುನಾವಣಾಧಿಕಾರಿಯೂ ಆದ ತಾಪಂ ಇಒ ನಿಂಗಪ್ಪ ಮಸಳಿ ಅವರು ವೀರೇಶಗೌಡ ಶ್ರೀಮಂತಗೌಡ ಪಾಟೀಲ (ಕಾರಗನೂರ) ಇವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು. ಒಟ್ಟು 21 ಜನ ಸದಸ್ಯ ಬಲ ಹೊಂದಿರುವ ಕೊಡಗಾನೂರ ಗ್ರಾಪಂ ನ ಉಪಾಧ್ಯಕ್ಷರ ಈ ಚುನಾವಣೆಯಲ್ಲಿ 13 ಜನ ಸದಸ್ಯರು ಹಾಜರಿದ್ದು 8 ಜನ ಸದಸ್ಯರು ಗೈರಾಗಿದ್ದರು. ತಾಪಂ ನ ಬಸನಗೌಡ ಚೌದ್ರಿ, ಮಹಾಂತಗೌಡ ದೊರಗೋಳ, ಪಿಡಿಒ ಅನೀಲಕುಮಾರ್ ಕಿರಣಗಿ ಕಾರ್ಯದರ್ಶಿ ಎಚ್.ಜಿ. ಚೌದ್ರಿ ಸಹಾಯಕರಾಗಿ ಕಾರ್ಯ ನಿರ್ವಹಿಸಿದರು. ವಿಜಯೋತ್ಸವ: ಜೆಡಿಎಸ್ ಮುಖಂಡರಾದ ಜಿಪಂ ಮಾಜಿ ಸದಸ್ಯ ಬಸನಗೌಡ ವಣಿಕ್ಯಾಳ, ಮಡು ಸಾಹುಕಾರ ಬಿರಾದಾರ ಇವರ ನೇತೃತ್ವದಲ್ಲಿ ವಿಜಯೋತ್ಸವ ಆಚರಿಸಲಾಯಿತು. ಈ ಸಮಯದಲ್ಲಿ ಗ್ರಾಪಂ ಅಧ್ಯಕ್ಷರಾದ ಶಾಂತಮ್ಮ ಎಂ. ಪಾಟೀಲ, ಮುಖಂಡರಾದ ಶಾಂತಗೌಡ ಇಬ್ರಾಹಿಂಪೂರ, ಪ್ರಭುಗೌಡ ಪಾಟೀಲ (ಲಕ್ಕುಂಡಿ), ಮಲ್ಲನಗೌಡ ಪಾಟೀಲ (ನಾವದಗಿ), ಸಿದ್ದನಗೌಡ ಪಾಟೀಲ ಲಕ್ಕುಂಡಿ, ಹಣಮಂತರಾಯಗೌಡ ವಣಿಕ್ಯಾಳ, ಮಾಜಿ ಅಧ್ಯಕ್ಷ ಬಸನಗೌಡ ಕಿರಸಾಲ ಪಾಟೀಲ, ಮಾಜಿ ಉಪಾಧ್ಯಕ್ಷ ಬಾಬುಗೌಡ ಪಾಟೀಲ, ರಾಜು ಕಟ್ಟಿಮನಿ, ಗ್ರಾಪಂ ಸದಸ್ಯರು, ಸಿಬ್ಬಂದಿಗಳು ಇದ್ದರು.

# ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.08-ಕಲಬುರಗಿ ಜಿಲ್ಲಾ ಪಂಚಾಯತ್ ಕೈಗಾರಿಕಾ ವಿಭಾಗದ ವತಿಯಿಂದ 2024-25ನೇ ಸಾಲಿಗೆ ಜಿಲ್ಲಾ ವಲಯ ಯೋಜನೆಯಡಿ ಉಚಿತವಾಗಿ ವಿದ್ಯುತ್‌ಚಾಲಿತ ಹೊಲಿಗೆಯಂತ್ರ ಪಡೆಯಲು ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವ ಪರಿಶಿಷ್ಟ ಪಂಗಡದ ಹೊಲಿಗೆ ವೃತ್ತಿನಿರತ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಜಿಲ್ಲಾ ಪಂಚಾಯತ್ (ಗ್ರಾ.ಕೈ) ಉಪನಿರ್ದೇಶಕರು ತಿಳಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಮಹಿಳಾ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. (ಅರ್ಜಿ ಸಲ್ಲಿಸುವ ಮೊದಲನೇ ದಿನವಾದ ದಿನಾಂಕ:06-01-2025 ಕ್ಕೆ ಅಭ್ಯರ್ಥಿಗಳ ವಯೋಮಿತಿ ಕನಿಷ್ಠ 21 ವರ್ಷ ಹಾಗೂ ಗರಿಷ್ಠ 45 ವರ್ಷದೊಳಗಿರಬೇಕು. ಅರ್ಜಿದಾರರು ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು.

ಆಸಕ್ತಿಯುಳ್ಳ ಮಹಿಳಾ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯೊಂದಿಗೆ ಸಂಬಂಧಪಟ್ಟ ಪೂರಕ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಆಯಾ ತಾಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳಿಗೆ ಅಥವಾ ಕಲಬುರಗಿ ಜಿಲ್ಲಾ ಪಂಚಾಯತ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ (ಗ್ರಾಮೀಣ ಕೈಗಾರಿಕೆ) ಉಪ ನಿರ್ದೇಶಕರ ಕಚೇರಿಯಲ್ಲಿ 2025ರ ಜನವರಿ 18 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕಲಬುರಗಿ, ಕಮಲಾಪೂರ, ಚಿತ್ತಾಪೂರ, ಕಾಳಗಿ ಹಾಗೂ ಶಹಾಬಾದ ತಾಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳ ಮೊಬೈಲ್ ಸಂಖ್ಯೆ-8951620063, ಆಳಂದ, ಅಫಜಲಪೂರ, ಜೇವರ್ಗಿ ಹಾಗೂ ಯಡ್ರಾಮಿ ತಾಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳು-9901489919, ಸೇಡಂ ಹಾಗೂ ಚಿಂಚೋಳಿ ಕೈಗಾರಿಕಾ ವಿಸ್ತರಣಾಧಿಕಾರಿಗಳು-7259885379 ಹಾಗೂ ಕಲಬುರಗಿ ಜಿಲ್ಲಾ ಪಂಚಾಯತ (ಗ್ರಾಮೀಣ ಕೈಗಾರಿಕೆ) ಉಪ ನಿರ್ದೇಶಕರ ಕಚೇರಿಯ ದೂ.ಸಂ.-08472-221784, 295784 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

# ವಿಶ್ವವಿದ್ಯಾಲಯಕ್ಕೆ ಪ್ರೇಮಾ 4ನೇ ರ್‍ಯಾಂಕ್

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.8-ನಗರದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ವಾಣಿಜ್ಯ ವಿಭಾಗದ 2023-24 ಸಾಲಿನ ವಿದ್ಯಾರ್ಥಿನಿ ಪ್ರೇಮಾ ಹುನುಗುಂದ ವಿಜಯಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ 4ನೇ ರಾಂಕ್ ಪಡೆದುಕೊಂಡಿದ್ದಾಳೆ.



ರ್‍ಯಾಂಕ್ ಗಳಿಸಿ ಸಂಘದ ಕೀರ್ತಿ ಹೆಚ್ಚಿಸಿದ ಪ್ರೇಮಾ ಹುನಗುಂದ ಅವಳನ್ನು ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಆಡಳಿತಾಧಿಕಾರಿ ಡಾ.ವಿ.ಎಸ್.ಕಟಗಿಹಳ್ಳಿಮಠ ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಜೆ.ಒಡೆಯರ ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

## ಮೇಲ್ಜಾತಿಯ ಬಾಲಕಿಯನ್ನು ಪ್ರೀತಿಸಿದ್ದಕ್ಕೆ ದಲಿತ ಯುವಕನ ಮೇಲೆ ಹಲ್ಲೆ ಆರೋಪ : ಯುವಕ ಮೃತ್ಯು

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 08 :- ಮೇಲ್ಜಾತಿ ಬಾಲಕಿಯನ್ನು ಪ್ರೀತಿ ಮಾಡಿದ್ದಕ್ಕಾಗಿ ದಲಿತ ಯುವಕನಿಗೆ ಹಲ್ಲೆ ನಡೆಸಿದ ಪರಿಣಾಮ ಯುವಕ ಸಾವನಪ್ಪಿದ ಘಟನೆ ಔರಾದ್ ತಾಲ್ಲೂಕಿನ ಠಾಣಾ ಕುಶನೂರ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದೆ.



ಬೇಡಕುಂದಾ ಗ್ರಾಮದ ನಿವಾಸಿ ಸುಮಿತ್ (19) ಮೃತಪಟ್ಟ ಯುವಕ ಎಂದು ತಿಳಿದುಬಂದಿದೆ.

ರಕ್ಷಾಳ್ ಗ್ರಾಮದ ಬಾಲಕಿಯನ್ನು ಸುಮಿತ್ ಪ್ರೀತಿಸುತಿದ್ದ. ರವಿವಾರದಂದು ನಮ್ಮ ಮನೆ ಕಡೆಗೆ ಬಾ ಎಂದು ಸುಮಿತ್ ನನ್ನು ಹುಡುಗಿ ಕರೆದಿದ್ದಳು. ಹುಡುಗಿಯನ್ನು ಭೇಟಿ ಮಾಡಲು ಹೋದ ಸುಮಿತ್ ನನ್ನು, ಹುಡುಗಿಯ ಅಪ್ಪ, ಅಣ್ಣ ಮತ್ತು ಸಂಬಂಧಿಕರು ಮನೆಯಲ್ಲಿ ಕೂಡಿ ಹಾಕಿ ಹಲ್ಲೆ ನಡೆಸಿದ್ದರು. ಸುಮಿತ್ ಮನೆಯಿಂದ ಹೊರಗಡೆ ಹೋದ ನಂತರ ಬಾಲಕಿಯ ಅಣ್ಣ ಮತ್ತು ಆತನ ಗೆಳೆಯರು ಸೇರಿಕೊಂಡು ಮತ್ತೆ ಆತನ ಮೇಲೆ ಹಲ್ಲೆ ನಡೆಸಿದ್ದಾರೆ. ನಂತರ ಸುಮಿತ್ ನ ಮನೆಗೆ ಕರೆ ಮಾಡಿ ಆತನನ್ನು ಕರೆದೋಯ್ಯಲು ಹೇಳಿದ್ದಾರೆ ಎಂದು ಮೃತ ಯುವಕನ ಸಂಬಂಧಿಕರು ತಿಳಿಸಿದ್ದಾರೆ.

ಸುಮಿತ್ ನ ತಂದೆ ಹಾಗೂ ಸಹೋದರರು ಘಟನೆ ನಡೆದ ಸ್ಥಳಕ್ಕೆ ಬಂದು, ಸುಮಿತ್ ನನ್ನು ತಕ್ಷಣವೇ ಠಾಣಾ ಕುಶನೂರ್ ಸರಕಾರಿ ಆಸ್ಪತ್ರೆಗೆ ಕರೆದೋಯ್ದಿದ್ದಾರೆ. ಅಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ಮಹಾರಾಷ್ಟದ ಉದಗೀರ್ ಲಾತೂರ್ ಆಸ್ಪತ್ರೆಗೆ ಕರೆದೋಯ್ದು ಚಿಕಿತ್ಸೆ ನೀಡಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸುಮಿತ್ ಮೃತಪಟ್ಟಿದ್ದಾನೆ. ಇಂದು ಬೀದರ್ ಆಸ್ಪತ್ರೆಗೆ ಮೃತದೇಹ ತಂದಿದ್ದೇವೆ ಎಂದು ಮೃತ ಯುವಕನ ಸಂಬಂಧಿಕರು ತಿಳಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಠಾಣಾ ಕುಶನೂರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಸಹಕಾರಿ ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರ

## ಚುನಾವಣೆ ಮಂಜುನಾಥ್ ವೆಂಕಯ್ಯ ಶೆಟ್ಟಿ ನಾಮಪತ್ರ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ:ಪಟ್ಟಣದ ಪ್ರತಿಷ್ಠಿತ ದಿ.ಸಹಕಾರಿ ಕೋ-ಆಫ್ ಬ್ಯಾಂಕ್ ನ ಐದು ವರ್ಷಗಳ ಆಡಳಿತ ಮಂಡಳಿ ನಿರ್ದೇಶಕರ 13 ಸ್ಥಾನಗಳಿಗೆ ಜನವರಿ 19ರಂದು ಜರಗುವ ಚುನಾವಣೆಗೆ ಸಾಮಾನ್ಯ ವರ್ಗದ ಸ್ಥಾನಕ್ಕೆ ಬಿಎಸ್‌ಎನ್‌ಎಲ್ ನ ಮಾಜಿ ನಾಮ ನಿರ್ದೇಶಿತ ಸದಸ್ಯ ಮುಖಂಡ ಮಂಜುನಾಥ್ ವೆಂಕಯ್ಯ ಶೆಟ್ಟಿ ತಮ್ಮ ನಾಮಪತ್ರ ಸಲ್ಲಿಸಿದರು. ಬುಧವಾರ ತಮ್ಮ ಅಪಾರ ಬೆಂಬಲಿಗರೊಂದಿಗೆ ಆಗಮಿಸಿ ಸಹಾಯಕ ಚುನಾವಣಾ ಅಧಿಕಾರಿ ಆರ್.ಬಿ.ಧಮ್ಮೂರಮಠ ಇವರಿಗೆ ತಮ್ಮ ನಾಮಪತ್ರ ಸಲ್ಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈ ಬ್ಯಾಂಕನ್ನು ಇನ್ನಷ್ಟು ಅಭಿವೃದ್ಧಿಯಡೆಗೆ ತೆಗೆದುಕೊಂಡು ಹೋಗುವ ಉದ್ದೇಶದಿಂದ ನಾನು ಪ್ರಥಮ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇನೆ, ಈಗಾಗಲೆ ನಾನು ಹಲವಾರು ಸಂಸ್ಥೆಗಳಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿ ಅನುಭವ ಹೊಂದಿದವನಾಗಿದ್ದೇನೆ ಈ ಚುನಾವಣೆಯಲ್ಲಿ ಮತದಾರ ಬಾಂಧವರು ನನಗೆ ಆಶೀರ್ವಾದ ಮಾಡಿ ಸೇವಾವಕಾಶ ಮಾಡಿ ಕೊಡಬೇಕು ಎಂದರು. ಈ ಸಮಯದಲ್ಲಿ ಗಂಗಾಧರ ಕಸ್ತೂರಿ ವಕೀಲರು, ಪ್ರಕಾಶ ಹಜೇರಿ, ಮುತ್ತುಗೌಡ ಯಾಳವಾರ ಚಬನೂರ, ಸುರೇಶ್ ಹಜೇರಿ, ಖಾಜಾಹುಸೇನ್ ಕೆಂಭಾವಿ, ರಾಮು ಜಗತಾಪ, ಬಸವರಾಜ ಕಶಟ್ಟಿ, ಮೋಹನ್ ಹಜೇರಿ, ಮಲ್ಲು ಮೇಟಿ, ಸುರೇಶ ಹಜೇರಿ, ಮುದುಕಪ್ಪ ಬಡಿಗೇರ, ತಿಪ್ಪಣ್ಣ ಸಜ್ಜನ, ಹರಿಸಿಂಗ್ ಮೂಲಿಮನಿ, ಚನ್ನಬಸ್ಸು ಸರಸಟ್ಟಿ, ಬಿ.ಎಂ.ಪಾಟೀಲ, ರವಿ ಆರ್. ಕಟ್ಟಿಮನಿ, ಸಿದ್ದನಗೌಡ ಪಾಟೀಲ, ಬಾಲಾಜಿ ದೇವಿ, ಫಿರೋಜ್ ತಾಳಿಕೋಟಿ ಹಾಗೂ ಅಪಾರ ಬೆಂಬಲಿಗರು ಇದ್ದರು.

# ಕ್ರಮಬದ್ಧ ಅಧ್ಯಯನದಿಂದ ಆತಂಕ ದೂರ-ಡಾ.ಗಿರೀಶ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.8-ವಿದ್ಯಾರ್ಥಿಗಳು ಕ್ರಮಬದ್ಧ ಹಾಗೂ ಶಿಸ್ತುಬದ್ಧ ಅಧ್ಯಯನ ಕೈಗೊಂಡಲ್ಲಿ ಅವರಿಗೆ ಪರೀಕ್ಷೆಯಲ್ಲಿ ಆತಂಕ ಕಾಡಲಾರದು ಎಂದು ವಿಪ್ರ ಮಂಡಳದ ಗೌರವ ಕಾರ್ಯದರ್ಶಿ ಡಾ.ಗಿರೀಶ ಮಸೂರಕರ ಹೇಳಿದ್ದಾರೆ.

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯ ಪಿಯುಸಿ ಎರಡನೆಯ ವರ್ಷದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ 'ಪಿಯುಸಿ ಪರೀಕ್ಷೆ: ಒತ್ತಡ ನಿರ್ವಹಣಾ ಕೌಶಲ್ಯ' ವಿಷಯ ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಯನ ಮಾಡುವಲ್ಲಿ ಯಾವುದೇ ಉದಾಸೀನ ಭಾವವನ್ನು ತೋರಿಸದೇ ಸರಿಯಾದ ಸಮಯದಲ್ಲಿ ಯೋಜನಾಬದ್ಧ ಅಭ್ಯಾಸ ಮಾಡಬೇಕು. ವಿದ್ಯಾರ್ಥಿಗಳು ಪ್ರಯತ್ನಶೀಲರಾಗುವುದರ ಜೊತೆಗೆ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಹೇಳಿದರು.

'ಒತ್ತಡ ನಿರ್ವಹಣೆ' ಕುರಿತು ಮಾತನಾಡಿದ ಬಿವಿವಿಎಸ್ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಡಾ.ಎಸ್.ಎಸ್.ಭೂಮಣ್ಣವರ, ಒತ್ತಡ ಒಂದು ಮಾನಸಿಕ ಕ್ರಿಯೆಯಾಗಿದ್ದು, ಸಮತೋಲನದ ವ್ಯಕ್ತಿತ್ವ ಮತ್ತು ನಿರಂತರ ಅಧ್ಯಯನದಿಂದ ಅದನ್ನು ನಿವಾರಿಸಬಹುದಾಗಿದೆ. ನಿರಾಸಕ್ತಿ, ಆಯಾಸ, ಉತ್ಸಾಹದ ಕೊರತೆ ಮುಂತಾದವುಗಳು ಒತ್ತಡದ ಪರಿಣಾಮಗಳಾಗಿದ್ದು ವಿದ್ಯಾರ್ಥಿಗಳು ಅವುಗಳ ಬಗ್ಗೆ ಜಾಗೃತಿವಹಿಸಬೇಕು ಎಂದರು.

'ಸಮಯ ನಿರ್ವಹಣೆ' ಕುರಿತು ವಿವೇಕಾನಂದ ಶಾಲೆಯ ಶಿಕ್ಷಕ ಮೋಹನ ದೇಶಪಾಂಡೆ ಮಾತನಾಡಿ, ಅಧ್ಯಯನದಲ್ಲಿ ಸಮಯವು ಪ್ರಮುಖ ಪಾತ್ರ ವಹಿಸುತ್ತದೆ. ಪರೀಕ್ಷೆಯಲ್ಲಿ ಉತ್ತರಗಳನ್ನು ಬರೆಯುವಾಗ ಸಮಯವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಇಚ್ಛಾಶಕ್ತಿ ಇದ್ದಲ್ಲಿ ಪರೀಕ್ಷೆಯ ಹಲವು ಸವಾಲುಗಳನ್ನು ಎದುರಿಸಬಹುದು ಎಂದರು.

ಸಕ್ರಿ ಕಾಲೇಜಿನ ಪ್ರಾಚಾರ್ಯ ಅಶೋಕ ಕಂದಗಲ್ ಮಾತನಾಡಿ, ಈ ಸಂಸ್ಥೆ ತಮಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಹಾಗೂ ಬದುಕು ಕಟ್ಟಿಕೊಳ್ಳಲು ಅವಕಾಶ ನೀಡಿದೆ ಎಂದರು.

ಪ್ರಾಚಾರ್ಯ ಶ್ರೀನಿವಾಸ ನರಗುಂದ ಮಾತನಾಡಿ, ಪ್ರಾಮಾಣಿಕ ಪ್ರಯತ್ನ, ಪರಿಶ್ರಮ ಇದ್ದಲ್ಲಿ ಶೈಕ್ಷಣಿಕ ಹಾಗೂ ಜೀವನದ ಪರೀಕ್ಷೆ ಎರಡರಲ್ಲೂ ಯಶ ಸಾಧಿಸಬಹುದು. ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗಬಲ್ಲ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದ್ದು ವಿದ್ಯಾರ್ಥಿಗಳು ಅವುಗಳ ಲಾಭವನ್ನು ಪಡೆಯಬೇಕು ಎಂದರು.

ಕಾಲೇಜು ಉಪವಿಭಾಗದ ಅಧ್ಯಕ್ಷ ಡಾ.ಪಿ.ಆರ್.ಜೋಶಿ ಅಧ್ಯಕ್ಷತೆ ವಹಿಸಿದ್ದರು. ಯಾವುದೇ ಗೊಂದಲಗಳಿಗೆ ಅವಕಾಶ ನೀಡದೇ ಪೂರ್ವ ಸಿದ್ಧತೆ, ಒಳ್ಳೆಯ ಮನಸ್ಸು ಮತ್ತು ಪ್ರಯತ್ನದಿಂದ ಪರೀಕ್ಷೆಯಲ್ಲಿ ಯಶ ಸಾಧಿಸಬಹುದು ಎಂದರು.

ದಿವ್ಯಶ್ರೀ ಬಿಲ್ಲಾರ ಪ್ರಾರ್ಥಿಸಿದರು. ಶ್ರೀಮತಿ ಎಸ್.ಎಂ.ಜೇವೂರ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಶ್ರವಣಾ ಸಿದ್ನಾಳ ವಂದಿಸಿದರು. ಜಂಟಿ ಕಾರ್ಯದರ್ಶಿ ಡಾ.ಎಸ್.ಬಿ.ಪರ್ವತೀಕರ, ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ಪಾಲ್ಗೊಂಡಿದ್ದರು.

# ಸಿದ್ದೇಶ್ವರ ಸ್ವಾಮೀಜಿ ಜನರಿಗೆ ಜ್ಞಾನ, ಪ್ರೀತಿ ನೀಡಿದರು- ಹರ್ಷಾನಂದ ಶ್ರೀಗಳು




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.8-ಜಗದ ಜನರಿಗೆ ಜ್ಞಾನ ಮತ್ತು ಪ್ರೀತಿಯನ್ನು ನೀಡಿದವರು ಜ್ಞಾನಯೋಗಿ ಸಿದ್ದೇಶ್ವರ ಸ್ವಾಮಿಗಳು ಎಂದು ವಿಜಯಪುರದ ಜ್ಞಾನಯೋಗಾಶ್ರಮ ಪರಮ ಪೂಜ್ಯ ಹರ್ಷಾನಂದ ಸ್ವಾಮಿಗಳು ಹೇಳಿದರು. ವಿದ್ಯಾಗಿರಿಯ ಕುದರಿಕನ್ನೂರು ಲೇಔಟ್‌ನಲ್ಲಿ ವಚನ ರಕ್ಷಕ ಗೆಳೆಯರ ಬಳಗ ಹಮ್ಮಿಕೊಂಡಿದ್ದ ಜ್ಞಾನಯೋಗಿ ಸಿದ್ದೇಶ್ವರ ಸ್ವಾಮಿಗಳ ಗುರುವಂದನ ಮಹೋತ್ಸವ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಹರ್ಷಾನಂದ ಶ್ರೀಗಳು, ಸಿದ್ದೇಶ್ವರ ಶ್ರೀಗಳಿಗೆ ಎಲ್ಲ ಭಕ್ತರು ಸಮಾನರಾಗಿದ್ದರು, ಎಲ್ಲೆಡೆ ಪ್ರೀತಿಯನ್ನು ಹಂಚಿದರಲ್ಲದೇ ಬದುಕಿನ ದಾರಿಗೆ ಜ್ಞಾನದ ಬೆಳಕನ್ನು ನೀಡಿದರು ಎಂದರು.

ಸಾನಿದ್ಯ ವಹಿಸಿ ಮಾತನಾಡಿದ ಕನ್ನೂರ ಮಠದ ವಿಶ್ವರಾಜೇಂದ್ರ ಸ್ವಾಮಿಗಳು, ಸಿದ್ದೇಶ್ವರ ಶ್ರೀಗಳು ತಮ್ಮ ವಾಣಿಯ ಮೂಲಕ ಇಂದಿಗೂ ಎಂದೆಂದಿಗೂ ಅಮರವಾಗಿದ್ದಾರೆ ಎಂಧರು. ಶಿಕ್ಷಣ ಇಲಾಖೆಯ ವಿಶ್ರಾಂತ ಉಪ ನಿರ್ದೇಶಕ ಎಸ್. ಆರ್.ಮನಹಳ್ಳಿ, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಎ.ಎಸ್. ಪಾವಟೆ ಮಾತನಾಡಿದರು. ಶ್ರೀಶೈಲ ಡೆಂಗೆ, ಸಿದ್ದರಾಮ ಮಠಪತಿ, ರವಿ ಕೋಟೆನ್ನವರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿವಾನಂದ ಕುಂಬಾರ ಸ್ವಾಗತಿಸಿದರು. ಈಕ್ಷಿತಾ ಗಂಗಾಧರ ಪ್ರಾರ್ಥಿಸಿದರು. ಮುತ್ತು ಮಡಿವಾಳರ ಶರಣು ಸಮರ್ಪಿಸಿದರು. ಮೋಹನ ದೇಶಪಾಂಡೆ ಹಾಗೂ ಚಲವಾದಿ ಕಾರ್ಯಕ್ರಮ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ಸಮಾಜದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ , ಮಾಜಿ ಸೇನಾ ಯೋಧರಿಗೆ, ಪೌರ ಕಾರ್ಮಿಕರಿಗೆ ಗೌರವ ಸನ್ಮಾನ ಮಾಡಲಾಯಿತು. ವಚನ ರಕ್ಷಕ ಬಳಗದವರು ಬಡ ಅನಾಥ - ಅಂಧ ವಿದ್ಯಾರ್ಗಳಿಗೆ ಪ್ರೋತ್ಸಾಹ ಧನ. ನೋಟ ಬುಕ್ ಹಾಗೂ ಪೆನ್ನು ವಿತರಣೆ ಮಾಡಿದರು. ನಂತರ ನಡೆದ ಅನ್ನಪ್ರಸಾದ ಕಾರ್ಯಕ್ರಮದಲ್ಲಿ ಸಾವಿರಾರು ಜನ ಅನ್ನ ಪ್ರಸಾದ ಮಾಡಿದರು.

# ಯಾದಗಿರಿ ಜಿಲ್ಲಾ ಸಮುದಾಯದ ಅಧಿಕಾರಿಗಳ ವತಿಯಿಂದ ಗೌರವ ಸಮರ್ಪಣೆ.




ಮಲ್ಲಮ್ಮ ನುಡಿ ವಾರ್ತೆ

ಡಾ ಮಹೇಶ್ ಬಿರಾದಾರ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಜಿಲ್ಲಾ ಅಧಿಕಾರಿಗಳಿಗೆ ಗೌರವಿಸಲಾಯಿತು ಸಮುದಾಯದ ಅಧಿಕಾರಿಗಳಾದ ವಿರುಪಾಕ್ಷ ಶೆಟ್ಟಿ ಕೃಷ್ಣಫರ್. ಸಂದೀಪ್ ಕುಮಾರ್. ಮಹದೇವ್ ಹುಬ್ಬಳ್ಳಿ ಸಂಕಲ್ಪ ಆನಂದ್ ಸ್ವಾಮಿ ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ
(ಕಾರಾಗೃಹ ಮತ್ತು ಸುಧಾರಣಾ ಸೇವೆ)
ಮುಖ್ಯ ಅಧೀಕ್ಷಕರವರ ಕಛೇರಿ, ಕೇಂದ್ರ ಕಾರಾಗೃಹ ಕಲಬುರಗಿ.
ದೂರವಾಣಿ ಸಂಖ್ಯೆ:08472–212567, Mob:9480806495. e-mail: cpgbg.prisons-kar@gov.in

ಸಂಖ್ಯೆ:ಕೇಕಾಕ/ದರಖಾಸ್ತು/2024–25 ದಿನಾಂಕ:06–01–2025

:: ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ) ::

2024–25ನೇ ಸಾಲಿಗೆ ಈ ಸಂಸ್ಥೆಯ ಕಾರ್ಖಾನೆ ವಿಭಾಗಕ್ಕೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಖರೀದಿಸಲು ದಿನಾಂಕ:**06–01–2025** ರಂದು ಅಲ್ಪಾವಧಿ ಇ–ದರಖಾಸ್ತು ಕರೆಯಲಾಗಿದ್ದು, ವಿವರ ಈ ಕೆಳಗಿನಂತಿದೆ. 1) ವಿವರ: ಕೇಂದ್ರ ಕಾರಾಗೃಹ, ಕಲಬುರಗಿಯ ಕಾರ್ಖಾನೆ ವಿಭಾಗಕ್ಕೆ ಅಗತ್ಯವಿರುವ ಯಂತ್ರೋಪಕರಣಗಳ ಪೂರೈಕೆ, 2) ಎನ್.ಐ.ಟಿ. ಪ್ರಕಟಿಸಿದ ದಿನಾಂಕ: **06–01–2025,** 3) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್.ಡಿ ಮೊತ್ತಇ–ಪ್ರಾಕ್ಯೂರ್‌ಮೆಂಟ್ ಪ್ರಕಾರ, 4) ದರಖಾಸ್ತು ಅಂದಾಜು ಮೊತ್ತ: **ರೂ. 17,60,000–00,** 5) ಪ್ರಿ–ಬಿಡ್ ಸಭೆಯ ದಿನಾಂಕ: **13–01–2025 ರಂದು ಮಧ್ಯಾಹ್ನ 11:30 ಕ್ಕೆ,** 6) ಟೆಂಡರ್ ಬಗ್ಗೆ ವಿಚಾರಣೆ, ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ: **13–01–2025 ರಂದು ಸಾಯಂಕಾಲ 17:30 ಕ್ಕೆ,** 7) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **21–01–2025 ಸಾಯಂಕಾಲ 05:30 ಗಂಟೆವರೆಗೆ,** 8) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **23–01–2025 ಬೆಳಿಗ್ಗೆ 11:00 ಗಂಟೆ,** 9) ಹಣಕಾಸಿನ ಲಕೋಟೆ ತೆರೆಯುವ ದಿನಾಂಕ: **27–01–2025 ಬೆಳಿಗ್ಗೆ 11:30 ಗಂಟೆ,** 10) ಪ್ರಿ–ಬಿಡ್ ಮಿಟೀಂಗ್ & ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ವೇಳೆಯಲ್ಲಿ): ಮುಖ್ಯ ಅಧೀಕ್ಷಕರವರ ಕಛೇರಿ, ಜೇವರ್ಗಿ ರಸ್ತೆ, ಕೇಂದ್ರ ಕಾರಾಗೃಹ ಕಲಬುರಗಿ. ದೂರವಾಣಿ ಸಂಖ್ಯೆ;08472–212567/554, Mob:9480806495. 11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in/

ಸಹಿ/– ಮುಖ್ಯ ಅಧೀಕ್ಷಕರು
ಕೇಂದ್ರ ಕಾರಾಗೃಹ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/826/ಕೆ.ಎಸ್.ಎಂ.ಸಿ.&ಎ/2024–25


# ಮಾನಸಿಕ, ದೈಹಿಕ ಸದೃಢತೆಗೆ ಕ್ರೀಡೆ ಪೂರಕ : ನಾಗರಾಜ ಮಠ

ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ.08:ಗುರುನಾನಕ ಪಬ್ಲಿಕ್ ಶಾಲೆಯ ವಾರ್ಷಿಕ ಕ್ರೀಡಾಕೂಟ–2024–25ನೇ ಸಾಲಿನನೇಹರುಕ್ರೀಡಾಂಗಣದಲ್ಲಿ ಇಂದು ಜರುಗಿತು. ಯುವ ಸಬಲೀಕರಣ ಮತ್ತು ಕ್ರೀಡೆ ಇಲಾಖೆಸಹಾಯಕನಿರ್ದೇಶಕರು ಶ್ರೀ ನಾಗರಾಜ ಮಠ ಅವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕ್ರೀಡೆಯಿಂದ ವಿದ್ಯಾರ್ಥಿಗಳಲ್ಲಿ ಶಿಸ್ತು ಬರುತ್ತದೆ.

ಜೊತೆಗೆ ಅವರಲ್ಲಿ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯು ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ಅತ್ಯಂತಅಚ್ಚುಕಟ್ಟಾಗಿಶಾಲೆಯಲ್ಲಿ ಕ್ರೀಡೆ ದೇಶದ ಪ್ರಗತಿಯಲ್ಲಿ ಶಿಕ್ಷಣದ ಪಾತ್ರವು ಅತ್ಯಂತ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬೆಳೆಸಲು ಶಿಕ್ಷಕರು ಕಾಳಜಿ



ತೋರಬೇಕು.ತಂತ್ರಜ್ಞಾನದಲ್ಲಿನಾವು ಸಾಕಷ್ಟುಮುಂದುವರೆದಿದ್ದೇವೆ. ಅದರಂತೆ ಕ್ರೀಡಾರಂಗದಲ್ಲಿ ಕೂಡ ಅಷ್ಟೇ ಪ್ರಮಾಣದಲ್ಲಿ ಮುಂದೆ ಬರೋಣ ಎಂದು ಸಲಹೆ ಮಾಡಿದರು.

ಗುರುನಾನಕ ಶಾಲೆಯು ಶಿಸ್ತುಬದ್ಧವಾಗಿ ಶೈಕ್ಷಣಿಕ ಚಟುವಟಿಕೆಗಳನ್ನುನಡೆಸುತ್ತದೆ ಎಂಬುದಕ್ಕೆ ಇವತ್ತಿನ ಈ ಕಾರ್ಯಕ್ರಮ ಕೂಡ ಒಂದು ಸಾಕ್ಷಿಯಾಗಿದೆ. ಬೀದರ ಜಿಲ್ಲೆಯ ಕೀರ್ತಿಯು,ಶಾಲೆಯ ಕೀರ್ತಿಯು ವಿಶ್ವಮಟ್ಟದಲ್ಲಿ ಬೆಳಗುವ ದಿಶೆಯಲ್ಲಿ ತಾವೆಲ್ಲರೂ ಕ್ರೀಡೆಯಲ್ಲಿ ಆಸಕ್ತಿ ತೋರಬೇಕು. ಪ್ರತಿಯೊಬ್ಬರುವಿವಿಧಸ್ಪರ್ಧೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ಮಕ್ಕಳಿಗೆ ಸಲಹೆ ಮಾಡಿದರು.

ಗುರು ನಾನಕ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷೆ ಡಾ॥ ರೇಷ್ಮಾ ಕೌರ್ ಅವರು ಮಾತನಾಡುತ್ತ ಯಾವುದೇ ದೇಶದ ಅಭಿವೃದ್ಧಿಯನ್ನು ಬಹುತೇಕವಾಗಿ ಆ ದೇಶದ ಆರ್ಥಿಕಬೆಳವಣಿಗೆಯಮೇಲೆಯೇ ನಿರ್ಧರಿಸಲಾಗುತ್ತದೆ. ಆದರೆ, ಶೈಕ್ಷಣಿಕರಂಗ,ಕ್ರೀಡಾರಂಗಗಳು ಕೂಡ ಅದಕ್ಕೆಪೂರಕವಾಗಿರುತ್ತವೆ ಎಂಬುದನ್ನುಅರ್ಥೈಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕ್ರೀಡಾ ರಂಗದ ಬೆಳವಣಿಗೆಗೆ ಒತ್ತುಕೊಡಬೇಕಿದೆ ಎಂದರು.

ಇಂದಿನ ಮಕ್ಕಳು ಹೆಚ್ಚಾಗಿ ಕಂಪ್ಯೂಟರ್, ಇಂಟರನೆಟ್ ಬಳಸುವತ್ತಲೇ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ಮನೆಯಲ್ಲಿ ಕುಳಿತು ಮೊಬೈಲ್‌ನಲ್ಲಿ ಗೇಮ್ ಆಡಿದರೆ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳೆವಣಿಗೆ ಸರಿಯಾಗಿ ಆಗುವುದಿಲ್ಲ. ಇದನ್ನು ಎಲ್ಲ ಪಾಲಕರು ಅರಿತು. ತಮ್ಮ ಮಕ್ಕಳಿಗೆ ಶಾಲೆಗಳಲ್ಲಿ ನಡೆಯುವ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಅವರಿಗೆ ಪ್ರೇರೇಪಿಸಬೇಕು ಎಂದು ಸಲಹೆ ಮಾಡಿದರು.

ಈ ಸಮಾರಂಭದಲ್ಲಿ ಡೀನ್‌ರಾದ ಹನುಮಾನ, ಪ್ರಾಂಶುಪಾಲರುಗಳಾದ ನಾಳಿಣಿ ಡಿ.ಜಿ, ಅಮಜದ ಅಲಿ, ದೇವಿದಾಸ ರಾಥೋಡ್, ಶೀಬಾ ಶರ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಶಾಲೆಯ ಕ್ರೀಡಾ ಪಟುಗಳು ಮುಖ್ಯ ಅತಿಥಿಗಳಿಗೆ ಗೌರವವಂದನೆ ಸಲ್ಲಿಸಿದರು. ಪಥಸಂಚಲನವನ್ನು ಆಕರ್ಷಕವಾಗಿ ನಡೆಸಿಕೊಟ್ಟರು. ನಾಗರಾಜ ಮಠ ಇವರು ಮುಖ್ಯ ಅತಿಥಿಯಾಗಿ ಕ್ರೀಡಾ ಧ್ವಜಾರೋಹಣ ನೆರವೇರಿಸಿದರು.

# 10 ರಂದು ಸಚಿವ ಈಶ್ವರ ಖಂಡ್ರೆ ಅವರ ಜನತಾ ದರ್ಶನ

ಮಲ್ಲಮ ನುಡಿ ವಾರ್ತೆ

ಬೀದರ. ಜ.08 : ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ ಜನವರಿ.10 ರಂದು ಬೆಳಿಗ್ಗೆ 11 ಗಂಟೆಗೆ ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಭಾತಂಬ್ರಾ ಗ್ರಾಮದಲ್ಲಿ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾದಕ ವ್ಯಸನವೆಂಬುದೊಂದು ಮನುಷ್ಯನಿಗೆ ಅಂಟಿದ ಅಂಟುರೋಗ:ಮಲ್ಲಪ್ಪ ಗೌಡಾ

ಮಲ್ಲಮ್ಮ ನುಡಿ ವಾರ್ತೆ
(ಪರಮೇಶ ರಾಂಪುರೆ)

ಕಮಲನಗರ:ಜ.8:ಮಾದಕ ವ್ಯಸನವೆಂಬುದೊಂದು ಮನುಷ್ಯನಿಗೆ ಅಂಟಿದ ಅಂಟುರೋಗವಿದ್ದಅಂತೆ,

ಒಮ್ಮೆ ಅದರ ದಾಸನಾದರೇ ವ್ಯಕ್ತಿ ಸರ್ವನಾಶವಾಗುವುದು ಖಚಿತವಾಗಿದೆ ಎಂದು ಜಿಲ್ಲಾ ಜನಜಾಗೃತಿ ಸದಸ್ಯ ಮಲ್ಲಪ್ಪ ಗೌಡಾ ನುಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ವತಿಯಿಂದ ಕಮಲನಗರ ತಾಲೂಕಿನ ಠಾಣಾಕುಶನುರನಲ್ಲಿ ಏರ್ಪಡಿಸಿದ ಸ್ವಾಸ್ತಸಂಕಲ್ಪ ಕಾರ್ಯಕ್ರಮಕ್ಕೆ ಜಿಲ್ಲಾ ಜನಜಾಗೃತಿ ಸದಸ್ಯ



ಮಲ್ಲಪ್ಪ ಗೌಡಾ ಜ್ಯೋತಿ ಪ್ರಜ್ವಲಿಸಿ ಮಾತನಾಡಿದರು.

ವಿದ್ಯಾರ್ಥಿಗಳ ವಯಸ್ಸು ಹದಿಹರೆಯದ ವಯಸ್ಸು. ಹದಿಹರೆಯದಲ್ಲಿನಒತ್ತಡಗಳು, ಪ್ರೀತಿಯ ಕೊರತೆ, ಪಾಶ್ಚಾತ್ಯ ಸಂಸ್ಕೃತಿ,ನಕಾರಾತ್ಮಕಚಿಂತನೆಗಳಿಂದ ಯುವ ಜನತೆ ತಪ್ಪು ಧಾರಿ ತುಳಿಯುತ್ತಿದೆ. ಈ ಎಲ್ಲಾ ಕಾರಣಗಳಿಂದಾಗಿ ಅಮಲು ಪದಾರ್ಥ ಹಾಗೂ ಇನ್ನಿತರ ವ್ಯಸನಗಳಿಗೆ ಬಲಿಯಾಗುವ ಸಾಧ್ಯತೆಗಳಿವೆ.

ಔರಾದ್ /ಕಮಲನಗರ ತಾಲೂಕು ಯೋಜನಾಧಿಕಾರಿ ರಾಘವೇಂದ್ರಗೌಡಾ ಯೋಜನೆ ಮತ್ತು ಸ್ವಾಸ್ತ ?? ಸಂಕಲ್ಪದ ಬಗ್ಗೆ ಮಾಹಿತಿ ನೀಡಿದರು.

ಇದನ್ನು ತಡೆಗಟ್ಟಲು ಸಂಕಲ್ಪ ಮಾಡೋಣ ಎಂದು ನೂತನ ಪ್ರಾಥಮಿಕ ಶಾಲೆ ಮುಖ್ಯಗುರು ಶಿವಶರಣಪ್ಪವಲ್ಲಾಪೂರೆ ಪ್ರತಿಜ್ಞಾ ವಿಧಿ ಭೋದಿಸಿದರು.

ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಪಂಡರಿ ಸಾಕ್ರೆ ಸಭಾಧ್ಯಕ್ಷತೆಯನ್ನುವಹಿಸಿ ಅಧ್ಯಕ್ಷೀಯ ಮಾತುಗಳೊಂದಿಗೆ ವಿದ್ಯಾರ್ಥಿಗಳಿಗೆ ಶುಭವನ್ನು ಹಾರೈಸಿದರು. ವಿಲಾಸ್ ಪೂಜಾರಿ, ಬಸವರಾಜ್ ಕಾಪ್ಸೆ, ರಾಜಕುಮಾರ್ ತಳವಾಡೆ, ಚನ್ನಪ್ಪ ಸಾದು, ಮಾರ್ತಮ್ಮ ಮಾಳಗೆ, ಶೇಶಪ್ಪ ಮರ್ಕಲೆ, ಮಂಗಲಾ, ಭಾಗ್ಯವಂತಿ, ಅಶ್ವಿನಿ ,ಫಕಿರಪ್ಪ ಇತರರಿದ್ದರು..

# ಅಯ್ಯಪ್ಪ ಮಾಲಾಧಾರಿಗಳಿಂದ ಇರುಮುಡಿ ಕಾರ್ಯಕ್ರಮ

ಮಲ್ಲಮ್ಮ ನುಡಿ
ಮಲ್ಲಿಕಾರ್ಜುನ್ ಮಳಿಕೇರಿ

ಶಹಾಪುರ:ಜ.8: ನಗರದ ಚರಬಸವೇಶ್ವರ ಕಲ್ಯಾಣ ಮಂಟಪದ ಅಶ್ವಿನಿ ಗುರುಸ್ವಾಮಿ ಸನ್ನಿಧಿಯಲ್ಲಿ ಶ್ರೀ ಸ್ವಾಮಿ ಅಯ್ಯಪ್ಪ ಮಾಲಾಧಾರಿಗಳಿಂದ ಇರುಮುಡಿ ಪೂಜಾ ಮಹೋತ್ಸವ ಕಾರ್ಯಕ್ರಮ ಜರುಗಿತು.

ಸುಮಾರು 35 ವರ್ಷಗಳಿಂದ ಈ ಕಾರ್ಯಕ್ರಮ ನಡೆಯುತ್ತ ಬರುತ್ತಿದೆ. ಅಶ್ವಿನಿ ಗುರುಸ್ವಾಮಿ ನೇತೃತ್ವದಲ್ಲಿ ಅಯ್ಯಪ್ಪ ಸ್ವಾಮಿ ಪೂಜೆಗಾಗಿ ಸುಂದರ ಮಂಟಪ ನಿರ್ಮಿಸಲಾಗಿತ್ತು.ಮಂಟಪದ ಎಡ



ಬದಿಯಲ್ಲಿ ಸಂಕಷ್ಟ ನಿವಾರಕ ಗಣೇಶ, ಶ್ರೀ ಧರ್ಮಶಾಸ್ತ್ರ ಅಯ್ಯಪ್ಪಸ್ವಾಮಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು.

ಇರುಮುಡಿ ಹೊತ್ತಾಗ 18 ಮೆಟ್ಟಿಲು ಏರಿಯೇ ಸಾಗಬೇಕು ಹೀಗಾಗಿ ಅಯ್ಯಪ್ಪಸ್ವಾಮಿ ಮುಂಭಾಗದಲ್ಲಿ 18 ನಂದಾದೀಪ ಬೆಳಗಿಸಿ ಹೂ, ಹಣ್ಣು, ಕರ್ಪುರಗಳಿಂದ ವಿಶೇಷವಾದ ಪೂಜೆ ಸಲ್ಲಿಸಲಾಯಿತು. ನಗರದಿಂದ ಪ್ರತಿ ವರ್ಷ ಅನೇಕ ಭಕ್ತರು ಹರಕೆ ಹೊತ್ತು ಅಯ್ಯಪ್ಪಸ್ವಾಮಿ ದರ್ಶನಕ್ಕೆ ತೆರಳುತ್ತಾರೆ. ಕೆಲ ಭಕ್ತರಿಂದ ತುಪ್ಪದ ಕಾಯಿಯನ್ನು ತುಂಬಿಸಿ ಅಯ್ಯಪ್ಪ ಸ್ವಾಮಿಗಳ ಜೊತೆಯಲ್ಲಿ ಕಳುಹಿಸಲಾಗುತ್ತದೆ.

ಭಜನೆ ಮತ್ತು ಅಯ್ಯಪ್ಪ ಸ್ವಾಮಿಯ ಹಾಡುಗಳ ಮೂಲಕ ವಿಶೇಷ ಪೂಜೆ ಸಲ್ಲಿಸಿದರು. ಸಂತೋಷ ಪತ್ತಾರ ಮತ್ತು ಅಶೋಕ ಸುಗಂಧಿ ಅಯ್ಯಪ್ಪನ ಭಜನೆ ಕಾರ್ಯಕ್ರಮ ನಡೆಸಿಕೊಟ್ಟರು. ಮತ್ತು ಉತ್ತರ ಕರ್ನಾಟಕ ಕರವೇ ಅಧ್ಯಕ್ಷ ಶರಣು ಬಿ ಗದ್ದುಗೆ ಬೇಟಿ ನೀಡಿ ದರ್ಶನ ಪಡೆದರು. ಮಹಾ ಅನ್ನಸಂತರ್ಪಣೆ ಜರುಗಿತು.

ಬಳಿಕ ಮಾಲಾದಾರಿಗಳು ವಾಹನದ ಮೂಲಕ ಶಬರಿ ಮಲೆಗೆ ತೆರಳಿದರು. ಹನುಮ ಮಾಲಾಧಾರಿಗಳು ಸಹಪಾಲ್ಗೊಂಡು ಭಕ್ತರ ಸೇವೆಯಲ್ಲಿ ತೊಡಗಿ–ಕೊಂಡಿದ್ದರು. ಅಯ್ಯಪ್ಪಸ್ವಾಮಿ ಮಾಲಾಧಾರಿಗಳು ಸುಮಾರು 48 ದಿನಗಳ ಕಾಲ ಗಾಳಿ, ಚಳಿ, ಮಳೆ ಎನ್ನದೇ ದಿನನಿತ್ಯ ಸ್ವಾಮಿಯನ್ನು ಭಕ್ತಿಯಿಂದ ಭಜಿಸುತ್ತಾರೆ. ಜನವರಿ ತಿಂಗಳಲ್ಲಿ ಮಕರ ಸಂಕ್ರಾತಿಯ ಸಮಯದಲ್ಲಿ ಅಯ್ಯಪ್ಪಸ್ವಾಮಿ ದರ್ಶನಕ್ಕಾಗಿ ಇರುಮುಡಿಯನ್ನು ಹೊತ್ತು ಶಬರಿಮಲೈಗೆ ತೆರಳಿ ಸ್ವಾಮಿ ಅಯ್ಯಪ್ಪನ ದರ್ಶನ ಪಡೆ–ಯುತ್ತಾರೆ. ಇದರಿಂದ ಸ್ವಾಮಿ ಅಯ್ಯಪ್ಪನ ಕೃಪೆಗೆ ಪಾತ್ರರಾಗುತ್ತಾರೆ ಎಂಬ ನಂಬಿಕೆಯಿಂದ ಮಾಲೆಯನ್ನು ಧರಿಸಿ ಸ್ವಾಮಿಯ ದರ್ಶನಕ್ಕಾಗಿ ತೆರಳುತ್ತಾರೆ ಎಂದು ಅಶ್ವಿನಿ ಗುರುಸ್ವಾಮಿಗಳು ಹೇಳಿದರು.

# ಬಸ್ ಪ್ರಯಾಣ ದರ ಹಿಂಪಡೆಯದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ

ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ.08: ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಜಿಲ್ಲಾ ಸಮಿತಿ ಬೀದರ ವತಿಯಿಂದ ಕರ್ನಾಟಕ ಸರ್ಕಾರವು ಬಸ್ ಪ್ರಯಾಣ ದರ ಶೇ.15% ರಷ್ಟು ಹೆಚ್ಚಿಸಿರುವುದರಿಂದ ಸಾಮಾನ್ಯ ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ರಾಜ್ಯದ ನಾಗರಿಕರು ಕೆಲಸ ಇಲ್ಲದ ಕಾರಣ ಕುಟುಂಬ ನಿರ್ವಹಣೆ ಮಕ್ಕಳ ಶಿಕ್ಷಣ ಹಾಗೂ ಇತರೆ ಖರ್ಚು ವೆಚ್ಚಕ್ಕಾಗಿ ಹಣ ಇಲ್ಲದ ಕಾರಣ ಈಗಾಗಲೇ ಸಂಕಷ್ಟದಲ್ಲಿರುವಾಗ ರಾಜ್ಯ ಸರ್ಕಾರ ಬಸ್ ಪ್ರಯಾಣ ದರ



–ಹೆಚ್ಚಿಸಿರುವುದರಿಂದ ಕೂಲಿ ಕಾರ್ಮಿಕರಿಗೆ, ಶಾಲಾ ಮಕ್ಕಳಿಗೆ ಕಾಲೇಜ್ ವಿದ್ಯಾರ್ಥಿಗಳು/ ವಿದ್ಯಾರ್ಥಿನಿಯರಿಗೆ ಪ್ರಯಾಣ ಮಾಡುವುದಕ್ಕೆ ಹೆಚ್ಚಿನ ಬಸ್ ಪ್ರಯಾಣದರ ಕೊಡಬೇಕಾಗವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಬಸ್ ಪ್ರಯಾಣ ದರ ಹೆಚ್ಚಿಸಿರುವುದಕ್ಕೆ ಕರ್ನಾಟಕ ರಕ್ಷಣಾ ವೇದಿಕೆ (ಪ್ರದೀಣ ಶೆಟ್ಟಿ ಬಣ) ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಹಾಗೂ ಕೂಡಲೇ ಹೆಚ್ಚಿಸಿರುವ ಬಸ್ ಪ್ರಯಾಣ ದರವನ್ನು ಕೂಡಲೇ ಹಿಂಪಡೆಯಬೇಕೆಂದು ಈ ಮನವಿ ಪತ್ರದ ಮೂಲಕ ತಮ್ಮಲ್ಲಿ ಒತ್ತಾಯಿಸುತ್ತೇವೆ. 15 ದಿವಸಗಳಲ್ಲಿ ಸದರಿ ಹೆಚ್ಚಿಸಿರುವ ಬಸ್ ಪ್ರಯಾಣ ದರವನ್ನು ಹಿಂಪಡೆಯದಿದ್ದರೆ ರಾಜ್ಯದಾದ್ಯಂತ ಉಗ್ರವಾದ ಹೋರಾಟ ಮಾಡಲಾಗುವುದಾಗಿ ಎಚ್ಚರಿಸಿ ಇಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗಿಯ ನಿಯಂತ್ರಣಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರಾದ ಪೀಟರ್ ಚಿಟಗುಪ್ಪಾ, ಜಿಲ್ಲಾ ಉಪಾಧ್ಯಕ್ಷರಾದ ಪ್ರಲ್ಹಾದ ಚಿಟ್ಟಾ, ಪ್ರಧಾನ ಕಾರ್ಯದರ್ಶಿಗಳಾದ ರಮೇಶ್ ಮರ್ಜಾಪೂರ, ಸಂಚಾಲಕರಾದ ಬಸವರಾಜ ನಂದಗಾಂವ, ಮೋಜಸ್ ಆಣದೂರೆ, ನಿಲೇಶ ರಾಠೋಡ, ಶಿವಕುಮಾರ್ ಮಾಮುಡಗಿ, ರಾಜಗೋಂಡ ಆಣದೂರ ವಾಡಿ, ಸಚೀನ ಕುದುರೆ, ರಾಜಕುಮಾರ್ ಜಾಧವ್ ಇದ್ದರು.

# ಜ.11 ಶಿಕ್ಷಣ ಸಂಪುಟ 1-2ರ ಲೋಕಾರ್ಪಣೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.8– ಬಿ.ವಿ.ವಿ.ಸಂಘದ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ–ಪ್ರಸಾರಾಂಗ,ಮಾನವಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಬಾಗಲಕೋಟೆ ಇವರ ಸಹಯೋಗದಲ್ಲಿ ಶಿಕ್ಷಣ ಇಲಾಖೆಯ ವಿಶ್ರಾಂತ ಉಪನಿರ್ದೇಶಕ ಸಿದ್ದರಾಮ ಮನಹಳ್ಳಿ ಸಂಪಾದಿತ ಬಾಗಲಕೋಟೆ ಜಿಲ್ಲೆ ; ಶಿಕ್ಷಣ ಸಂಪುಟ 1 ಮತ್ತು 2 ಕೃತಿಗಳ ಸಮರ್ಪಣೆ ಕಾರ್ಯಕ್ರಮ ಜ. 11 ಶನಿವಾರ ಬೆಳಿಗ್ಗೆ 10 ಗಂಟೆಗೆ ಬಿ.ವಿ.ವಿ.ಸಂಘದ ಮಿನಿ ಸಭಾಭವನದಲ್ಲಿ ಜರುಗಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ.ವಿ.ವಿ.ಸಂಘದ ಕಾಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ವಹಿಸುವರು. ದಾರವಾಡದ ಖ್ಯಾತ ಶಿಕ್ಷಣ ತಜ್ಞ ಶಿವಶಂಕರ ಹಿರೇಮಠ ಕೃತಿಗಳ ಸಮರ್ಪಣೆ ಮಾಡುವರು. ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಉಪಸ್ಥಿತರಿರುವರು.

ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದ ವಿಶ್ರಾಂತ ಉಪನಿರ್ದೇಶಕ ಡಾ.ವಿ.ಎ.ಬೆಕನಾಳ ಕೃತಿ ಪರಿಚಯಿಸುವರು. ಸಂಸ್ಕೃತ ವಿದ್ವಾಂಸ ಪಂ.ಬಿಂದುಮಾಧವಾಚಾರ್ಯ ನಾಗಸಂಪಿಗೆ ಅಭಿನಂದನ ನುಡಿ ಸಲ್ಲಿಸುವರು. ಕಾರ್ಯಕ್ರಮದಲ್ಲಿ ಸಂಘದ ಆಡಳಿತಾಧಿಕಾರಿ ಡಾ. ವಿ.ಎಸ್.ಕಟಗಿಹಳ್ಳಿಮಠ, ಪ್ರೊ. ವಿ.ಆರ್.ಶಿರೋಳ, ಪ್ರಸಾರಂಗ ನಿದೇಶಕ ಪಿ.ಎನ್.ಸಿಂಪಿ ಹಾಗೂ ಸಂಘದ ಸದಸ್ಯರುಗಳು ಭಾಗವಹಿಸುವರು ಎಂದು ಬಿ.ಎಚ್.ಆರ್.ಡಿ ನಿರ್ದೇಶಕ ಎಸ್. ಆರ್ ಮನಹಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾಲ್ಯವಿವಾಹ ತಡೆಗಟ್ಟಲು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಲು ಸೂಚನೆ

ಮಲ್ಲಮ ನುಡಿ ವಾರ್ತೆ

ಕಲಬುರಗಿ,ಜ.8:ಇತ್ತೀಚಿನ ದಿನಗಳಲ್ಲಿ ಬಾಲ್ಯವಿವಾಹಗಳ ಸಂಖ್ಯೆ ಹಾಗೂ ಪೋಕ್ಸೊ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದನ್ನು ತಡೆಗಟ್ಟಲು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕೆಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಅಪರ್ಣಾ ಎಂ. ಕೊಳ್ಳಾ ಅವರು ಸೂಚಿಸಿದರು. ಅವರು ಮಂಗಳವಾರ ಆರ್.ಟಿ.ಇ–2009, ಅನುಷ್ಠಾನ ಮತ್ತು "ಮಕ್ಕಳ ಶಿಕ್ಷಣದ ಜೊತೆಗಿದೆ ರಕ್ಷಣೆ" ಕುರಿತು ಕಲಬುರಗಿ ಸರ್ಕಾರಿ ಬಾಲಕಿಯರ ಬಾಲಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಕ್ಕಳ ರಕ್ಷಣೆಯಲ್ಲಿ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ಮಕ್ಕಳ ರಕ್ಷಣೆಯಲ್ಲಿ ತಮ್ಮ ಎರಡು ನಿಮಿಷಗಳ ಕಾಲಾವಕಾಶ ಒಂದು ಮಗುವಿನ ಜೀವನ ಬದಲಾವಣೆಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದರು.



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀನಿವಾಸ ನವಲೆ ಮಾತನಾಡಿ, ಒಂದು ಮಗುವಿನ ಜನ್ಮ ದಿನಾಂಕದ ದಾಖಲಾತಿ ನೀಡುವಲ್ಲಿ ಅಥವಾ ಶಾಲಾ ದೃಢೀಕರಣ ಅಥವಾ ಪ್ರಕರಣಗಳಿಗೆ ಸಾಕ್ಷಿಗಳನ್ನು ಕಲೆ ಹಾಕುವಲ್ಲಿ ತಮ್ಮ ಪಾತ್ರ ಮುಖ್ಯವಾಗಿದೆ ಎಂದರು.

ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಮಕ್ಕಳ ರಕ್ಷಣೆಗಾಗಿ ಎಲ್ಲಾ ಇಲಾಖೆಗಳು ಸಹಭಾಗೀತ್ವದಿಂದ ಕಾರ್ಯನಿರ್ವಹಿಸಬೇಕು. ಬಾಲ್ಯವಿವಾಹಗಳನ್ನು ತಡೆಯಲು ಪ್ರತಿ ತಿಂಗಳು ಒಂದು ಇಲಾಖೆಗೆ ಜವಾಬ್ದಾರಿಯನ್ನು ವಹಿಸಿ ಸಹಭಾಗಿತ್ವದೊಂದಿಗೆ ಕಾರ್ಯನಿರ್ವಹಿಸಿ ಬಾಲ್ಯವಿವಾಹ ತಡೆಯುವಲ್ಲಿ ಯಶಸ್ವಿಯಾಗಬೇಕು. ಬಾಲ್ಯವಿವಾಹಮುಕ್ತ ಜಿಲ್ಲೆಯನ್ನಾಗಿ ಮಾಡುವಲ್ಲಿ ಎಲ್ಲರೂ ಕಾರ್ಯಪ್ರವೃತ್ತರಾಗಬೇಕು ಎಂದರು.

ಕಲಬುರಗಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಹೇಶ ಮೇಘಣ್ಣನವರ್ ಹಾಗೂ ಕಲಬುರಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಂಜುಳಾ ವಿ. ಪಾಟೀಲ ಸೇರಿದಂತೆ ಜಿಲ್ಲೆಯ ಬಿ.ಆರ್.ಸಿ, ಸಿ.ಆರ್.ಸಿ ಹಾಗೂ ಮುಖ್ಯೋಪಾಧ್ಯಯರು ಹಾಗೂ ಎಸ್.ಜೆ.ಪಿ.ಯು ಘಟಕದ ಪೊಲೀಸ್ ಸಿಬ್ಬಂದಿಗಳು ಸೇರಿ ಒಟ್ಟು 150 ಹೆಚ್ಚು ಜನರು ಉಪಸ್ಥಿತರಿದ್ದರು.

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy, Office Ph. No: +91 9449732000.